ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 13
ಮಾರ್ಚ್ 25, 2012

ಪುಟ 16 ರೂ. 5/-







ರೈಲ್ವೆ ಬಜೆಟ್ :

ಜನರ ಬೆನ್ನ ಮೇಲೆ ದರ ಏರಿಕೆಯ ಹೊರೆ

- ರಾಜಿನಾಮೆ ಎಂಬ ಗಿಮಿಕ್
- ಯೋಜನೆಯಲ್ಲಿ ಕರ್ನಾಟಕಕ್ಕೂ ಅನ್ಯಾಯ



ಭ್ರಷ್ಟ ಬಿಜೆಪಿಯೊಳಗಿನ ದುಷ್ಟ ಬೇಗುದಿಗಳು



'ಮಡೆಸ್ನಾನ -ಪಂಕ್ತಿಭೇದ ಮಾನವ ಘನತೆಗೆ ಮಾಡುವ ಅಪಚಾರ'

'ಸರ್ಕಾರ ಹೋರಾಟವನ್ನು ಕಡೆಗಣಿಸಬಾರದು'

ಬೆಳ್ತಂಗಡಿ : ಅಮಾಯಕರ ಬಲಿಗೆ ನಕ್ಸಲ್ ವಿರೋಧಿ ಪಡೆಯ ದೌರ್ಜನ್ಯ



ಮೈಸೂರು : ಮರ್ಯಾದೆ ಹೆಸರಿನಲ್ಲಿ ನೀಚ ಕಗ್ಗೊಲೆ ಜಾತಿವಾದಿ ಕ್ರೌರ್ಯಕ್ಕೆ ಮತ್ತೊಂದು ಬಲಿ

ಶಾಶ್ವತ ನೀರಾವರಿ : ಮಧ್ಯ ಕರ್ನಾಟಕದ ಜೀವನ್ಮರಣದ ಪ್ರಶ್ನೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾರ್ಮಿಕ ವರ್ಗದ ಐಕ್ಯತೆ ಬೆಸೆಯುವ ದಶಕಗಳ ಯತ್ನ ಮತ್ತು ಕಾರ್ಮಿಕರ ಅಭೂತ ಪೂರ್ವ ಐಕ್ಯತೆ ಸಾಕಾರಗೊಳಿಸಿದ ಯಶಸ್ವಿ ಮುಷ್ಕರ.

1970 ರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸಂಘಟನೆಯಿಂದ ಹೊರಬಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಎಂಬ ಪ್ರತ್ಯೇಕ ಕಾರ್ಮಿಕ ಸಂಘಟನೆಯನ್ನು ರಚಿಸಿದಾಗ ಕಾರ್ಮಿಕ ವರ್ಗದ ಐಕ್ಯತೆಯನ್ನು ಮುರಿದರೆಂಬ ಅಪಪ್ರಚಾರವನ್ನು ಸಿಐಟಿಯು ಸಂಘಟನೆ ಎದುರಿಸಬೇಕಾಗಿ ಬಂದಿತ್ತು.ಆದರೆ ದುಡಿವ ವರ್ಗದ ಮಹಾನ್ ಐಕ್ಯತೆಗೆ ಶ್ರಮಿಸುತ್ತಾ ಬಂದಿರುವುದೇ ಸಿ.ಐ.ಟಿ.ಯು.

ಎಸ್. ವರಲಕ್ಷ್ಮಿ


"ಐಕ್ಯತೆ ಕೇವಲ ಐಕ್ಯತೆಗಾಗಿ ಅಲ್ಲ, ಐಕ್ಯತೆ ಎಂದರೆ ಕೇವಲ ಮುಖಂಡರ ಐಕ್ಯತೆ ಎಂದು ಅದರ ಅರ್ಥವಲ್ಲ. ಐಕ್ಯತೆ ಶೋಷಣೆಯ ವಿರುದ್ಧ ಹೋರಾಟಕ್ಕಾಗಿ ಮತ್ತು ಜನಗಳನ್ನು ಶೋಷಣಾತ್ಮಕ ಧೋರಣೆ ಮತ್ತು ಶೋಷಕ ವ್ಯವಸ್ಥೆಯ ವಿರುದ್ಧ ಒಂದು ಗೂಡಿಸಲಿಕ್ಕಾಗಿ. ಇದು ಕಾರ್ಮಿಕ ಆಂದೋಲನದ ಮುಂದಿರುವ ಅತ್ಯಂತ ಮಹತ್ವದ ಕೆಲಸ. ಕಾರ್ಮಿಕ ಸಂಘಟನೆಯನ್ನು ವರ್ಗ ಹೋರಾಟದ ದಾರಿಗೆ ತರದಿದ್ದರೆ, ಧಾಳಿಗಳು ಮತ್ತು ಧೋರಣೆಗಳನ್ನು ಒಟ್ಟಿಗೆ ಎದುರಿಸದಿದ್ದರೆ, ಹಾನಿ, ನೋವು ಕಾರ್ಮಿಕ ಆಂದೋಲನಕ್ಕಷ್ಟೇ ಅಲ್ಲ. ಪ್ರಜಾಪ್ರಭುತ್ವ ಆಂದೋಲನಕ್ಕೂ ಅದರಿಂದ ಸಂಚಕಾರವೇ." ಈ ತಿಳುವಳಿಕೆಯ ಆಧಾರದಲ್ಲಿ ಸಿಐಟಿಯು ರಚನೆಗೊಂಡಿತು. ಗೋವಾದಲ್ಲಿ ನಡೆದ ಕಾರ್ಮಿಕರ ರಾಷ್ಟ್ರೀಯ ಸಮಾವೇಶದಲ್ಲಿ ಈ ಪ್ರಶ್ನೆಯನ್ನು ಆಮೂಲಾಗ್ರವಾಗಿ ಚರ್ಚಿಸಲಾಯಿತು. ಈ ಚರ್ಚೆಗಳ ಆಧಾರದಲ್ಲಿ 1970 ಮೇ 27ರಿಂದ 31ರವರೆಗೆ ಸಮ್ಮೇಳನದಲ್ಲಿ ಸಿಐಟಿಯುವನ್ನು ಸ್ಥಾಪನೆ ಮಾಡಲಾಯಿತು.



ದಮನ ಎದುರಿಸಿ, ಐಕ್ಯತೆ ಬೆಸೆಯುವತ್ತ

ಸಿಐಟಿಯು ಸ್ಥಾಪನೆಯಾದ ಕೂಡಲೇ ಹಲವಾರು ಧಾಳಿ-ದಬ್ಬಾಳಿಕೆಗಳು ನಡೆದು ಮುಖಂಡರೆಲ್ಲರೂ ಭೂಗತರಾಗಬೇಕಾದರೂ ಎದೆಗುಂದದೆ ಮುನ್ನುಗ್ಗಿ ತನ್ನ ಕಾರ್ಯವನ್ನು ಸಂಘಟನೆ ಮುಂದುವರೆಸಿತು. ಕಾರ್ಮಿಕರನ್ನು ಹಿಂಡಿ ಬಂಡವಾಳಿಗರನ್ನು ಕೊಬ್ಬಿಸುವ ನೀತಿಗಳು, ದುಡಿಯುವ ಜನರ ಬೆವರು, ರಕ್ತ ಹಿರಿ ಸಮಾಜದ ಶ್ರೀಮಂತ ವಿಭಾಗಗಳನ್ನು ಸಂತೃಪ್ತಗೊಳಿಸುವ ನೀತಿಗಳು ಬ್ರಿಟೀಷರ ಕಾಲದಿಂದಲೂ ಚಿರಪರಿಚಿತವಾದ್ದೇ. ಸ್ವಾತಂತ್ರ್ಯ ಬಂದ ಮೇಲಾದರೋ ಈ ಧೋರಣೆಯಲ್ಲಿ ಅಲ್ಲಿ ಇಲ್ಲಿ ಕೊಂಚ ಅಲಂಕಾರಿಕ ಬದಲಾವಣೆಗಳು, ಕಾಗದದ ಮಟ್ಟದಲ್ಲಿ ಕೆಲವು ಕಾನೂನು ಬದಲಾವಣೆಗಳು ಮತ್ತು ಕಾರ್ಮಿಕರ ವರ್ಗದ ಹೋರಾಟಗಳಿಂದಾದ ಬದಲಾವಣೆಗಳೂ ಇಂತಹವುಗಳನ್ನು ಬಿಟ್ಟರೆ ಸರ್ಕಾರದ ಧೋರಣೆಯಲ್ಲಿ ಮೂಲಭೂತ ಬದಲಾವಣೆಯೇನೂ ಬರಲೇ ಇಲ್ಲ. ಕಾರ್ಮಿಕ ವರ್ಗ ತನ್ನ ಹೋರಾಟದ ಬಾವುಟ ಎತ್ತಿ ಬೀದಿಗಿಳಿಯುವುದು ಅನಿವಾರ್ಯವೇ ಆಯಿತು.

ಅಂದು ಕಾರ್ಮಿಕರ ಬದುಕಿನ ಪ್ರಶ್ನೆಗಳ ಮೇಲೆ ಮತ್ತು ತುರ್ತು ಪರಿಸ್ಥಿತಿ ಆಳ್ವಿಕೆಯ ವಿರುದ್ಧ ಕಾರ್ಮಿಕ ಸಂಘಗಳ ಸಂಯುಕ್ತ ಮಂಡಳಿ(ಯುಸಿಟಿಯು)ಯ ರಚನೆಯಲ್ಲಿ ಮುತುವರ್ಜಿ ವಹಿಸಲಾಯಿತು. ಈ ಸಂಯುಕ್ತ ಮಂಡಳಿ ಹೋರಾಟಕ್ಕೆ ಕರೆ ನೀಡಿತು. ಈ ಸಮಿತಿಯು ಮುಖಾಂತರ ತುಟ್ಟಿಭತ್ಯೆ ಏರಿಕೆಯನ್ನು ನೇರವಾಗಿ ಕಾರ್ಮಿಕರಿಗೆ ಕೊಡದೆ ಅದನ್ನು ಭವಿಷ್ಯ ನಿಧಿಯಲ್ಲಿ ಠೇವಣಿ ಇಡುವ ಯೋಜನೆ, ಇನ್ನೊಂದು ಡಾ॥ ಸುಖಮಯ ಚಕ್ರವರ್ತಿ ಸಮಿತಿಯ ವರದಿಯ ಆಧರಿಸಿ ಸರಕಾರ ಹೇರಲು ಬಯಸಿದ ವೇತನ ಸ್ತಂಭನ ನೀತಿಯನ್ನು ವಿರೋಧಿಸಿ ದೇಶವ್ಯಾಪಿ ಹೋರಾಟಗಳನ್ನು 1971ರಲ್ಲಿ ನಡೆಸಲಾಯಿತು. 1974ರಲ್ಲಿ ರೈಲ್ವೆ ಕಾರ್ಮಿಕರ 20 ದಿನಗಳ ಐತಿಹಾಸಿಕ ಮುಷ್ಕರ ಎಲ್ಲ ರೀತಿಯ ದೌರ್ಜನ್ಯಕಾರಿ ಕ್ರಮಗಳನ್ನು, ದಮನಗಳನ್ನು ಮತ್ತು ಅತ್ಯಾಚಾರಗಳನ್ನು ಎದುರಿಸಿ ನಡೆಯಿತು. ಈ ಹೋರಾಟದಲ್ಲಿ ದಬ್ಬಾಳಿಕೆಯನ್ನು ಎದುರಿಸುವಲ್ಲಿ ಸಿಐಟಿಯು ಮುಂಚೂಣಿಯಲ್ಲಿ ನಿಂತು ಐಕ್ಯ ಹೋರಾಟದ ಯಶಸ್ಸಿಗೆ ಶ್ರಮಿಸಿತು.



ತುರ್ತು ಪರಿಸ್ಥಿತಿಯ ಸಮಯದಲ್ಲಿ ಸರ್ಕಾರ ಬೋನಸ್ಸಿನ ಕನಿಷ್ಠ ಪ್ರಮಾಣವನ್ನು 8.33% ರಿಂದ 4% ಕ್ಕೆ ಇಳಿಸುವ ಮಸೂದೆಯನ್ನು ಸಂಸತ್ತಿನಲ್ಲಿ ತಂದಿರುವುದನ್ನು ವಿರೋಧಿಸಿ ಜಯ ಪ್ರಕಾಶ ನಾರಾಯಣರು ಮುಂಚೂಣಿಯಲ್ಲಿದ್ದು ನಡೆದ ವಿಶಾಲ ಸ್ವರೂಪದ ಚಳುವಳಿಗೆ ಸಿಐಟಿಯು ಸಕ್ರಿಯವಾಗಿ ಬೆಂಬಲಿಸಿತು. ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಮುಷ್ಕರಗಳನ್ನು ನಿಷೇಧಿಸಲಾಗಿತ್ತು. ಕಾನೂನು ಬದ್ಧ ಕಾರ್ಮಿಕ ಸಂಘಟನೆಯ ಚಟುವಟಿಕೆಗಳಿಗೂ ಅನುಮತಿಯಿರಲಿಲ್ಲ. ಸಿಐಟಿಯು ಕಾರ್ಮಿಕ ಆಂದೋಲನವನ್ನು ದಮನ ಮಾಡುವ ಕ್ರಮಗಳ ವಿರುದ್ಧ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗೆ ದೂರು ದಾಖಲಿಸಿತು.

ಕಾರ್ಮಿಕ ವಿರೋಧಿಯಾದ ಕೈಗಾರಿಕಾ ಸಂಬಂಧಗಳ ಮಸೂದೆಯ ವಿರುದ್ಧ 1977ರಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳನ್ನು ಅಂದರೆ ಐಎನ್‌ಟಿಯುಸಿ, ಬಿಎಂಎಸ್ ಮತ್ತು ಎಐಟಿಯುಸಿಗಳು ಸೇರಿದ್ದ ಹೆಚ್ಚು ವಿಶಾಲವಾದ ಐಕ್ಯ ವೇದಿಕೆಯನ್ನು ರಚಿಸಿ ತೀವ್ರ ಪ್ರತಿರೋಧ ರೂಪಿಸಿಲಾಯಿತು. ನಂತರ ಆ ಮಸೂದೆ ಬಿದ್ದು ಹೋಯಿತು.

1981 ರಲ್ಲಿ ಮುಂಬೈನಲ್ಲಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಬೆಸೆಯುವ ದಿಕ್ಕಿನಲ್ಲಿ ಸಮಾವೇಶವನ್ನು ನಡೆಸಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಪ್ರಚಾರಾಂದೋಲನ ದೇಶವ್ಯಾಪಿ ನಡೆಸಿ ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ದೊಡ್ಡ ಯಶಸ್ಸು ಗಳಿಸುವುದು ಸಾಧ್ಯವಾಯಿತು. 19 ಜನವರಿ 1982ರಂದು . ರಾಷ್ಟ್ರೀಯ ಪ್ರಚಾರಾಂದೋಲನ ಸಮಿತಿ (ಎನ್‌ಸಿಸಿ) ಕರೆಯ ಮೇರೆಗೆ ನಡೆದ ಐತಿಹಾಸಿಕ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಹೆಚ್ಚು ಗಮನಾರ್ಹವಾದದ್ದು. ಇದು ಭಾರತೀಯ ಕಾರ್ಮಿಕ ಆಂದೋಲನದ ಇತಿಹಾಸದ ಪುಟಗಳಲ್ಲಿ ಕಾರ್ಮಿಕ ವರ್ಗದ ಮೊದಲ ಬಲಿಷ್ಠ ರಾಷ್ಟ್ರವ್ಯಾಪಿ ಕೈಗಾರಿಕಾ ಕಾರ್ಯಾಚರಣೆ ಎಂದು ದಾಖಲಾಯಿತು.

"ಐಕ್ಯ ಮುಷ್ಕರದ ಕಾರ್ಯಾಚರಣೆಗಾಗಿ ಕಾರ್ಮಿಕರನ್ನು ಅಭಿನಂದಿಸುತ್ತೇವೆ. ವಿವಿಧ ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯ ಸರ್ಕಾರಗಳು ರಾಷ್ಟ್ರೀಯ ಭದ್ರತಾ ಕಾನೂನಿನ ಅಡಿಯಲ್ಲಿ ನಮ್ಮ 50 ಸಾವಿರ ಕಾರ್ಮಿಕರನ್ನು ಬಂಧಿಸಿ, ಪೋಲೀಸ್ ಲಾಠಿ ಪ್ರಹಾರ ನಡೆಸಿ, ಗೋಲಿಬಾರು ಮತ್ತು ಗೂಂಡಾದಾಳಿಗಳಲ್ಲಿ ಹಲವು ಕಾರ್ಮಿಕರನ್ನು ಸಾಯಿಸಿ ಬರ್ಬರ ದಮನಕಾರಿ ದಾಳಿಯನ್ನು ಹರಿಯಬಿಟ್ಟರೂ ಲಕ್ಷಾಂತರ ಕಾರ್ಮಿಕರು ಮುಷ್ಕರ ನಡೆಸಿ ಕಾರ್ಖಾನೆಗಳಿಂದ ಹೊರಬಂದಿದ್ದಾರೆ. ಈ ಮೂಲಕ ದೇಶದ ಕಾರ್ಮಿಕ ಆಂದೋಲನದ ಪುಟಗಳಲ್ಲಿ ಇತಿಹಾಸ ನಿರ್ಮಿಸಿದ್ದಾರೆ." ಇದು ಆ ಸಂದರ್ಭದಲ್ಲಿ ಸಿಐಟಿಯುವಿನ ಸಂಸ್ಥಾಪಕ ಅಧ್ಯಕ್ಷ ಬಿ.ಟಿ.ರಣದಿವೆ ಮತ್ತು ಪ್ರಧಾನ ಕಾರ್ಯದರ್ಶಿ

......ಪುಟ 12 ಕ್ಕೆ

ನಾಳಿನ ಕಾರ್ಯಕ್ರಮಗಳು

ಮಾರ್ಚ್ 19, 2012 – ದೇವದಾಸಿ ಸ್ವಯಂ ಸೇವಕಿಯರ ಹೋರಾಟ – ಬೆಂಗಳೂರು.

ಮಾರ್ಚ್ 22, 2012 – ವಿಶ್ವ ಜಲ ದಿನಾಚರಣೆ, ನೀರಿನ ಅಭಾವ ಖಾಸಗೀಕರಣದ ವಿರುದ್ಧ ಸಿಪಿಐ(ಎಂ)ನಿಂದ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಪ್ರತಿಭಟನೆ.

ಮಾರ್ಚ್ 26, 2012 – ಮಡೆಸ್ನಾನ, ಪಂಕ್ತಿಬೇಧ ವಿರೋಧಿಸಿ ಮಠಾಧೀಶರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿ.

ಏಪ್ರಿಲ್ 4 ರಿಂದ 9, 2012 – ಸಿಪಿಐ(ಎಂ) ಪಕ್ಷದ ಅಖಿಲ ಭಾರತ ಮಹಾಧಿವೇಶನ, ಕೇರಳದ ಕೋಝಿಕೋಡ್‌ನಲ್ಲಿ.

ಏಪ್ರಿಲ್ 9, 2012 – ಮಹಾಧಿವೇಶನದ ಬೃಹತ್ ರ್‍ಯಾಲಿ, ಕೋಝಿಕೋಡ್.

ಏಪ್ರಿಲ್ 17 ರಿಂದ 19, 2012– ಸಿಐಟಿಯು ವತಿಯಿಂದ ಬೆಂಗಳೂರಿನಲ್ಲಿ ನಿರಂತರ ಧರಣಿ. 19 ರಂದು ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿಯೂ.

ಮೇ 21, 2012 – ಭೂಮಿ, ಮನೆ-ನಿವೇಶನಕ್ಕಾಗಿ ರಾಜ್ಯ ಮಟ್ಟದ ಬೃಹತ್ "ಮಹಾಧರಣಿ" ಆರಂಭ – ಬೆಂಗಳೂರು.

ಏಪ್ರೀಲ್1,– ಡಿವೈಎಫ್ಐ ಅಖಿಲ ಭಾರತ ಸಮ್ಮೇಳನ ಸ್ವಾಗತ ಸಮಿತಿ ರಚನಾ ಸಭೆ ಸೆನೆಟ್ ಹಾಲ್ ಬೆಂಗಳೂರು.

ಕನ್ನಡ ವಾರಪತ್ರಿಕೆ

ಸಂಪಾದಕೀಯ

ಜನತೆಗೆ ಬೇಕಿದೆ ಉತ್ತರ

ರಾಜ್ಯದಲ್ಲಿ ವಿವಿಧ ಪಕ್ಷಗಳ ಸಮಾವೇಶಗಳು, ಜಾಥಾಗಳು, ಉಪವಾಸ ನಿರಸನ ಇತ್ಯಾದಿಗಳ ಪ್ರಮಾಣ ಗಣನೀಯವಾಗಿ ಏರುತ್ತಿವೆ. ಹೇಳಿಕೇಳಿ ಇದು ಚುನಾವಣೆಯ ವರ್ಷ, ಅಲ್ಲದೇ ರಾಜಕೀಯ ಅನಿಶ್ಚಿತತೆ– ಈ ಸರ್ಕಾರ ಮುಂದುವರಿವ ಅತಂತ್ರ ಸ್ಥಿತಿಯಲ್ಲಿ ಮಧ್ಯಂತರ ಚುನಾವಣೆಯ ನಿರೀಕ್ಷೆಗಳೆದುರು ತಾಲೀಮು ಆರಂಭಿಸಿ ತಮ್ಮ ಶಕ್ತಿ ಕ್ರೋಡಿಕರಣಕ್ಕೆ ಇಳಿದಿರುವುದರ ಪರಿಣಾಮವೇ ಇದಾಗಿದೆ. ಹೀಗಾಗಿ ವಕೀಲರು, ಮಾಧ್ಯಮ, ಮತ್ತು ಪೋಲಿಸರ ನಡುವೆ ರಾಜೀ ಸಂಧಾನಕ್ಕಾಗಿ ಕೆ ಮಠಾಧೀಶರು ಮೂರು ತಾಸಿನ ಉಪವಾಸ ಮಾಡಿದರೆ. ಹೈದ್ರಾಬಾದ್–ಕನಾಟಕದ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕದಲ್ಲಿ ಉತ್ತರಕ್ಕಾಗಿ ಉಪವಾಸ ಮಾಡುವವರೂ ಇದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಕಾಣದ ಮಹಾ ಕ್ರಿಯಾಶೀಲತೆ, ಜನಕಾಳಜಿ ಇಂದು ಕಾಣುತ್ತಿರುವುದೇ ಸನ್ನಿವೇಶದ ವಿಶಿಷ್ಟತೆಯಾಗಿದೆ. ನಾಡಿನಲ್ಲಿ ಮೈಮುರಿದು ದುಡಿದರೂ ಉಪವಾಸ ಮಾಡದೇ ಗತ್ಯಂತರವಿಲ್ಲದ ಕೋಟ್ಯಾಂತರ ಜನರಿದ್ದರೂ, ಬರಿದಾದ ಒಡಲು ತುಂಬಿರೆಂದು, ಬದುಕು ಬವಣೆ ನೀಗಿರೆಂದು ನಿತ್ಯವೂ ಹತ್ತಾರು ಸತ್ಯಾಗ್ರಹಗಳು, ನಿರಸನಗಳು ನಡೆದರೂ ಅದು ಸುದ್ದಿಯಾಗದೇ, ಆಳುವವರ ಕಿವಿ–ಕಣ್ಣಿಗೆ ಕಾಣದೇ ಕರಗಿ ಹೋಗುವುದೇ ಸತ್ಯದ ಸಂಗತಿ. ಅಂತಹವರಲ್ಲಿ 'ಹಣ ಅಧಿಕಾರದ ಶಕ್ತಿ ರಾಜಕಾರದ ಗತ್ತುಗಾರಿಕೆ ಇಲ್ಲದ ಮೇಲೆ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗದ ಕ್ಯಾಮರಾ ಕಣ್ಣು ತೆರೆಯಬೇಕೆಂದು ಹೇಗಾದರೂ ನಿರೀಕ್ಷಿಸಲಾದೀತು? ಈ ಸ್ಥಿತಿ ನಮ್ಮ ಸಂದರ್ಭದ ಕ್ರೌರ್ಯ ಮತ್ತು ದುರಂತಗಳ ದರ್ಶನವಷ್ಟೇ.

ಇಂದು ವಿಜೃಂಬಿತ ಉಪವಾಸ ನಿರಸನ ನಡೆಸುತ್ತಿರುವವರ ಪ್ರಾಮಾಣಿಕತೆ, ಕಾಳಜಿಗಳನ್ನು ಪ್ರಶ್ನಿಸಲೇಬೇಕಾಗಿದೆ. ಹೈದ್ರಾಬಾದ್ ಕರ್ನಾಟಕವಾಗಲೀ,ಉತ್ತರ ಕರ್ನಾಟಕವಾಗಲೀ ಹಿಂದುಳಿದಿದೆ ಎಂಬುವುದರಲ್ಲಿ ಅನುಮಾನವಿಲ್ಲ. ಅದೇ ಹೊತ್ತಿನಲ್ಲಿ ವಾಸ್ತವವೆಂದರೆ ಮುಂದುವರಿದಿದೆಯೆನ್ನಲಾಗುತ್ತಿರುವ ದಕ್ಷಿಣ ಕರ್ನಾಟಕ, ಕರಾವಳಿ ಪ್ರದೇಶಗಳಲ್ಲಿಯೂ ಇಂದಿಗೂ ತೀರಾ ಹಿಂದುಳಿದ ಹತ್ತಾರು ತಾಲೂಕುಗಳೂ ಇವೆ. ಪ್ರಾದೇಶಿಕ ಅಸಮಾನತೆಯೆಂಬುದು ಬಂಡವಾಳಶಾಹಿ ಬೆಳವಣಿಗೆಯ ಅರಾಜಕ ಸೃಷ್ಟಿ. ನಿರಶನ ನಡೆಸುವವರು, ಪ್ರತ್ಯೇಕ ರಾಜ್ಯದ ಕೂಗು ಕೂಗುವವರು ಇದನ್ನು ಗಮನಿಸಲು ಸಿದ್ದರೇ ಇಲ್ಲ. ಇವರು ಪ್ರತಿನಿಧಿಸುವ ವರ್ಗ ರಾಜಕಾರಣ,ಸ್ಥಾಪಿತ ಹಿತಾಸಕ್ತಿಯೇ ಇದಕ್ಕೆ ಕಾರಣವೆಂಬುದನ್ನು ಗಮನಿಸುವ ಗೋಜಿಗೆ ಹೋಗುವುದಿಲ್ಲ! ಪ್ರಾಮಾಣಿಕತೆ ಇಲ್ಲದ ಇಂತಹವರು ನಡೆಸುವ ನಿರಶನ ಪ್ರದರ್ಶನದ ಇತ್ತೀಚಿನ ಉದಾಹರಣೆಯೆಂದರೆ ಮಾಜಿ ಸಚಿವ, ಗಣಿಗಳ್ಳರ ಕೂಟದ ಶ್ರೀ ರಾಮುಲು ಗದಗನಲ್ಲಿ 'ಉತ್ತರಕ್ಕಾಗಿ' 108 ಪ್ರಶ್ನೆಗಳನ್ನೆತ್ತಿ ಕೂತ ಎರಡು ದಿನಗಳ ಉಪವಾಸವೂ ಇದೇ ಧಾಟಿಯಲ್ಲಿರುವಂತಹದು.

ದೇಶದ ಅತ್ಯಮೂಲ್ಯ ಖನಿಖ ಸಂಪತ್ತಿನ ಎಗ್ಗಿಲ್ಲದ ಲೂಟಿಯ ಅಕ್ರಮಗಳಿಂದಾಗಿ ಗಣಿಗಳ್ಳ, ಮಾಜಿಸಚಿವ ಜನಾರ್ದನ ರೆಡ್ಡಿ ಆಂಧ್ರದ ಕೇಂದ್ರ ಕಾರಾಗೃಹ ಸೇರಿಯಾಗಿದೆ. ಸಿಬಿಐ ತನಿಖೆಯ ಉರುಳು ಕೊರಳಿಗೆ ಬಿಗಿಯಾಗುತ್ತಿದೆ. ಈ ಕಾರಣಗಳಿಂದಾಗಿಯೇ ಇಡೀ 'ಗಾಲಿ ರೆಡ್ಡಿ ಕಂಪನಿ' ಕೂಟದ ದುರ್ವ್ಯವಹಾರ, ದೌರ್ಜನ್ಯಗಳು ಹೊರ ಬಂದು ಜನರೆದುರು ಬೆತ್ತಲೆಯಾಗಿ ನಿಂತ ಮಾನಗೇಡಿ ನಾಯಕರು ಖಳನಾಯಕರಾಗಿದ್ದಾರೆ. ಇಂತಹ ಹಿನ್ನೆಲೆಂಯಿರುವ ಮಾಜಿ ಸಚಿವ ಶ್ರೀರಾಮುಲು ನಡೆಸಿದ ಉಪವಾಸ ನಿರಸನ ಅಸ್ತಿತ್ವ ಪುನಃ ಕಂಡು ಕೊಳ್ಳುವ ವಂಚನೆಗಳ ಹೆಣಗಾಟವೇ ಆಗಿದೆ.

ಶಾಸಕನಾಗಿ ಆಯ್ಕೆಯಾದ ಬಳ್ಳಾರಿಯಲ್ಲಿ ನಿಂತುಕೊಳ್ಳದೇ ಬೇರೊಂದು ಊರಿನಲ್ಲಿ ಪ್ರಶ್ನೆ ಕೇಳುವ ಉದ್ದೇಶವಾದರೂ ಏನು? ಅಲ್ಲಿ ಅಭಿವೃದ್ಧಿ ಹಿಂದುಳಿದಿರುವಿಕೆಯ ಬಗ್ಗೆ ಜನರು 1008 ಪ್ರಶ್ನೆಗಳನ್ನು ಕೇಳುವುದಿಲ್ಲವೇ? . ಬಳ್ಳಾರಿ ಜಿಲ್ಲೇಯನ್ನು ಸ್ವತಂತ್ರ ಗಣರಾಜ್ಯವೆಂದು ಕೊಂಡು ಸಾರ್ವಬೌಮರಂತೆ ಮೆರೆದ ಇದೇ ರೆಡ್ಡಿ–ಶ್ರೀರಾಮುಲು ಕಂಪನಿಗಳಿಂದಾಗಿ ಇಡೀ ಜಿಲ್ಲೆ ಸುಡುಗಾಡಾಗಿ ಹೋಗಿದೆ. ಇದರಲ್ಲಿ ಇವರದ್ದೇ ಸಿಂಹಪಾಲು. ಅಲ್ಲಿ ಬಂದ ಹಣವನ್ನು ಜಿಲ್ಲೆಯ– ರಾಜ್ಯದ ಅಭಿವೃದ್ಧಿಗೆ ಬಳಸದೇ ಸ್ವಂತ ಖಜಾನೆ ತುಂಬಿಸಿಕೊಂಡು ವಿದೇಶಗಳಿಗೆ ರಫ್ತುಮಾಡಿದ ಖದೀಮರೇ ಇಂದು ಅಭಿವೃದ್ಧಿಗಾಗಿ ಪ್ರಶ್ನೆ ಕೇಳುವುದೇ ಕ್ರೂರವ್ಯಂಗ್ಯ. ಅಂದು ಆರೋಗ್ಯ ಸಚಿವರಾಗಿದ್ದ ಶ್ರೀರಾಮುಲು ಬಳ್ಳಾರಿಯಲ್ಲಿನ ಡೆಂಗ್ಯು ಜ್ವರಕ್ಕೆ, ಸಮರ್ಪಕ ಔಷಧಗಳನ್ನೇ ಒದಗಿಸದೇ ತತ್ತರಿಸುವಂತೆ ಮಾಡಿದ ಅವರೇ ಇಂದು ಆರೋಗ್ಯ ವ್ಯವಸ್ಥೆ ದುಸ್ಥಿತಿ, ಹಿಂದುಳಿದಿರುವಿಕೆ ಬಗ್ಗೆ ಪ್ರಶ್ನಿಸುವುದು ಆತ್ಮ ವಂಚನೆಯಲ್ಲವೇ?. ತನ್ನಂತಹ ಒಬ್ಬ ಸಚಿವರು ಏನು ಮಾಡಲಾದೀತೆಂದು ಉತ್ತರಿಸುವ ಇವರು ಗಡಿ ಬದಲಾಯಿಸಲು, ಗಣಿ ಲೂಟಿಗೆ–ಮಾಫಿಯಾ ಕೃತ್ಯಗಳಿಗೆ, ಅಕ್ರಮಗಳಿಗೆ ಅಧಿಕಾರವನ್ನು ಬಳಸಿದ್ದು ಹೇಗೆ ಮರೆಯಲು ಸಾಧ್ಯ?. ಭ್ರಷ್ಟತೆ, ಅಕ್ರಮಗಳಲ್ಲಿ ಆದ್ದರಿಂದ ಗದಗನಲ್ಲಿ ನಡೆಸಿದ ನಿರಶನ ಜನರ ಕಣ್ಣಿಗೆ ಮಣ್ಣೆರೆಚಿವ ನಾಟಕ. ಮುಳುಗೆದ್ದಿರುವ ಈ ಗಣಿ ಮಾಫಿಯಾ ಮತ್ತು ಕಾನೂನಿನಿಂದ ಬಚಾವಾಗಲು, ಸಾರ್ವಜನಿಕರೆದುರು ಸಾಚಾತನ ನಟಿಸಲು ನಡೆಸಿದ ಪ್ರಯತ್ನವದು.


ಪುಟ 4ಕ್ಕೆ

ಭ್ರಷ್ಟ ಬಿಜೆಪಿಯೊಳಗಿನ ದುಷ್ಟ ಬೇಗುದಿಗಳು

ಇದು ಇನ್ನೆಷ್ಟು ದಿನಗಳು ಹೀಗೆ ಇದ್ದೀತು? ಬರೆದುಕೊಂಡದ್ದು ಬೆಂಕಿಯಂತಹ ಭಾಷಣ, ಆದರೆ ಮಾತನಾಡಿದ್ದು ಬೇಸಿಗೆಯೊಳಗಿನ ತಂಗಾಳಿ. ಕುರ್ಚಿ ಸಿಗಲಿಲ್ಲವೆಂದು ಬುಸುಗುಡುತ್ತಿದ್ದ ಯಡಿಯೂರಪ್ಪ ತಣ್ಣಗೆ 'ಸಂದೇಶ ತಲುಪಬೇಕಾದಲ್ಲಿಗೆ ತಲುಪಿಯಾಗಿದೆ'ಯೆಂದು ಹೇಳಿದ್ದಾದರೂ ಯಾಕೆ ? ಯಾರಿಗೆ ಆ ಸಂದೇಶ ?

ಸಮ ಸಮ ವೇಷ !

ಮುಖ್ಯಮಂತ್ರಿ ಕುರ್ಚಿ–ಅಧಿಕಾರ ಕೇಳಬಾರದೆಂದೂ, ಸದಾನಂದರ ತಂಟೆಗೆ ಬರಬಾರದೆಂದೂ ಪಕ್ಷ ಬಿಡುವ ಬೆದರಿಕೆಗೆ ಬಗ್ಗಲಾರೆವೆಂದೆಲ್ಲಾ ಹೈಕಮಾಂಡ್‌ಗೆ ಹೇಳಿದ್ದು ಯಡಿಯೂರಪ್ಪನವರ ಬಣವನ್ನು ಕವಲು ದಾರಿಯಲ್ಲಿ ನಿಲ್ಲಿಸಿತ್ತು. ಹೇಳಿದ್ದನ್ನೆಲ್ಲಾ ಕೇಳಿಕೊಂಡು ಶಿಸ್ತಿನ ಸಿಪಾಯಿಯೆಂದು ಸುಮ್ಮನಿರಬೇಕೇ ಅಥವಾ ಬಂಡಾಯವೆದ್ದು ಇದ್ದು ಬಿದ್ದವರನ್ನೆಲ್ಲಾ ಕೂಡಿಸಿಕೊಂಡು ಹೊಸ ಪಕ್ಷ ಕಟ್ಟಿ ಚೆಡ್ಡಿ ಪಡೆಗೆ ಸೆಡ್ಡು ಹೊಡೆದು ಶಕ್ತಿ ಪಣಕ್ಕಿಡಬೇಕೆ ಎಂಬ ಗೊಂದಲದಲ್ಲಿ ಆಯ್ಕೆ ಮಾಡಿಕೊಂಡದ್ದು ಹುಬ್ಬಳ್ಳಿ ಸಮಾವೇಶವನ್ನು.



ಹಾಗೆ ನೋಡಿದರೆ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಈ 'ಸಾಧಕ'ನಿಗೆ ಸನ್ಮಾನವನ್ನು ಬೆಂಬಲಿಗರ ಮೂಲಕ ವ್ಯವಸ್ಥೆ ಮಾಡಿದ್ದೇ ಶಕ್ತಿ ಪ್ರದರ್ಶನಕ್ಕೆ ಎಂಬುವುದಕ್ಕೆ ಅನುಮಾನವಿರಲಿಲ್ಲ. ಆ ಸಮಾವೇಶದಲ್ಲೇ ಮೇಲಿನ ಮಾತುಗಳನ್ನು ಅವರು ಉಲಿದದ್ದು.

ಇದಕ್ಕೊಂದು ಹಿನ್ನೆಲೆಯೂ ಇದೆ. ಕಳೆದ ವಾರ ಗಣಿ ಹಗರಣದ ಆರೋಪದ ಪಟ್ಟಿಯನ್ನು ಕೈ ಬಿಡುವಂತೆ ಲೋಕಾಯುಕ್ತಕ್ಕೆ ರಾಜ್ಯ ಹೈಕೋರ್ಟ್ ತೀರ್ಪನ್ನು ನೀಡಿತಲ್ಲ, ಇನ್ನೂ ಎಂಟು ಪ್ರಕರಣಗಳಿದ್ದರೂ ಅದನ್ನೇ ವಿಜಯೋತ್ಸವವನ್ನಾಗಿ ಆಚರಿಸಿದರಲ್ಲ. 'ಎಲ್ಲಾ ಆರೋಪಗಳಿಂದ ಮುಕ್ತರಾಗಿ ಬನ್ನಿ' ಎಂದು ಗಡ್ಕರಿ ಹೇಳಿ ಹೋಗಿದ್ದರಲ್ಲವೇ. ಅದನ್ನೇ ಎಚ್ಚರಿಸುವ ಉತ್ಸಾಹದಲ್ಲಿ ಈ ತಕಥಿಮಿತ! .

ಅಂತೂ ಹೈಕಮಾಂಡ್‌ನ ಖಡಕ್ ಮಾತುಗಳನ್ನು ಕೇಳಿಯಾದ ಮೇಲೆ ತಮ್ಮ ಅಸ್ತಿತ್ವ ತೋರಲು ಸನ್ಮಾನವೋ, ಸಮಾ'ವೇಷ'ವನ್ನೋ ನಡೆಸಲೇಬೇಕಾದ ಒತ್ತಡದಲ್ಲಿ ಬಿಎಸ್ವೈ ಬಣ ಸಿಲುಕಿತ್ತು. ,ಹೊರ ನಡೆಯುವ ಗೊಂದಲದಲ್ಲಿರುವಾಗಲೇ ಹೈಕಮಾಂಡ್‌ನ ಹಿತಕರ(?) ರಾಜೀ ಸಂದೇಶ ಯಡಿಯೂರಪ್ಪನವರು ಬರೆದಿಟ್ಟುಕೊಂಡಿದ್ದ ವಿದಾಯದ ಭಾಷಣಕ್ಕೆ ವಿರಾಮ ಹೇಳಿಸಿತ್ತು.

ಬಿಸಿಲ್ಕುದುರೆಯ ಬೆನ್ನು ಹತ್ತಿ


ಇಲ್ಲಿ ಚಿಗುರಿದ ಆಶೆಯ ಬಿಸಿಲು ಕುದುರೆ ಹತ್ತಿ ದೆಹಲಿ ತಲುಪಿ ಹೈ– ಕರೆ ನಿರೀಕ್ಷೆಯಲ್ಲಿ ಕಾದು ಕುಳಿತಿದ್ದಾರೆ ಮಾಜಿಗಳು. 'ತಮ್ಮನ್ನು ಪುನಃ ಸಿ.ಎಂ. ಮಾಡಲೇಬೇಕು. ಒಂದು ಲಕ್ಷ ಕೋಟಿ ರೂ.ಗಳ ಬಜೆಟ್‌ನ್ನು ತಾವೇ ಮಂಡಿಸಬೇಕು, ಯಾವುದೇ ಕಾರಣಕ್ಕೆ ಸದಾನಂದಗೌಡರು ಮಾಡಬಾರದು, ಅದರ ಜನಪ್ರಿಯತೆ ಅವರಿಗೆ ಸಿಗಬಾರದು ಅರ್ಥಾತ್ ಈಗಾಗಲೇ ಹೋಗಿರುವ ಮಾನ ಇದ'ರಿಂದ'ಲಾದ'ರ'ೂ ತುಂಬಿಕೊಳ್ಳಬೇಕು', ಇವು ಮೊದಲ ಸುತ್ತಿನ ಬೇಡಿಕೆಗಳು . ಇದಾಗದೇ ಹೋದಲ್ಲಿ ತಮ್ಮನ್ನು ಪಕ್ಷದ ರಾಜ್ಯಾಧ್ಯಕ್ಷನನ್ನಾಗಿಸಲಿ. ಅಂದರೆ ಮುಂದಿನ ಚುನಾವಣೆಯಲ್ಲಿ ಟಿಕೇಟ್ ನೀಡಿಕೆಯ ಹಿಡಿತದ ಪ್ರಧಾನ ಪಾಲು ತಮ್ಮದೇ. ಗೆದ್ದರೆ(ರೆ) ಆಗಲಾದರೂ ತಾನೇ ಸಿ.ಎಂ. ಆಗಬಹುದಲ್ಲ ! ಇವು ಮೊದಲ ಸುತ್ತು ಫೇಲಾದರೆ ಎರಡನೇ ಸುತ್ತಿನ ಕೇಳಿಕೆಗಳು. ದೆಹಲಿಯಲ್ಲಿ ಬಿಡಾರ ಹೂಡಿದವರ ಬೇಡಿಕೆಗಳು ಏನಾಗುತ್ತದೋ ಅವರಿಗೆ ಬಿಟ್ಟ ವಿಚಾರ .ಆದರೆ ಉಭಯ ಬಣಗಳ ಅಧಿಕಾರ ದಾಹದ ಈ ದಳ್ಳುರಿಯಲ್ಲಿ ನಿತ್ಯವೂ ಬೆಂದು ಹೋಗುತ್ತಿರುವ ಜನಸಾಮಾನ್ಯರನ್ನು ಕೇಳುವವರು ಯಾರು?.

ಜಾತಿವಾದೀ ಕ್ರೋಢೀಕರಣ

ಒಂದು ವೇಳೆ ಬಿಎಸ್ವೈ ಬಣದ ಬೇಡಿಕೆಗಳು ಈಡೇರದೇ ಹೋದಲ್ಲಿ

ಬಂಡಾಯ ,ತಿಕ್ಕಾಟ ನಿಶ್ಚಿತ. ಅನಂತಕುಮಾರ ಬಣ ಏನೇ ಆಗಲಿ ಹೀಗೇ ಕಾಲ ತಳ್ಳುವ.

ಪುಟ 4ಕ್ಕೆ



...........ದುಷ್ಟ ಬೇಗುದಿಗಳು

ಪುಟ 3 ರಿಂದ

ಒಳಗೊಳಗೇ ಎದುರಾಳಿಯ ಶಕ್ತಿ ಇಂಗಿಸುವ ತಂತ್ರದಲ್ಲಿ ನಿರತವಾಗಿದೆ. ಕರ್ನಾಟಕದಲ್ಲಿನ ಬ್ರಹ್ಮಾಂಡ ಭ್ರಷ್ಟತೆ, ಹಗರಣಗಳ 'ಸವಿರುಚಿ'ಯಲ್ಲಿ ಸಮ ಪಾಲಿರುವ (ಅಧಿಕಾರಕ್ಕೆ ಬರುವ ಮೊದಲು ಸರ್ವರಿಗೂ ಸಮ ಪಾಲು ಎಂದು ಹೇಳಿದ್ದರಲ್ಲವೇ) ಹೈಕಮಾಂಡ್ 'ಮಾನವಂತರಾಗಿ' ಬಿಟ್ಟಿರುವುದರಿಂದ ಯಡಿಯೂರಪ್ಪನನ್ನು ಪುನಃ ತರುವಂತಿಲ್ಲ, ಸದಾನಂದರನ್ನು ತೆಗೆವಂತಿಲ್ಲ. ಹೀಗಾಗಿ ಇಂದಿಲ್ಲ ನಾಳೆಯಾದರೂ ಹೊರ ಹೋಗಬೇಕಾದ ಪ್ರಸಂಗದ ನಿರೀಕ್ಷೆಯಲ್ಲಿರುವ ಬಿಎಸ್ವೈ ಬಣ ಆಗಲೇ ತಮ್ಮ ನೆಲೆಯ ಕ್ರೋಢೀಕರಣದಲ್ಲಿ ನಿರತವಾಗಿದೆ. ಸಾಧನೆಗಳ ಶೂರರು ತಾವೇ ಎಂದು ಎಷ್ಟೇ ಹೇಳಿಕೊಂಡರೂ ಅದು ಓಟಾಗಿ ಪರಿಣಮಿಸದೆಂದು, ಬೆಂಬಲಕ್ಕೆ ನಿಲ್ಲಲಾರದೆಂದೂ ಸ್ಪಷ್ಟವಾಗಿ ಗೊತ್ತಿರುವುದರಿಂದಲೇ ಜಾತಿ ಆಧಾರಿತ ಕ್ರೋಢೀಕರಣಕ್ಕೆ ಇಳಿದಿದ್ದಾರೆ. ಅಂತಹ ಪ್ರಯತ್ನಗಳ ಫಲವೇ ಹುಬ್ಬಳ್ಳಿಯ ಸಮಾವೇಶ. ಅಂದರೆ ಯಡ್ಡಿ ಬಣ ಬರೀ ಶಾಸಕರ ಬಲ ತೋರಿಸುತ್ತಾ ಕುಳಿತುಕೊಳ್ಳುವ ಬದಲು ಜನರನ್ನು ತಮ್ಮ ಹಿಂದೆ ಅಣಿನೆರೆಸುವ ಬಹಿರಂಗ ಕ್ರಿಯೆಯಲ್ಲಿ ತೊಡಗಿದೆ.

ಬಿಜೆಪಿ ಯಾವುದೇ ಜಾತಿ ಆಧರಿಸಿದ ಪಕ್ಷವಲ್ಲವೆಂದೇನೋ ಗಡ್ಕರಿ ಹೇಳಿರಬಹುದು. ಆದರೆ ಈ ಕೋಮುವಾದೀ ಪಕ್ಷ ವಾಸ್ತವದಲ್ಲಿ ಮಹಾ ಜಾತಿವಾದಿಯೇ ಎಂಬುದನ್ನು ವಿವರಿಸುವ ಅಗತ್ಯವಿಲ್ಲ. ವರ್ಣ-ವರ್ಗ ಭೇದವನ್ನು ಪ್ರಬಲವಾಗಿ ಪ್ರತಿಪಾದಿಸುವ ಇವರಿಗೆ ಜನತೆಯನ್ನು ಒಡೆದು ಆಳುವುದು ಅಂತರ್ಗತ, ಉಸಿರಾಡಿದಷ್ಟೆ ಸಹಜ. ಕರ್ನಾಟಕದ ಮಟ್ಟಿನಲ್ಲಿ ಎತ್ತಿಕೊಂಡವರ ಕೂಸಾಗಿದ್ದ ಲಿಂಗಾಯತ ಜಾತಿ ಜನರ ನಡುವೆ ನೆಲೆ ಪಡೆದುಕೊಳ್ಳಲು ಸಂಘಪರಿವಾರ ಪ್ರಜ್ಞಾಪೂರ್ವಕವಾಗಿ ಜಾತಿವಾದದ ರಾಜಕಾರಣ ಮಾಡುತ್ತಲೇ ಬಂದು ಯಶಸ್ವಿಯೂ ಆಗಿದೆ. ಅದರ ಫಲ ಪಡೆಯಿತಾದರೂ ಬಿಜೆಪಿಯು ಅಲೇ ಮೇಲ್ ಜಾತಿ ಕಾರಣಕ್ಕೆ, ಸಂಘ ನಿಷ್ಠ (ಮಹಾ ಭ್ರಷ್ಟ) ಅನಂತ್ ಕುಮಾರನತ್ತಲೇ ಒಲವಿದ್ದರೂ, ಯಡಿಯೂರಪ್ಪನವರನ್ನು ಅನಿವಾರ್ಯವಾಗಿ ಸಿ.ಎಂ. ಆಗಿಸಿತ್ತು. ಅವರನ್ನು ಬಿಜೆಪಿ ಪೂರ್ಣ ಬಳಸಿಕೊಂಡಿತು. ಬಿಜೆಪಿ ಪಕ್ಷ ಅದೆಷ್ಟೇ ಶಿಸ್ತು ಬದ್ಧ, ತತ್ವ ನಿಷ್ಠವೆಂದು ಹೇಳಿಕೊಂಡರೂ ಹಣ, ಅಧಿಕಾರದ ತಹತಹಿಕೆಯಲ್ಲಿ ಎಂತಹ ಮಟ್ಟಕ್ಕೂ ಇಳಿಯ ಬಲ್ಲದುದನ್ನು ಕಾಲಾನುಗತಿಯಲ್ಲಿ ಒಂದೊಮ್ಮೆ ಬಳಸಿ ಬಿಸಾಡಬಹುದೆಂದು ಯಡಿಯೂರಪ್ಪ ಮನಗಂಡೇ ಹಣ, ಜಾತಿ ಒಲೈಕೆಗಳಿಂದ ಪಕ್ಷದ ಆಚೆಗೂ ಬೆಳೆಯಲು ಯತ್ನಿಸಿದ್ದನ್ನು ನಾಡಿನ ಜನತೆ ಕಂಡಿದ್ದಾರೆ. ಆದ್ದರಿಂದಲೇ ತಾನು ಲಿಂಗಾಯತ ನಾಯಕನೆಂದು ಬಿಂಬಿತವಾಗಲು ಎಷ್ಟೆಲ್ಲಾ ಹೆಣಗಿದ ಎಂಬುದನ್ನ ಬೇರೆ ವಿವರಿಸಬೇಕೇ? ಈಗಲೂ ನಡೆಯುತ್ತಿರುವುದು ಅದೇ.

ಕಿತ್ತು ತಿಂದವರು

ದುರಂತವೆಂದರೆ ಇಂತಹ ಬಹುತೇಕ ಭ್ರಷ್ಟ ನೀಚ ನಾಯಕರು ಅಧಿಕಾರದಲ್ಲಿ ಉಳಿಯಲು ಜಾತಿಯನ್ನೇ ಗುರಾಣಿಯಾಗಿ ಬಳಸುತ್ತಿದ್ದಾರೆ. ಈಗಲೂ 'ಯ' ವಿರೋಧಿ ಅನಂತ್-ಈಶ್ವರಪ್ಪನವರ ಬಣ ಅದೇ ಜಾತಿ ರಾಜಕಾರಣವನ್ನೇ ಪ್ರತಿ ತಂತ್ರವಾಗಿ ಮುಂದುವರಿಸಿದೆ. ಒಂದು ಕಡೆಯಲ್ಲಿ, ಕೋಟಿ ಲಿಂಗ ಸ್ಥಾಪನೆಯ ಹೆಸರಿನಲ್ಲಿ ಯಡಿಯೂರಪ್ಪಗೆ ಆತ್ಮೀಯರಾಗಿದ್ದ ಲಿಂಗಾಯತ ಮಠಾಧೀಶರನ್ನೇ ಹಿಡಿದು ಅವರ ಬೆಂಬಲ ಕಸಿಯುವುದು, ಆ ಮೂಲಕ ತಾನೇ ಲಿಂಗಾಯತ ನಾಯಕನೆಂಬ ಬೀಗುವಿಕೆಯನ್ನು ಕುಸಿಯುವಂತಾಗಿಸುವುದು ಅವರ ಕಾರ್ಯತಂತ್ರವಾಗಿತ್ತು. ಆದರೆ ಒಂದು ವೇಳೆ ಹೀಗಾದರೆ ತಾವೂ ಸಹ ಶಾಶ್ವತ ಅಧಿಕಾರ ವಂಚಿತರಾಗಬೇಕಾಗುತ್ತದೆಂಬ ಭಯದಿಂದ ಶೆಟ್ಟರ್ ಬಣವೂ ಯಡಿಯೂರಪ್ಪನವರೊಂದಿಗೆ ಕದನ ವಿರಾಮ ಘೋಷಿಸಿ ಕೈ ಜೋಡಿಸಿದೆ. ಲಿಂಗಾಯಿತ ಐಕ್ಯತೆ ಶಕ್ತಿ ಪ್ರದರ್ಶನ ಮಾಡಿದೆ. ಇವರಿಗೆ ಸಿಗದಿದ್ದರೆ ಲಿಂಗಾಯತರೆಲ್ಲಾ ಅಧಿಕಾರ ವಂಚಿತರೆಂದು ಮಂಕುಬೂದಿ ಎರಚುತ್ತಿದೆ. ಹೀಗಾಗಿ ಹುಬ್ಬಳ್ಳಿಯ ಸಮಾವೇಶ ಲಿಂಗಾಯತ ಮತ ಬ್ಯಾಂಕ್‌ನ ಶಕ್ತಿ ಪ್ರದರ್ಶನ. ಇದಕ್ಕೆ ಲಿಂಗಾಯತ ಮಠಾಧೀಶರದ್ದೂ ಪ್ರಬಲ ಬೆಂಬಲ. ಇಲ್ಲಿಗೆ ಬಂದವರು ಬಹುತೇಕ ಗ್ರಾಮೀಣ ಬಡ ರೈತ, ಕೂಲಿಕಾರರೇ. ಬರದ ಆ ಬೆಂಗಾಡಿನಲ್ಲಿ ಲಕ್ಷಾಂತರ ಜನತೆ ಸೇರಿದ್ದರೂ ಬರದ ಬಾಧೆಯಿದ್ದರೂ ಯಾವುದರ ಬಗೆಗೂ ಪ್ರಸ್ತಾಪವೇ ಇಲ್ಲ. ಅದರೂ ಚಪ್ಪಾಳೆ ! ನೋಡಿ, ಜನರನ್ನು ಉಳಿಸಲಾರದವರು ಕಿತ್ತು ತಿಂದವರು ಉಳಿದು ಉಣ್ಣುವ ಜಾತಿ ರಾಜಕಾರಣದ ಪರಿಯೇ ಇದು !

ಇದೇ ಹೊತ್ತಿನಲ್ಲಿ ಬಿಜೆಪಿಯೊಳಗಿನ ಅನಂತ್, ಸದಾನಂದ ಗುಂಪು ಇನ್ನೊಂದು ಹಾದಿ ಹಿಡಿದಿದೆ. ಲಿಂಗಾಯತ ರಾಜಕಾರಣಕ್ಕೆ ಪ್ರತಿಯಾಗಿ ಹಿಂದುಳಿದ ಜಾತಿಗಳ ಕ್ರೋಢೀಕರಣದ ಯತ್ನ. ಅದರಂತೆ ಬಾಗಲಕೋಟೆಯಲ್ಲಿ ಒಂದು ಹಿಂದುಳಿದ ಜಾತಿಗಳ ಬೃಹತ್ ಸಮಾವೇಶವನ್ನು ಸಂಘಟಿಸುತ್ತಿದೆ. ಇಲ್ಲಿ ಮಠಾಧೀಶರಿಲ್ಲದಿದ್ದರೆ ಆದೀತೇ? ಅವರೂ ಖಂಡಿತ ಇರಲಿದ್ದಾರೆ.

ಎಂತಹ ದುರಂತವಿದು ಧಾರ್ಮಿಕ ಪ್ರಮುಖರೆಂಬುವವರು ಭ್ರಷ್ಟರ ಬೆನ್ನು ತಟ್ಟಿ ನಿಂತು ರಾಜಕಾರಣ ಮಾಡುತ್ತಿರುವ ದುಃಸ್ಥಿತಿ.

ಇಂತಹದ್ದಕ್ಕೆ ಅಡಿಯಿಡುವ ಪ್ರಯತ್ನ ಕಳೆದ ವಾರವೇ ನಡೆಯಿತು. ಬಹುತೇಕ ಹಿಂದುಳಿದ ಜಾತಿಗಳ ಮಠಾಧೀಶರೊಂದಿಗೆ ಸಭೆ ನಡೆಸಿದ ಮುಖ್ಯಮಂತ್ರಿಗಳು ಗಣನೀಯ ಅನುದಾನ, ಅಭಿವೃದ್ಧಿ ಯೋಜನೆಗಳನ್ನು ಮುಂಬರುವ ಬಜೆಟ್‌ನಲ್ಲಿ ಒದಗಿಸುವ ಚುನಾವಣಾ ಭರವಸೆಯನ್ನು ನೀಡಿದರು. 'ಹಿಂದುಳಿದ' 'ಹಿಂದುತ್ವ'ದ ನಾಯಕ ಪಕ್ಷಾಧ್ಯಕ್ಷ ಈಶ್ವರಪ್ಪ ಉಪಸ್ಥಿತರಿದ್ದರು. ಇವರೇ ಮುಂದಿನ ಸಮಾವೇಶದ ಹಿಂದಿನ ಚಾಲಕ ಶಕ್ತಿ. ಅಂದರೆ ಬಿಜೆಪಿಯೊಳಗೇ ಅಧಿಕಾರಕ್ಕಾಗಿ ವಿಪರೀತ ಜಾತಿವಾದಿ ಕ್ರೋಢೀಕರಣ ಸ್ಪರ್ಧೆ ನಡೆದಿದೆ. ಗುಂಪುಗಾರಿಕೆಯ ಕಿತ್ತಾಟಕ್ಕಾಗಿ ಜನತೆಯನ್ನೇ ಎತ್ತಿ ಕಟ್ಟಿ ಒಡೆಯುವ ದುಷ್ಟತನ ಅಳುಕಿಲ್ಲದೇ ವಿಜೃಂಭಿಸುತ್ತಿದೆ. ಈ ಒಟ್ಟು ಬೆಳವಣಿಗೆಗಳಲ್ಲಿ ಯಡ್ಡಿ-ಸದಾ ನಡುವೆ ಇದ್ದ ಅಷ್ಟಿಷ್ಟು ಸಂಬಂಧಗಳೂ ಮುರಿದು ಬಹಿರಂಗವಾಗಿ ಪರಸ್ಪರ ಛೇಡಿಸುವ, ಝಾಡಿಸುವ ಹಂತದಲ್ಲಿದ್ದಾರೆ.

ತಾನು ಜಾತೀವಾದದ ಬಲೆಯಲ್ಲಿ ಬಿಜೆಪಿ ಸಿಲುಕಿದೆ. ಕೊಡೆ-ಬಿಡೆ ಎಳೆದಾಟದಲ್ಲಿ ಹರಕಲು ಕೌದಿಯಾಗಿದೆ.

ಮುಖೇಡಿ ನಾಯಕರ ಮೇಕಪ್!

ವಿಚಿತ್ರವೆಂದರೆ ನಮ್ಮ ವಿರೋಧ ಪಕ್ಷಗಳು ಏನು ಮಾಡುತ್ತಿವೆ? ನಿಜ, ಅವು ಇಂದೋ - ಎಂದೋ ಬರಬಹುದಾದ ಚುನಾವಣಾ ಸಿದ್ಧತೆಯಲ್ಲಿ ನಿರತವಾಗಿವೆ, ಅರ್ಥಾತ್ ಜನರನ್ನು ನೆನಸಿಕೊಂಡು ಓಡಾಡುತ್ತಿವೆ, ಖ್ಯಾತ ಸಿನಿಮಾ ನಟಿಯರನ್ನು ಪಕ್ಷಕ್ಕೆ ಸೇರಿಸಿಕೊಂಡು ರೋಡ್ ಶೋ ನಡೆಸುತ್ತಿವೆ, ಕಾಂಗ್ರೆಸ್ಗೆ ರಮ್ಯಾ ಮತ್ತು ಭಾವನ, ಜೆಡಿ(ಎಸ್)ಗೆ ಪೂಜಾ ಗಾಂಧಿ, ಶ್ರೀರಾಮುಲು ಪಕ್ಷಕ್ಕೆ ರಕ್ಷಿತಾರನ್ನು ಸೇರಿಸಿಕೊಂಡಿದ್ದಾರೆ. ಇವರೆಲ್ಲಾ ನಾಯಕರ ವರ್ಚಸ್ಸು, ಪಕ್ಷದ ಸಿದ್ಧಾಂತಕ್ಕೆ ಮಾರು ಹೋಗಿ ಸೇರಿಕೊಂಡಿದ್ದಾರಂತೆ ! ಇರಲಿ ಯಾರೂ ಯಾವುದೇ ಪಕ್ಷ ಸೇರಲು ಸ್ವತಂತ್ರರು. ವಿಚಿತ್ರವೆಂದರೆ ಆ ಮಹಾ ನಾಯಕರು ಮುಖೇಡಿಗಳಾಗಿ ತಿರುಗುತ್ತಿದ್ದರೆ ನಟಿಯರು ಅವರಿಗೆ ಆಕರ್ಷಿತರಾಗುತ್ತಿದ್ದಾರೆ! ಜನರಿಂದ ಅಪ್ರಿಯರಾಗಿರುವ ಆಳುವ, ವಿರೋಧ ಪಕ್ಷಗಳ ದಿವಾಳಿತನಕ್ಕೆ ಇದಕ್ಕಿಂತ ಇನ್ನೊಂದು ಉದಾಹರಣೆ ಬೇಕೇ?

ಇಲ್ಲಿ ಆಳುವ ಬಿಜೆಪಿ ಸಂಪೂರ್ಣವಾಗಿ ವಿಫಲವಾಗಿ, ಜನರ ಕೋಪಕ್ಕೆ ಈಡಾಗುತ್ತಿದ್ದರೂ ಎಡ ಪಕ್ಷಗಳನ್ನು ಹೊರತು ಪಡಿಸಿ ಪ್ರಮುಖ ವಿರೋಧ ಪಕ್ಷಗಳು ನಿಜ ಪ್ರಶ್ನೆಗಳಾಧಾರದಲ್ಲಿ ಜನರ ನಡುವೆ ಹೋಗುತ್ತಿಲ್ಲ. ಪ್ರಮುಖವಾಗಿ ಅವೂ ಸಹ ಜಾತಿ ಆಧಾರಿತ ಕ್ರೋಢೀಕರಣಕ್ಕೆ ಯತ್ನಿಸುತ್ತಾ ಆಳುವ ಬಿಜೆಪಿಯೊಂದಿಗೆ ಸ್ಪರ್ಧೆ ನಡೆಸುತ್ತಿವೆ. ಇಂತಹ ರಾಜಕಾರಣವು ಬಿಜೆಪಿಯ ದುರಾಡಳಿತವನ್ನು ಕೊನೆಗೊಳಿಸೀತೇ?

ಬಾಲಂಗೋಚಿ :

ಹೌದು! ಡೆಲ್ಲಿಯಲ್ಲಿ ಯಡಿಯೂರಪ್ಪ ಹೈ ಕಮಾಂಡ್ ಮುಂದೆ ಕಾಯುತ್ತಾ ಇದ್ದನಲ್ಲಾ. ಏನಾಯ್ತು ? ಮುಂದಿನ ಭೇಟಿ ಯಾವಾಗ?

ಅರೇ ! 'ಬಿ.ಎಸ್.ಆರ್.' ಪಕ್ಷದ ಶ್ರೀರಾಮುಲು ಒಂದು ಬಾಂಬ್ ಸಿಡಿಸಿದ್ದಾನೆ. ಪಕ್ಷಕ್ಕಾಗಿ ಅಂತಾ ಡಾ। ಯ' ಗೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಾಗಿ ಹೇಳಿದ್ದಾನೆ . ಆ ನಂತರ ಈ ವಿಷಯವನ್ನು ತೋಂಟದಾರ್ಯ ಸ್ವಾಮೀಜಿಯವರಲ್ಲಿ ಹೇಳುತ್ತಿರುವ ಸಿ.ಡಿ. ಪ್ರಸಾರವಾಗಿದೆ. ಏನದರ ಗುಟ್ಟು? ಡಾ.ಯಡ್ಡಿ ಕತ್ತಿಗೆ ಹರಿ ಬಿಟ್ಟಿರುವ ಸಿಬಿಐ ಕುಣಿಕೆಯ ಎಳೆಯೇ?

ಜನತೆಗೆ ಬೇಕಿದೆ ಉತ್ತರ

ಪುಟ 3 ರಿಂದ

ರೆಡ್ಡಿಗಳ ಈ ಮಾಫಿಯಾವು ಉತ್ತರ ಹೈ.ಕ. ಪ್ರದೇಶಗಳನ್ನು ಉದ್ಧಾರಕ್ಕಾಗಿ ಆಯ್ಕೆ ಮಾಡಿಕೊಂಡಿರುವುದೇ ತಮ್ಮ ರಾಜಕೀಯ ಬಲ ಕ್ರೋಢೀಕರಿಸುವ ನಿಟ್ಟಿನಲ್ಲಿ. ಈ ಪ್ರದೇಶ ಮುಖ್ಯವಾಗಿ ಉತ್ತರ ಕರ್ನಾಟಕ, ಗದಗ್, ಧಾರವಾಡ, ಉತ್ತರ ಕನ್ನಡ-ಬೆಳಗಾಂಗಳು ಗಣಿಗಾರಿಕೆ, ಗೋವಾದತ್ತ ಗಣಿ ಅದಿರು ಸಾಗಾಣಿಕೆಯ ಪ್ರಮುಖ ಪ್ರದೇಶಗಳು, ಹಾಗೆಯೇ ಹೈ.ಕ.ವೂ ಕೊಪ್ಪಳ, ರಾಯಚೂರು ಒಳಗೊಂಡ ಪ್ರದೇಶಗಳು ಈಗಾಗಲೇ ಅವರ ಪ್ರಾಬಲ್ಯ ಇರುವಂತಹವು. ಮೇಲಾಗಿ ಇಂದು ಆಳುವ ಬಿಜೆಪಿಯೊಳಗಿನ ವಿವಿಧ ಗುಂಪುಗಳ ನಡುವಿನ ಕಿತ್ತಾಟದಿಂದ, ಲಿಂಗಾಯಿತ ಜಾತಿರಾಜಕಾರಣದ ಕ್ರೋಢೀಕರಣದ ಪ್ರಯತ್ನಗಳಿಂದ ಕಾಂಗ್ರೆಸ್, ಜೆ.ಡಿ.ಎಸ್. ಪಕ್ಷಗಳ ಅನಾಸಕ್ತಿಯಿಂದಾಗಿ ಸಡಿಲವಾಗಿರುವ ಈ ಪ್ರದೇಶದಲ್ಲಿ ಅಪಾರ ಹಣ, ಆಮಿಷಗಳಿಂದ ಹಿಂದುಳಿದ ವರ್ಗಗಳ ಹೆಸರಿನ ಜಾತಿ ರಾಜಕಾರಣದ ಕ್ರೋಢೀಕರಣದ ಪ್ರಯತ್ನಕ್ಕೆ ಈ ಗಣಿ ಮಾಫಿಯಾ ಇಳಿದಿದೆ. ಈ ಪ್ರದೇಶದಲ್ಲಿಂದಲೇ ಗಳಿಸಬಹುದಾದ ಶಾಸಕರ ಸಂಖ್ಯೆ ಮುಂದಿನ ಚುನಾವಣಾ ನಂತರದ ರಾಜಕಾರಣದಲ್ಲಿ ಈ ಮಾಫಿಯಾದ ಎಲ್ಲಾ ಆಟಗಳಿಗೆ ಆಧಾರವಾಗುವುದು. ಹೀಗಾಗಿ ಅವರಿಗೆ ಜೀವನ್ಮರಣದ ಪ್ರಶ್ನೆಯನ್ನಾಗಿದೆ. ಈ ದುಷ್ಟ ರಾಜಕೀಯ ಲೆಕ್ಕಚಾರದಿಂದಲೇ ನಿರಶನದ ನಾಟಕ ನಡೆಸಿರುವುದು ಸ್ಪಷ್ಟ.

ವಿಚಿತ್ರವೆಂದರೆ ಈ ಪ್ರದೇಶದ ಹಿಂದುಳಿದಿರುವಿಕೆಗೆ ಕಾರಣವಾದವರೇ ಆ ಪ್ರಶ್ನೆಗಳನ್ನೆತ್ತಿ ಆಗೀಗ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸದಾ ಹವಣಿಸುತ್ತಿರುತ್ತಾರೆ ಎಂಬುದು. ಇದೇ ಹೊತ್ತಿನಲ್ಲಿ ಅಲ್ಲಿನ ಪ್ರಾದೇಶಿಕ ವಿಶಿಷ್ಟ ಪ್ರಶ್ನೆಗಳನ್ನೆತ್ತಿ ಜನತೆಯ ಪ್ರಜಾಸತ್ತಾತ್ಮಕ ಚಳುವಳಿ ಬೆಳೆಸಿ, ಮಾಫಿಯಾ ಶಕ್ತಿಗಳನ್ನು ರಾಜಕೀಯವಾಗಿ, ಸಂಘಟನಾತ್ಮಕವಾಗಿಯೂ ಎದುರಿಸುವುದು ಜನಪರ ರಾಜಕೀಯ ಶಕ್ತಿಗಳ ಮುಂದಿರುವ ಕರ್ತವ್ಯ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮರ್ಯಾದೆಯ ಹೆಸರಿನಲ್ಲಿ ಮೈಸೂರಿನಲ್ಲಿ ಮತ್ತೊಂದು ಹತ್ಯೆ

ನೀಚ ಕಗ್ಗೊಲೆಗಳು, ಜಾತಿವಾದಿ ಕ್ರೌರ್ಯಗಳು

ಕರ್ನಾಟಕದಲ್ಲಿ ಪ್ರೀತಿಸಿ ಅನ್ಯ ಜಾತಿಯವರನ್ನು, ಅದರಲ್ಲೂ ದಲಿತ ಯುವಕನೊಬ್ಬನನ್ನು ಮದುವೆಯಾದಳೆಂದು ಕೊಲೆಯಾದ ಮತ್ತೊಬ್ಬ ನತದೃಷ್ಟ ಮಹಿಳೆ ಮೈಸೂರಿನ ಸ್ತುತಿ.

ಮೇಲು, ಕೀಳು, ಸ್ಪ್ರಶ್ಯ, ಅಸ್ಪೃಶ್ಯ ಎನ್ನುವ ಜಾತಿ ವ್ಯವಸ್ಥೆ ಪ್ರಬಲವಾಗಿರುವ ಈ ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ರಾಜಕೀಯ ನಿಂತಿರುವುದೇ ಜಾತಿ ರಾಜಕಾರಣದ ಮೇಲೆ ಎನ್ನುವಷ್ಟು ಪ್ರಕಟವಾಗಿ ನಡೆಯುತ್ತಿರುವ ವಿದ್ಯಮಾನಗಳಿಂದಾಗಿ ಇಂತಹ





ಮೈಸೂರಿನಲ್ಲಿ

ಘಟನೆಗಳು ಹೆಚ್ಚಾಗುತ್ತಿವೆ.

ಕಳೆದ ವರ್ಷ ರಾಮನಗರದಲ್ಲಿ ತಂದೆ ತಾಯಿಯರ ಇಷ್ಟಕ್ಕೆ ವಿರುದ್ಧವಾಗಿ ಮಗಳು ಅಂತರ್ ಜಾತೀಯ ಮದುವೆಯಾದಳೆಂದು ಅವರ ಪಾಡಿಗೆ ಬದುಕು ಸಾಗಿಸಿಕೊಂಡಿದ್ದ ಮಗಳನ್ನು ಬಾಣಂತನ ಮಾಡುವುದಾಗಿ ನಂಬಿಸಿ ಕರೆದುಕೊಂಡು ಬಂದು ಹಾಲುಗಲ್ಲದ ಹಸುಗೂಸನ್ನೂ ಸೇರಿಸಿ ನಿರ್ದಯವಾಗಿ ಕೊಂದುಹಾಕಲಾಯಿತು.

ಎರಡು ತಿಂಗಳ ಹಿಂದೆ ಮಂಡ್ಯ ಜಿಲ್ಲೆಯ ಅಬಲವಾಡಿಯಲ್ಲಿ ಸ್ವತಃ ತಂದೆಯೇ ಮುಂದೆ ನಿಂತು ಮಗಳಿಗೆ ನೇಣು ಹಾಕಿಕೊಳ್ಳಲು ಒತ್ತಡ ಹೇರಿ ಕೊಂದ ಘಟನೆ ಇನ್ನೂ ಹಸಿಯಾಗಿಯೇ ಇದೆ.

ಈಗ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವಿದ್ಯಾವಂತಳಾದ, ಆರ್ಥಿಕವಾಗಿ ಸ್ವತಂತ್ರಳಾಗಿ ತನ್ನ ಬದುಕನ್ನು ತಾನು ನಡೆಸಿಕೊಳ್ಳುತ್ತಿರುವ ಹೆಣ್ಣು ಮಗಳು ಜಾತಿ ಪದ್ಧತಿಯ ವಿಷ ಜ್ವಾಲೆಗೆ ಬಲಿಯಾಗಿದ್ದಾಳೆ.

ಹಾವೇರಿಯಲ್ಲಿ ಇಂತಹ ಘಟನೆಗಳು ಬಹಳ ನಡೆಯುತ್ತಿವೆ. ಆದರೆ ಬೆಳಕಿಗೆ ಬರುವುದಿಲ್ಲ ಎಂದು ವರದಿಯಿದೆ. ಹೀಗೆ ಬೆಳಕಿಗೆ ಬಾರದ ಎಷ್ಟು ಕೊಲೆಗಳು ಪ್ರತಿನಿತ್ಯ ನಡೆಯುತ್ತಿದೆಯೋ?

ಈ ಎಲ್ಲ ಸಂದರ್ಭಗಳಲ್ಲಿ ಯುವಕರು ದಲಿತ ಜಾತಿಗೆ ಸೇರಿದವರು. ಸರ್ಕಾರದ ಯಾವುದೇ ತುತ್ತೂರಿ, ಅಭಿವೃದ್ಧಿಯ ಭಾಷಣ ಈ ಯುವಕರ ಮತ್ತು ಹತರಾದ ಯುವತಿಯರ ಬಾಳಿಗೆ ಬೆಳಕಾಗಲಿಲ್ಲ ಎಂಬುದು ಇಲ್ಲಿ ಗಮನಸಬೇಕಾದ ಅಂಶ.

ಉತ್ತರಭಾರತದ ಹಲವು ರಾಜ್ಯಗಳಲ್ಲಿ ಅದರಲ್ಲೂ ಮುಖ್ಯವಾಗಿ ಹರ್ಯಾಣದಲ್ಲಿ ಇಂತಹ ಪ್ರಕರಣಗಳು ಅತಿ ಹೆಚ್ಚು ನಡೆಯುತ್ತಿದ್ದುದನ್ನು ವಿರೋಧಿಸಿ ಜನವಾದಿ ಮಹಿಳಾ ಸಂಘಟನೆ ಹೋರಾಟ ನಡೆಸಿ "ಮರ್ಯಾದೆಯ ಹೆಸರಿನಲ್ಲಿ ನಡೆಯುವ ಹತ್ಯೆ"ಗಳ ಕುರಿತೇ ಒಂದು ನಿರ್ದಿಷ್ಟ ಕಾನೂನು ಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಇಂತಹುದೇ ಪ್ರಕರಣವೊಂದರಲ್ಲಿ "ಮನೋಜ್ ಮತು ಬಬ್ಲಿ "ಸುಪ್ರಿಂ ಕೋರ್ಟ್ ತಪ್ಪಿತಸ್ಥರಿಗೆ ಮರಣದಂಡನೆ ವಿಧಿಸಿದೆ. ಈಗಾಗಲೇ ಸಿದ್ದವಾಗಿರುವ ಕರಡನ್ನು ಚರ್ಚೆಗೆ ಎತ್ತಿಕೊಂಡು ತಕ್ಷಣವೇ ಕಾನೂನು ರಚಿಸಿ ಸಂವಿದಾನದತ್ತ ಆಯ್ಕೆ ಸ್ವಾತಂತ್ರದ ಹಕ್ಕನ್ನು ಯುವಜನರಿಂದ ಕಿತ್ತುಕೊಳ್ಳಲಾರದಂತೆ ವ್ಯವಸ್ಥೆ ಮಾಡುವ ಬದಲು ಬಲಾಢ್ಯ ಕೋಮಿನ ಜನರು ಅದು ತಮ್ಮ ಜಾತಿಯ ರೀತಿ ರಿವಾಜುಗಳಿಗೆ ವ್ಯತಿರಿಕ್ತವಾದುದೆಂದು ಒತ್ತಡ ಹೇರಿದರೆಂಬ ಕಾರಣಕ್ಕೆ ಪಕ್ಕಕ್ಕೆ ತಳ್ಳಿ ಮೌನವಹಿಸಿದೆ. ಇದು ಕೇಂದ್ರ ಸರ್ಕಾರದ ಸಂವಿಧಾನ ವಿರೋಧಿ ಕ್ರಿಯೆಯೆಂದೇ ಅರ್ಥೈಸಬೇಕಾಗುತ್ತದೆ. ಮತ್ತು ಹೆಚ್ಚುತ್ತಿರುವ ಇಂತಹ ದುಷ್ಕೃತ್ಯಗಳಿಗೆ ಸರ್ಕಾರಗಳೇ ನೇರ ಹೊಣೆಯೆಂದು ಹೇಳಬೇಕಾಗುತ್ತದೆ.

– ಕೆ.ಎಸ್.ವಿಮಲಾ

ಪ್ರತಿಭಟನೆ

ಮರ್ಯಾದಾ ಹತ್ಯೆ ಹೆಸರಿನ ಈ ಜಾತಿವಾದಿ ಕ್ರೌರ್ಯ, ಪಾತಕಿ ಕೃತ್ಯವನ್ನು ಖಂಡಿಸಿ, ಸ್ಮೃತಿಯನ್ನು ಕೊಂದ ಕೊಲೆಗಡುಕ ಅಪರಾಧಿ ಸಹೋದರರನ್ನು ಬಂಧಿಸಿ ಉಗ್ರ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿ ಬೆಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆ ಮಾರ್ಚ್,15 ರಂದು ಪ್ರತಿಭಟನೆ ನಡೆಸಿತು. ಮೈಸೂರಿನಲ್ಲಿಯೂ ಪ್ರತಿಭಟನೆ ನಡೆದಿದೆ.



ಗುಜರಾತ್ ನರಮೇಧದ ಕರಾಳ ನೆನಪು

ಬದುಕಿ ಉಳಿದವರ ಮನದಲ್ಲಿ ಆದ ಗಾಯಗಳು ಇನ್ನೂ ಮಾಯಲಿಲ್ಲ

ಅಮಾನುಷ ಗೋದ್ರಾ ಹತ್ಯಾಕಾಂಡ ಮತ್ತುಅದರ ನೆಪದಲ್ಲಿ ಅಉ. 2000 ಮುಸ್ಲಿಮರನ್ನು ಬಲಿ ತೆಗದುಕೊಂಡ ಮುಸ್ಲಿಂ ವಿರೋಧಿ ಗಲಭೆಗಳೂ ನಡೆದು ಹತ್ತು ವರ್ಷಗಳಾಗಿವೆ.

ಈ ಹತ್ತು ವರ್ಷಗಳಲ್ಲಿ ಸಬರಮತಿ ನದಿ ನೀರು ಕಡಿಮೆಯಾಗಿಲ್ಲ. ಹಾಗೆಯೇ ಆ ನದಿಯ ನೀರಿನಲ್ಲಿ ಉಪ್ಪೂ ಕೂಡ ಹೆಚ್ಚಾಗಿದೆ. ಕಾರಣ ನರಮೇಧಕ್ಕೆ ಬಲಿಯಾದವರ ಕಣ್ಣೀರು ಇನ್ನೂ ಆರದಿರುವುದು.

ಇಂದಿಗೂ ಮೀಸೆ ತಿರುವುತ್ತಾ ತಿರುಗುವ ಕೊಲೆಪಾತಕಿಗಳು ಗುಜರಾತಿನ ಬೀದಿಗಳಲ್ಲಿ ಕಾಣ ಸಿಗುತ್ತಾರೆ. ಇನ್ನು ಇದೇ ಗುಂಪಿನ ರಾಜಕೀಯ ನಾಯಕರ ಬಗೆಗೆ ಏನು ಹೇಳುವುದೇ ಬೇಡ !! ಗುಲ್ಬರ್ಗ್ ಸೊಸೈಟಿ ಕಾಂಗ್ರೆಸಿನ ಹಿರಿಯ ನಾಯಕ ಮಾಜಿ ಸಂಸದ ಕೋಮುವಾದಿ ಗೂಂಡಾಗಳಿಂದ ಹತ್ಯೆಗೊಳಗಾದ ಎಹ್ಸಾನ್ ಝಾಫ್ರಿ ಕಟ್ಟಿದ ಸಾಮಾಜಿಕ ಸಂಘಟನೆ. ಗುಜರಾತಿನಲ್ಲಿ ಗಲಭೆಯ ದಿನಗಳಲ್ಲಿ ಝಾಫ್ರಿ ಗಲಭೆ ನಿಯಂತ್ರಣಕ್ಕಾಗಿ ಹಾಗೂ ಗಲಭೆಗಳಲ್ಲಿ ಸಂತ್ರಸ್ತರಾದವರಿಗೆ ಸಹಾಯ ಮಾಡಲು ಮುಂದಾಗಿದ್ದರು. ಅತ್ಯಾಚಾರ, ದೌರ್ಜನ್ಯ, ಹಿಂಸೆಗೆ ತುತ್ತಾದ ಮುಸ್ಲಿಂ ಅಲ್ಪಸಂಖ್ಯಾತ ಜನರು ಅಲ್ಲಿ ನೆರೆದಿದ್ದರು. ಕೊನೆಗೆ ಝಾಫ್ರಿ ಸಹಿತ, ನೆರೆದ ಜನ ಗುಲ್ಬರ್ಗ್ ಸೊಸೈಟಿ ಕಟ್ಟಡದಲ್ಲಿ ಕೋಮು ಜ್ವಾಲೆಯಲ್ಲಿ ಸುಟ್ಟು ಭಸ್ಮವಾದರು.

ಬದುಕಿ ಉಳಿದ ಜನರ ಮನಸ್ಸಿನಲ್ಲಿ ಆಗಿರುವ ಗಾಯಗಳು ಇನ್ನೂ ಮಾಯಲಿಲ್ಲ. ಕಾಡುವ ನೋವಿನ ನೆನಪು ಹಿನ್ನೆಲೆಯಲ್ಲಿ ದೇಶದ ಬೇರೆ ಬೇರೆ ಭಾಗಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ನಡೆದಿವೆ. ಫೆಬ್ರವರಿ 27ರಂದು ಮುಂಬೈನ ನ್ಯಾಯ, ಶಾಂತಿ ಮತ್ತು ಸೌಹಾರ್ದ ಟ್ರಸ್ಟ್ ಗುಜರಾತಿನ ಅಹಮದಾಬಾದಿನಲ್ಲಿ ಶುಭ ಮುದುಗಲ್‌ರವರ ಗಾಯನ ಕಾರ್ಯಕ್ರಮ ಆಯೋಜಿಸಿತ್ತು. ಹತ್ತು ವರ್ಷಗಳ ನಂತರ ಗಲಭೆಯಲ್ಲಿ ನೊಂದ ಜನರು ಒಂದು ಹೃದಯಸ್ಪರ್ಶಿ ಸೌಹಾರ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದಿನವೆಲ್ಲಾ ನಡೆದ ಕಾರ್ಯಕ್ರಮದಲ್ಲಿ ಗುಜರಾತಿನ ಎಲ್ಲ ಭಾಗಗಳಿಂದಲೂ ಬಂದಿದ್ದ ಜನ, ಗಲಭೆಯಲ್ಲಿ ನಲುಗಿದ್ದ ಜನರು, ಕುಟುಂಬಗಳನ್ನು ಕಣ್ಣೆದುರಿಗೇ ಕಳೆದುಕೊಂಡವರು, ಕೋಮುವಾದಿ ದಾಳಿಗಳ ವಿರುದ್ಧ ಜನರ ಬದುಕು ಉಳಿಸಲು ದಿಟ್ಟವಾಗಿ ಹುಚ್ಚು ಉನ್ಮಾದದ ಪ್ರವಾಹದ ವಿರುದ್ಧ ನಿಂತವರು, ಇಂದಿಗೂ ನ್ಯಾಯಕ್ಕಾಗಿ ಕಾನೂನು ಸಮರ ಸಾರಿರುವವರು, ಸುತ್ತಲೂ ಸುಡುವ ಅಗ್ನಿ ಜ್ವಾಲೆಗಳ ನಡುವೆ ಮಾನವೀಯ ಹಾಗೂ ಕಾನೂನಾತ್ಮಕ ನೆರವುಗಳನ್ನು ನೀಡಿದ ಪ್ರಗತಿಪರ ಶಕ್ತಿಗಳು, ಪತ್ರಕರ್ತರು, ನ್ಯಾಯವಾದಿಗಳು, ಮಾನವ ಹಕ್ಕುಗಳ ಕಾರ್ಯಕರ್ತರು ಎಲ್ಲರೂ ಅಲ್ಲಿ ನೆರೆದು ತಮ್ಮ ಹೋರಾಟದ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ತೆಗೆದ ಚಿತ್ರಗಳನ್ನು ಗೋಡೆಗೆ ಅಂಟಿಸಿ ಈ ನೆನಪುಗಳ ಇಳಿ ಸಂಜೆಯನ್ನು ಇನ್ನಷ್ಟು ಆರ್ದ್ರಗೊಳಿಸಿದ್ದು ಖ್ಯಾತ ಫೋಟೋ ಗ್ರಾಫರ್‌ಗಳಾದ ರಾಮ್ ರೆಹಮಾನ್, ಬನಿತಾ ದೇಸಾಯಿ ಮತ್ತು ಚೇನಾರ್ ಷಾ.

ಗುಜರಾತ್, ಗೋಧ್ರಾ ನರಮೇಧದ ನೆನಪುಗಳನ್ನು ಮರೆಸಿ ಜೀವನಪ್ರೀತಿ ಬೆಳೆಸಿಕೊಳ್ಳಲು ಪ್ರೇರಣೆ ಮೂಡಿಸಿದವರು ಖ್ಯಾತ ಶಾಸ್ತ್ರೀಯ ಸಂಗೀತ ಗಾಯಕಿ ಶುಭಾ ಮುದ್ಗಲ್. ಹಾಡು ಹೀಗಿದೆ.

ಚಲೇ ಚಲೋ ದಿಲೊ ಮೀ ಘಾವ್ ಲೇಕೆ ಭೀ
ಚಲೇ ಚಲೋ ಚಲೋ ಲಹುಲುಹಾನ್ ಪಾವೋ
ಲೇಕೆಭೀ ಚಲೇ ಚಲೋ ಚಲೋ ಕಿ ಆಜ್
ಸಾತ್ ಸಾತ್
ಚಲ್ನೆ ಕಿ ಝೂರುರತೆ ಚಲೋ ಕಿ ಖಾತ್ಮ್ ಹೋ
ನಾಜಾಯೇ ಜಿಂದಗಿ ಜಿ ಹಾಸ್ರತೆ...

ಅದೇ ದಿನ ಸಂಜೆ ದೆಹಲಿಯಲ್ಲಿ ಸಹಮತ್ ಸಂಘಟನೆ ಕೂಡ 'ಗುಜರಾತ್: ಹತ್ತು ವರ್ಷಗಳ ನಂತರ'ಸೌಹಾರ್ದತೆ ಮತ್ತು ವಿಶ್ವಾಸ ಪುನರ್ ಸ್ಥಾಪನೆಗಾಗಿ ಎಂಬ ಹೆಸರಿನಲ್ಲಿ ತನ್ನ ಕಚೇರಿಯಲ್ಲಿ ಕಾರ್ಯಕ್ರಮ ಆಯೋಜಿಸಿತ್ತು. ಗಾಯಕ ಮದನ್‌ಗೋಪಾಲ್ ಹಾಡುಗಳು ಹಾಗೂ ಗುಜರಾತಿನ ಅಹಮದಾಬಾದಿನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಹಾಡುತ್ತಿದ್ದ ಶುಭ ಮುದ್ಗಲ್ ಅವರ ಗಾಯನವನ್ನು ಹಾಗೂ ಫೋಟೋಗಳನ್ನು ಕೂಡ ನೇರಪ್ರಸಾರ ಮಾಡಲಾಯಿತು. ಜಾಲ್ಸಾ ಕೋಲಾಜ್ ನಾಟಕ ತಂಡ ಧರ್ಮ ಕುರಿತ ಬೀದಿ ನಾಟಕವನ್ನು ಪ್ರದರ್ಶನ ನೀಡಿತು.

ನಕ್ಸಲ್ ಆರೋಪಿ ವಿಠಲ, ಲಿಂಗಣ್ಣ ಮಲೆಕುಡಿಯರನ್ನು ಬಿಡುಗಡೆಗೊಳಿಸಲು ಆಗ್ರಹಿಸಿ ಪ್ರತಿಭಟನೆ

ವರದಿ : ವಾ.ಉ.

ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಕ್ಸಲ್‌ವಾದೀ ಚಟುವಟಿಕೆಗಳನ್ನು ನಿಗ್ರಹಿಸಲು ರಾಜ್ಯ ಸರ್ಕಾರವು ನಕ್ಸಲ್ ನಿಗ್ರಹ ದಳವನ್ನು ರಚಿಸಿ ಕಾರ್ಯಾಚರಿಸುತ್ತಿದೆ. ಬೆಳ್ತಂಗಡಿ ತಾಲೂಕಿನ ಕುತ್ಲೂರು ಗ್ರಾಮದ ಮಲೆಯಲ್ಲಿ ವಾಸವಾಗಿರುವ ಮಲೆಕುಡಿಯರೊಡನೆ ನಕ್ಸಲರು ಒಂದೊಮ್ಮೆ ಸಂರ್ಕದಲ್ಲಿದ್ದದ್ದೂ ನಿಜ. ಆದರೆ ವಿಠಲ ಅವರಿಂದ ದೂರವಿದ್ದು, ಡಿವೈಎಫ್ಐ ಹಾಗೂ ಎಸ್ಎಫ್ಐ ಸಂಪರ್ಕ ಹೊಂದಿ ಈಗ ಮಂಗಳೂರು ವಿ.ವಿ.ಯಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಕರ್ನಾಟಕ ರಾಜ್ಯ ಮಟ್ಟದ ಆದಿವಾಸಿ ಸಮಾವೇಶ ಕೊಡಗಿನ ಸಿದ್ದಾಪುರದಲ್ಲಿ ನಡೆದಾಗ ಅದರಲ್ಲಿ ಭಾಗವಹಿಸಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಮಿತಿ ಸದಸ್ಯನಾಗಿ ಆಯ್ಕೆಯಾಗಿದ್ದರು. 3 ವರ್ಷಗಳ ಹಿಂದೆ ಲೋಕಸಭಾ ಚುನಾವಣೆ ವೇಳೆ ಸಿಪಿಎಂ ಅಭ್ಯರ್ಥಿ ಪರವಾಗಿ ಪ್ರಚಾರ ನಡೆಸಿದ್ದರು. ಮಡೆಸ್ನಾನಕ್ಕೆ ಸಂಬಂಧಿಸಿದ ಡಿವೈಎಫ್ಐ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಪತ್ರಿಕೋದ್ಯಮ ವಿದ್ಯಾರ್ಥಿಯಾಗಿ ನಕ್ಸಲ್ ಚಟುವಟಿಕೆಗಳಿಗೆ ಸಂಬಂಧಿಸಿ ಬಜರಂಗದಳ, ಶ್ರೀರಾಮಸೇನೆ, ಎಡಪಕ್ಷಗಳು, ಬಿಜೆಪಿ, ನಕ್ಸಲ್‌ವಾದಿಗಳ ಹೇಳಿಕೆಗಳನ್ನು ಪತ್ರಿಕೆಗಳಿಂದ ಕಟ್ಟಿಂಗ್ ಮಾಡಿ ಇಟ್ಟುಕೊಂಡಿದ್ದರು. ಈತ ಅಧ್ಯಯನವನ್ನು ಗಂಭೀರವಾಗಿ ತೆಗೆದುಕೊಂಡುದಕ್ಕೆ ಇವು ಸಾಕ್ಷಿಯಾಗಿವೆ.

ನಕ್ಸಲ್ ನಿಗ್ರಹ ಪಡೆ ಕೆಲವು ತಿಂಗಳ ಹಿಂದೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದಾಗ, ಅವರದೇ ಗುಂಡಿಗೆ ಅವರದೇ ತಂಡದ ದಯಾನಂದ ಮಾನೆ ಎಂಬ ಪೋಲೀಸ್ ಬಲಿಯಾಗಿದ್ದರು. ನಕ್ಸಲರ ದಾಳಿ ಎಂದು ಆರಂಭದಲ್ಲಿ ಅವರೇ ಹೇಳಿದರೂ, ಬಳಿಕ ಇಂಥ ದಾಳಿ ನಡೆದಿಲ್ಲವೆಂಬುದು ಸಾಬೀತಾಗಿದೆ. ಪಶ್ಚಿಮ ಘಟ್ಟದಲ್ಲಿ ನಕ್ಸಲರ ಸಂಖ್ಯೆ ಕಡಿಮೆಯಾಗಿದ್ದರೂ, ಅವರು ಇದ್ದೇ ಇದ್ದಾರೆ ಎಂದು ಸಾಬೀತುಪಡಿಸುವ ವಿಫಲ ಪ್ರಯತ್ನದಲ್ಲಿ ನಕ್ಸಲ್ ನಿಗ್ರಹಪಡೆ ಕೆಲವು ದಿನಗಳ ಹಿಂದೆ ವಿಠಲನ ತಂದೆ ಲಿಂಗಣ್ಣ ಮತ್ತು ಸೋದರ ಪುರುಷೋತ್ತಮ ಎಂಬಿಬ್ಬರನ್ನು ನಕ್ಸಲ್ ಎಂದು ಆರೋಪಿಸಿ ವಶಕ್ಕೆ ತೆಗೆದುಕೊಂಡಿದೆ. ಲಿಂಗಣ್ಣನಿಗೆ ಕಾಲು ಮುರಿಯುವಂತೆ ಹೊಡೆದಿದ್ದಾರೆ. ಈ ವಿಷಯ ತಿಳಿದು ವಿಠಲ ಮಂಗಳೂರಿನಿಂದ ಊರಿಗೆ ವಾಪಾಸಾಗಿದ್ದ ಸಂದರ್ಭ, ಆತನನ್ನು ನಕ್ಸಲ್ ಬೆಂಬಲಿಗ ಎಂದು ಆರೋಪಿಸಿ ಪೋಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಬೆಳ್ತಂಗಡಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಹಾಗೂ ಸಿಪಿಎಂ ಪಕ್ಷದ ಮುಖಂಡರು ಅಮಾಯಕ ವಿಠಲನನ್ನು ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿ ಮಾರ್ಚ್ 7 ರಂದು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು. ವಿಠಲನ ಬಗ್ಗೆ ಪೋಲೀಸರು ಸತ್ಯಾಸತ್ಯತೆ ದೃಢಪಡಿಸದೆ ಎಫ್ಐಆರ್ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದಾರೆ. ನ್ಯಾಯಾಲಯವು ಪೋಲೀಸ್ ಕಸ್ಟಡಿಯನ್ನು ವಿಸ್ತರಿಸಿ ಆದೇಶ ನೀಡಿದೆ.

ವಿಠಲ ನಕ್ಸಲರ ಬೆಂಬಲಿಗ ಎಂದು ಪೋಲೀಸರು ದಾಖಲಿಸಿರುವ ಕಾರಣಗಳು ಹಾಸ್ಯಾಸ್ಪದವಾಗಿದೆ. ಆತನ ಬಳಿ ನಕ್ಸಲ್ ವಿಷಯಕ್ಕೆ ಸಂಬಂಧಿಸಿದ ವಿವಿಧ ಪತ್ರಿಕೆಗಳ ಕಟ್ಟಿಂಗ್ ಇತ್ತು; ಆತನ ಬಳಿ ಹುತಾತ್ಮ 'ಭಗತ್ ಸಿಂಗ್' ಎಂಬ ಪುಸ್ತಕವಿತ್ತು. ಆತನ ಮನೆಯವರು 200 ಗ್ರಾಂ ಸಕ್ಕರೆ, 100 ಗ್ರಾಂ ಕಾಫಿ ಹುಡಿ ಹಾಗೂ ಚಾ ಹುಡಿಗಳನ್ನು ನಕ್ಸಲರಿಗೆ ನೀಡುವುದಕ್ಕೆಂದೇ ತಂದಿಟ್ಟುಕೊಂಡಿದ್ದರು; ಮನೆಯಿಂದ ವಶಪಡಿಸಿಕೊಳ್ಳಲಾದ 2 ಚೊಂಬು, 2 ಬಟ್ಟಲು, 1 ಲೋಟ ,1 ಚಾಕು ನಕ್ಸಲರಿಗೆ ಕೊಡುವುದಕ್ಕೆಂದೇ ತಂದಿಟ್ಟುಕೊಂಡವು; ಕತ್ತಿಸುತ್ತಿಗೆ ಚಿಹ್ನೆ ಅಂಟಿಸಿದ ಬೈನಾಕ್ಯುಲರ್ ಮನೆಯಲ್ಲಿತ್ತು – ಇವು ಆರೋಪಕ್ಕೆ ಆಧಾರವಾದ ಪೋಲೀಸರು ಪುರಾವೆಗಳು. ಉಡುಪಿ-ಚಿಕ್ಕಮಗಳೂರು ಲೋಕಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲೇ ಬೆಳ್ತಂಗಡಿಯ ಕಾಡುಗಳಲ್ಲಿ ನಕ್ಸಲರು ಬಿಟ್ಟುಹೋದ ಲೋಡುಗಟ್ಟಲೆ ಸಾಮಾಗ್ರಿಗಳನ್ನು ಪತ್ತೆ ಹಚ್ಚಲಾಗಿದೆ. ಹಾಗೂ ಕುತ್ಲೂರು ಮಲೆಯ ಒಂದೇ ಮನೆಯ ಮೂವರನ್ನು ಬಂಧಿಸಲಾಗಿದೆ.


ಬೆಳ್ತಂಗಡಿಯಲ್ಲಿ ಪ್ರತಿಭಟನೆ

ಮಲೆಕುಡಿಯ ವಿಠಲ ಅಮಾಯಕ. ಆತನ ಮೇಲೆ ಸುಳ್ಳು ಆರೋಪ ಹಾಕಲಾಗಿದೆ. ಹಾಕಲಾದ ಆರೋಪಗಳಿಗೆ ಪುರಾವೆಗಳಿಲ್ಲ. ಆತನನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ಹಮ್ಮಿಕೊಂಡ ಮೇರೆಗೆ ಮಾರ್ಚ್ 15 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆಯನ್ನು ನಡೆಸಲಾಯಿತು.

ಮಂಗಳೂರಿನಲ್ಲಿ ಪ್ರತಿಭಟನೆ

ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದ ಸಿಪಿಎಂ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು, ಭಗತ್‌ಸಿಂಗ್ ಎಂದಿನಿಂದ ನಕ್ಸಲರಾದರು ಎಂದು ಪ್ರಶ್ನಿಸಿದರು. ಇತ್ತೀಚಿನ ನಕ್ಸಲ್ ದಾಳಿಗಳ ಹಿಂದೆ ಬಿಜೆಪಿ ಸರಕಾರದ ಹುನ್ನಾರವಿದೆ. ರಾಜ್ಯದಲ್ಲಿ ಬಿಜೆಪಿ ಪಕ್ಷ ಒಳಜಗಳಗಳಿಂದ ಛಿದ್ರವಾಗುವ ಅಪಾಯದಲ್ಲಿದ್ದು, ಅದರಿಂದ ಬಚಾವಾಗಲು ನಕ್ಸಲ್ ಗುಮ್ಮನನ್ನು ಹರಿಬಿಡಲಾಗಿದೆ. ಚುನಾವಣಾ ಸಂದರ್ಭವನ್ನು ಇದಕ್ಕಾಗಿ ಬಳಸಿಕೊಳ್ಳಲಾಗಿದೆ ಎಂದು ಆರೋಪಿಸಿದರು. ಹಿಂಸೆಯನ್ನು ಪ್ರತಿಪಾದಿಸುವ ನಕ್ಸಲ್‌ವಾದವನ್ನು ಸಿಪಿಎಂ ತೀವ್ರವಾಗಿ ವಿರೋಧಿಸುತ್ತದೆ. ಅಮಾಯಕರನ್ನು ಪುರಾವೆಗಳಿಲ್ಲದೆ ಬಂಧನದಲ್ಲಿಡುವುದು ಎಷ್ಟೊಂದು ದುಷ್ಟತನದ್ದು ಎಂದು ತುರ್ತುಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದ್ದ ಬಿಜೆಪಿಗರಿಗೆ ಗೊತ್ತಾಗಬೇಕಿತ್ತು. ಇವತ್ತು ಪಿಪಿಸಿ 121ರನ್ವಯ ವಿಠಲನನ್ನು ಬಂಧಿಸಲಾಗಿದೆ. ವಿಠಲನೇನು ದೇಶದ ವಿರುದ್ಧ ಯುದ್ಧ ಮಾಡಿದ್ದಾನೆಯೇ ಎಂದು ಪ್ರಶ್ನಿಸಿದರು.

ಸಿಪಿಎಂ ಬೆಳ್ತಂಗಡಿ ತಾಲೂಕು ಮುಖಂಡರಾದ ಬಿ.ಎಂ.ಭಟ್ ಮಾತನಾಡಿ ನಕ್ಸಲ್ ನಿಗ್ರಹ ದಳದವರು ನಕ್ಸಲರು ಬಿಟ್ಟು ಹೋದರೆನ್ನಲಾದ ಮೂಟೆಗಟ್ಟಲೆ ಆಹಾರ ಸಾಮಾಗ್ರಿಗಳನ್ನು ಪ್ರದರ್ಶಿಸಿಟ್ಟಿದ್ದಾರೆ. ಅಷ್ಟೊಂದು ಸಂಗ್ರಹ ಕಾಡಿನೊಳಗೆ ಒಯ್ಯಬಲ್ಲ ನಕ್ಸಲರು ಬಡ ಮಲೆಕುಡಿಯರ ಗುಡಿಸಲಿನವರು ಇಟ್ಟುಕೊಂಡಿರುವ 200ಗ್ರಾಂ ಸಕ್ಕರೆ, 100 ಗ್ರಾಂ ಚಾಹುಡಿಗಾಗಿ ಕಾದು ಕುಳಿತಿದ್ದಾರೆಯೇ? ನಕ್ಸಲ್ ಪೀಡಿತ ಪ್ರದೇಶಕ್ಕೆ ಬೇಕಾದ ರಸ್ತೆ, ವಿದ್ಯುತ್ ಮತ್ತು ಇತರ ಸೌಲಭ್ಯಗಳ ವ್ಯವಸ್ಥೆ ಮೊದಲಾಗಿ ಸರಕಾರ ಮಾಡಿಕೊಡಲಿ ಎಂದು ಆಗ್ರಹಿಸಿದರು.

ಕುಶವಂತ್‌ಸಿಂಗರು ಬರೆದ 'ಹುತಾತ್ಮ ಭಗತ್‌ಸಿಂಗ್' ಪುಸ್ತಕವನ್ನು ತಾನೇ ವಿಠಲನಿಗೆ ನೀಡಿದ್ದು ಎಂದು ಹೇಳಿದ ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ನಿಷೇಧಿತವಲ್ಲದ ಪುಸ್ತಕಗಳನ್ನು ಇಟ್ಟುಕೊಳ್ಳುವುದು ಹಾಗೂ ಓದುವುದು ಭಾರತದಲ್ಲಿ ದೇಶದ್ರೋಹವೇ ಎಂದು ಪ್ರಶ್ನಿಸಿದರು. ನಮ್ಮ ಪೋಲೀಸರಿಗೆ ಯಾವ ಸಂಘಟನೆಗಳು ಚುನಾವಣೆಯನ್ನು ಹಾಗೂ ಪ್ರಜಾಪ್ರಭುತ್ವವನ್ನು ಒಪ್ಪಿಕೊಳ್ಳುತ್ತವೆ ಮತ್ತು ಯಾವುದು ಒಪ್ಪಿಕೊಳ್ಳುವುದಿಲ್ಲ ಎಂಬುದರ ಪ್ರಾಥಮಿಕ ಜ್ಞಾನವೂ ಇಲ್ಲ. ಇದ್ದಿದ್ದರೆ ಅವರು ವಿಠಲನನ್ನು ಬಂಧಿಸುವ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದು ಲೇವಡಿ ಮಾಡಿದರು ಕಾನೂನು ರಕ್ಷಣೆ ಮಾಡುವವರಾಗಿದ್ದರೆ, ಪೋಲೀಸ್ ದಯಾನಂದ ಮಾನೆಯನ್ನು ಕೊಂದ ಪೋಲೀಸರ ಪತ್ತೆ ಹಚ್ಚಿ ಯಾಕೆ ಕೇಸು ದಾಖಲಿಸಿಲ್ಲ ಎಂದು ಪ್ರಶ್ನೆ ಹಾಕಿದರು.

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ದ.ಕ.ಜಿಲ್ಲಾ ಸಂಘಟಕರಲ್ಲೊಬ್ಬರಾದ ಶೇಖರ ಲಾಯಿಲ ಸ್ವಾಗತಿಸಿದರು. ಇನ್ನೊಬ್ಬ ಜಿಲ್ಲಾ ಸಂಘಟಕರಾದ ಲಿಂಗಪ್ಪ ನಂತೂರು ವಂದಿಸಿದರು. ಸಿಪಿಎಂ ಜಿಲ್ಲಾ ಸಮಿತಿ ಮುಖಂಡರಾದ ವಸಂತ ಆಚಾರಿ, ಕೃಷ್ಣಪ್ಪ ಸಾಲ್ಯಾನ್, ಸುನಿಲ್ ಕುಮಾರ್ ಬಜಾಲ್, ಸಮುದಾಯ ಸಾಂಸ್ಕೃತಿಕ ಸಂಘಟನೆಯ ವಾಸುದೇವ ಉಚ್ಚಿಲ್, ಆದಿವಾಸಿ ಹಕ್ಕು ಸಮಿತಿಯ ಜಯ ಕುಮಾರ್ ಮುಂತಾದವರು ಉಪಸ್ಥಿತರಿದ್ದರು. ಕುತ್ಲೂರು ಮಲೆಯ 50 ಕ್ಕೂ ಮೀರಿದ ಮಲೆಕುಡಿಯರು, ವಿಠಲನ ತಾಯಿ ಹೊನ್ನಮ್ಮ, ಬೆಳ್ತಂಗಡಿ ತಾಲೂಕು ಹಾಗೂ ಉಳ್ಳಾಲದ ಆದಿವಾಸಿ ಹಕ್ಕುಗಳ ಸಮಿತಿ ಸದಸ್ಯರು ಹೆಚ್ಚಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ರಾಜ್ಯ ಮುಖಂಡರ ನಿಯೋಗ ಉನ್ನತ ಪೋಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿ ಒತ್ತಾಯಿಸಿತು. ●

ಮಂಗಳೂರಿನಲ್ಲಿ ಅಖಿಲ ಭಾರತ ಕಿಸಾನ್‌ಸಭಾ 75ನೇ ವಾರ್ಷಿಕೋತ್ಸವ

ದೇಶದ ಸ್ವಾತಂತ್ರ್ಯದ ವೇಳೆಗೆ ರೈತರು ಕಂಡಿದ್ದ ಅಪಾರವಾದ ಕನಸುಗಳು ನುಚ್ಚು ನೂರಾಗಿವೆ. ರೈತರ ವಶವಿದ್ದ ಕೃಷಿಯನ್ನು ವಿದೇಶೀ ಸಂಸ್ಥೆಗಳಿಗೆ ನೀಡಲಾಗುತ್ತಿದೆ. ವಿದೇಶೀ ಸಾಮ್ರಾಜ್ಯಶಾಹಿ ರೈತನಿಗೆ ವೈರಿಯಾಗಿದೆ – ಎಂಬುದಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಮಾರುತಿ ಮಾನ್ಪಡೆ ನುಡಿದರು. ಅವರು ಮಾರ್ಚ್ 10 ರಂದು ಮಂಗಳೂರು ವಿ.ವಿ.ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಕಿಸಾನ್‌ಸಭಾದ 75ನೇ ವಾರ್ಷಿಕೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಿದ್ದರು.

. 1936 ಎಪ್ರಿಲ್ 11 ರಂದು ಲಕ್ನೋದಲ್ಲಿ ಅಖಿಲಭಾರತ ಕಿಸಾನ್‌ಸಭಾ ಸ್ಥಾಪನೆಗೊಂಡಿತು. ಅದಕ್ಕೆ ಕಮಲಾದೇವಿ ಚಟ್ಟೋಪಾಧ್ಯಾಯ ಅಧ್ಯಕ್ಷತೆ ವಹಿಸಿದ್ದರು. ರೈತರು ಅಂದಿನಿಂದಲೂ ದೇಶದಾದ್ಯಂತ ರೈತರ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದು, ಕೆಲವೊಂದು ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದಾರೆ. ಇವತ್ತು ಪಶ್ಚಿಮ ಬಂಗಾಳದಲ್ಲಿ ಹೋರಾಟದಿಂದಲಾಗಿ ರೈತರ ಪರಿಸ್ಥಿತಿ ಉತ್ತಮವಾಗಿದೆ. ಬಂಗಾಲವೊಂದರಲ್ಲೇ ಕಿಸಾನ್‌ಸಭಾಕ್ಕೆ 1 ಕೋಟಿ ರೈತರು ಸದಸ್ಯರಾಗಿದ್ದಾರೆ,

ಆದರೆ 1991ರ ಆನಂತರದ ದಿನಗಳಲ್ಲಿ ಜಾಗತೀಕರಣದ ಪ್ರಭಾವದಿಂದಾಗಿ ರೈತರ ಪರಿಸ್ಥಿತಿ ತೀರಾ ಹದಗೆಟ್ಟಿದ್ದು ಎರಡೂವರೆ ಲಕ್ಷಕ್ಕೂ ಹೆಚ್ಚು ರೈತರು ಈ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರಿಗೆ ಜಮೀನುದಾರರು, ಬಂಡವಾಳಶಾಹಿ ಗುತ್ತೇದಾರರು ಮತ್ತು ಸಾಮ್ರಾಜ್ಯಶಾಹಿಗಳು ಮೂರು ಮುಖ್ಯ ವೈರಿಗಳು. ರೈತರಿಗೆ ಅಗ್ಗದ ಬಡ್ಡಿ ದರದಲ್ಲಿ ಸಾಲ ಲಭ್ಯವಾಗುತ್ತಿಲ್ಲ. ಟೊಮೇಟೊ, ಮೆಣಸಿನಕಾಯಿ ಬೀಜಗಳ ಬೆಲೆ

ಪುಟ 15ಕ್ಕೆ

ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳು ಮಾಡಿದ 106 ಪರಿಚ್ಛೇದಗಳ ಸುದೀರ್ಘ ಭಾಷಣದಲ್ಲಿ ಒಂದು ಕಣ್ಣೋಟವೂ ಇರಲಿಲ್ಲ, ಅಲ್ಲದೆ, ಅದು ಉಪದೇಶಿಸಿದ ಹಲವು ಉನ್ನತ ಗುರಿಗಳನ್ನು ಸಾಧಿಸುವ ಬಗ್ಗೆ ವಿಶ್ವಾಸದ ಕೊರತೆಯೂ ಕಾಣ ಬರುತ್ತಿತ್ತು. ನಿಜವಾದ ಭಾರತದ ಪ್ರಸಕ್ತ ಜೀವನಾಧಾರ ಸ್ಥಿತಿ ಬದಲಾಗಬೇಕಾದರೆ, ಉತ್ತಮಗೊಳ್ಳಬೇಕಾದರೆ, ಅಸಮಾನತೆಗಳ ಬೆಳವಣಿಗೆಯನ್ನು ತಂದಿರುವ ಧೋರಣೆಗಳನ್ನು ಕೈಬಿಡಬೇಕಿದೆ ಎಂಬುದು ಸ್ಪಷ್ಟ. ಆದರೆ ರಾಷ್ಟ್ರಪತಿಗಳು ತನ್ನ ದೀರ್ಘ ಭಾಷಣದಲ್ಲಿ ಇದನ್ನೇ ತನ್ನ ಸರಕಾರ ಮಾಡುವುದಿಲ್ಲ ಎಂದು ಹೇಳಿದ್ದಾರೆ.



ರಾಷ್ಟ್ರಪತಿ ಭಾಷಣ
ಶ್ರೀಸಾಮಾನ್ಯನ ಬಗ್ಗೆ ಎಲ್ಲಿದೆ ಸಂವೇದನೆ?

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮಾರ್ಚ್ 14, 2012ರ ಸಂಚಿಕೆಯ ಸಂಪಾದಕೀಯ

ಸಂಸತ್ತಿನ ಬಜೆಟ್ ಅಧಿವೇಶನದ ಆರಂಭ ಎರಡೂ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳು ಮಾಡುವ ಭಾಷಣದೊಂದಿಗೆ ಆಗುತ್ತದೆ. ಈ ಬಾರಿ ಭಾರತದ ರಾಷ್ಟ್ರಪತಿಗಳು ಇತ್ತೀಚಿಗಿನ ವರ್ಷಗಳಲ್ಲೇ ಅತಿ ದೀರ್ಘವಾದ ಭಾಷಣವನ್ನೇ ಮಾಡಿದ್ದಾರೆ. ಈ ಹಿಂದೆ ಯಾವ ರಾಷ್ಟ್ರಪತಿಗಳೂ (ಬಹುಶಃ ರಾಜೇಂದ್ರ ಪ್ರಸಾದ್ ಅವರನ್ನು ಬಿಟ್ಟು) ಎರಡನೇ ಅವಧಿಗೆ ಮರಳಿಲ್ಲವಾದ್ದರಿಂದ ಈ ಬಾರಿಯ ರಾಷ್ಟ್ರಪತಿ ಭಾಷಣ, ಒಂದು ತೆರದಲ್ಲಿ ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿಗಳ ಒಂದು ಬೀಳ್ಕೊಡುಗೆ ಭಾಷಣವೆಂದೇ ಹೇಳಬಹುದು.

ಆದರೆ, 106 ಪರಿಚ್ಛೇದಗಳ ಈ ಭಾಷಣದಲ್ಲಿ ಒಂದು ಕಣ್ಣೋಟವೂ ಇರಲಿಲ್ಲ, ಅಲ್ಲದೆ, ಅದು ಉಪದೇಶಿಸಿದ ಹಲವು ಉನ್ನತ ಗುರಿಗಳನ್ನು ಸಾಧಿಸುವ ಬಗ್ಗೆ ವಿಶ್ವಾಸದ ಕೊರತೆಯೂ ಕಾಣ ಬರುತ್ತಿತ್ತು. 'ಆಮ್ ಆದ್ಮಿ'ಯ ಹೀನಸ್ಥಿತಿಯ ಬಗ್ಗೆ ಅದು ಸಂವೇದನಾಹೀನವಾಗಿತ್ತು; ನಿರಂತರ ಬೆಲೆಯೇರಿಕೆಯಂತಹ ನಮ್ಮ ಬಹುಪಾಲು ಜನತೆಯನ್ನು ಸುಡುತ್ತಿರುವ ಜ್ವಲಂತ ಪ್ರಶ್ನೆಗಳ ಬಗ್ಗೆ, ನಮ್ಮ ರೈತರ ಹತಾಶ ಆತ್ಮಹತ್ಯೆಗಳು ಮುಂದುವರೆಯುತ್ತಿರುವ ಬಗ್ಗೆ ಭಾಷಣದ ಸಂಪೂರ್ಣ ಮೌನ ಇದನ್ನು ಬಿಂಬಿಸಿದೆ.

ಪ್ರಧಾನಿ ಭಾಷಣದ ಪ್ರತಿಧ್ವನಿ

ಈ ಭಾಷಣದಲ್ಲಿ ಸಾಮಾನ್ಯವಾಗಿ ಇರದಿರುವ ಒಂದು ಸಂಗತಿಯೂ ಇತ್ತು. ಅದೆಂದರೆ, ಪ್ರಧಾನ ಮಂತ್ರಿಗಳು ದೇಶವನ್ನುದ್ದೇಶಿಸಿ ಮಾಡಿದ ಹೊಸ ವರ್ಷದ ಭಾಷಣದ ಅಕ್ಷರಶಃ ಪುನರಾವರ್ತನೆ. 'ನನ್ನ ಸರಕಾರ ಇಂದು ನಮ್ಮ ದೇಶ ಎದುರಿಸುತ್ತಿರುವ ಐದು ಮುಖ್ಯ ಸವಾಲುಗಳ ಮೇಲೆ ಕೆಲಸ ಮಾಡುತ್ತದೆ" ಎಂದು ರಾಷ್ಟ್ರಪತಿಗಳು ಹೇಳಿದರು. ಯಾವುದೀ ಸವಾಲುಗಳು? ಪ್ರಧಾನ ಮಂತ್ರಿಗಳು ದೇಶದ ಮುಂದಿಟ್ಟ ಅವೇ ಐದು ಸವಾಲುಗಳು–ರಾಷ್ಟ್ರೀಯ ಭದ್ರತೆ, ಆರ್ಥಿಕ ಭದ್ರತೆ, ಇಂಧನ ಭದ್ರತೆ, ಪರಿಸರ ಭದ್ರತೆ ಮತ್ತು ಜೀವನಾಧಾರ ಭದ್ರತೆ(ಜನತೆಗೆ ಶಿಕ್ಷಣ, ಆಹಾರ, ಆರೋಗ್ಯ ಮತ್ತು ಉದ್ಯೋಗ). ಸಾಮಾನ್ಯವಾಗಿ ಇಂತಹ ಭಾಷಣಗಳಲ್ಲಿ ಪ್ರಸ್ತಾವಿಸುವ ಬೇರೆಲ್ಲ ಪ್ರಶ್ನೆಗಳಲ್ಲದೆ, ಈ ಸವಾಲುಗಳನ್ನು ಹೇಗೆ ಎದುರಿಸಬೇಕೆಂದಿದ್ದಾರೆ ಎಂಬುದನ್ನು ಪರಿಶೀಲಿಸೋಣ.

ರಾಷ್ಟ್ರೀಯ ಭದ್ರತೆಯನ್ನು, ಅದು ಆಂತರಿಕವಾಗಲೀ, ಬಾಹ್ಯವಾಗಲೀ, ಬಲಪಡಿಸಬೇಕು ಎಂಬುದರಲ್ಲೇನೂ ವಿವಾದ ಅಥವ ಭಿನ್ನಾಭಿಪ್ರಾಯ ಇರಲು ಸಾಧ್ಯವಿಲ್ಲ. ಆದರೆ ಇತರ ಮೂರು ಗುರಿಗಳನ್ನು, ಅಂದರೆ ಆರ್ಥಿಕ, ಇಂಧನ ಮತ್ತು ಪರಿಸರ ಭದ್ರತೆಯನ್ನು ಸಾಧಿಸುವಲ್ಲಿ ಈಗ ಕುಖ್ಯಾತವಾಗಿರುವ ಪಿಪಿಪಿ (ಸಾರ್ವಜನಿಕ–ಖಾಸಗಿ–ಪಾಲುದಾರಿಕೆ)ಯನ್ನು ಪ್ರೋತ್ಸಾಹಿಸುವುದರ ಮೇಲೆಯೇ ಪ್ರತ್ಯೇಕವಾಗಿ ಪ್ರಧಾನ ಮಂತ್ರಿಗಳು ನೀಡಿದ ಒತ್ತನ್ನು ರಾಷ್ಟ್ರಪತಿಗಳೂ ಪ್ರತಿಧ್ವನಿಸಿದ್ದಾರೆ.

ಎರಡು ಭಾರತಗಳು

ತಮಾಷೆಯೆಂದರೆ, ಜೀವನಾಧಾರದ ಭದ್ರತೆಯನ್ನು ಸಾಧಿಸುವ ಗುರಿ, ಮರುದಿನವೇ, ಭಾರತದ ಜನಗಣತಿ ಸಂಸ್ಥೆ 'ಮನೆಪಟ್ಟಿ ಮತ್ತು ವಸತಿ ಜನಗಣತಿ'ಯ ಮಾಹಿತಿಯನ್ನು ಪ್ರಕಟಿಸಿದಾಗ ಬಯಲಿಗೆ ಬಂತು. ಈ ಮಾಹಿತಿ, ಐದು ವರ್ಷಗಳ ಹಿಂದೆ, ಇದೇ ರಾಷ್ಟ್ರಪತಿಗಳು ಅಧಿಕಾರ ವಹಿಸಿಕೊಂಡು ಮಾಡಿದ ಚೊಚ್ಚಲ ಭಾಷಣಕ್ಕೆ ಸ್ಪಂದಿಸುತ್ತ ಇದೇ ಅಂಕಣದಲ್ಲಿ ಹೇಳಿದ ಸಂಗತಿಯನ್ನು ದೃಢಪಡಿಸಿದೆ. ಆಕೆಯ ಸರಕಾರದ ಆರ್ಥಿಕ ಧೋರಣೆಗಳು ಎರಡು ಭಾರತಗಳನ್ನು– ಒಂದು, ಒಂದು ಸಣ್ಣ ಭಾಗದ ಜನರಿಗೆ 'ಹೊಳೆಯುವ' ಮತ್ತು ಇನ್ನೊಂದು ಬಹುಪಾಲು ಜನರಿಗೆ 'ನರಳುವ' ಭಾರತವನ್ನು – ಸೃಷ್ಟಿಸುತ್ತಿವೆ ಎಂದಿದ್ದೆವು.

ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಪರಾಕು ಹಾಡುವವರು ದೇಶದಲ್ಲಿ ಮೊಬೈಲ್ ಟೆಲಿಫೋನ್ ಬಳಸುವವರ ಸಂಖ್ಯೆಯಲ್ಲಿ ಆಗಿರುವ ಅಗಾಧ ಹೆಚ್ಚಳದ ಡಂಗುರ ಸಾರುತ್ತಿದ್ದಾರೆ. ಈ ಸಂಖ್ಯೆ ಈಗ 53.2ಶೇ. ಅಥವ ಸುಮಾರು 60 ಕೋಟಿ ಎನ್ನುತ್ತದೆ ಈ ಮಾಹಿತಿ. ಆದರೆ ಸುಮಾರಾಗಿ ಇಷ್ಟೇ ಶೇಕಡ ಕುಟುಂಬಗಳವರಿಗೆ ತಮ್ಮ ಮನೆಗಳಲ್ಲಿ ಸರಿಯಾದ ಶೌಚಾಲಯಗಳಿಲ್ಲ ಎಂದು ಇದೇ ಮಾಹಿತಿ ಹೇಳಿರುವುದು ಈ ಕಥೆಯ ಇನ್ನೊಂದು ಭಾಗ. ಈ ಸೌಕರ್ಯ ಇರುವವರಲ್ಲಿ ಕೂಡ ಸುಮಾರು 50 ಶೇಕಡಾ ಚರಂಡಿಯಿಲ್ಲದೆ ಸರಿಯಾದ ನೈರ್ಮಲ್ಯವನ್ನು ಹೊಂದಿಲ್ಲ. ಭಾರತದ 68 ಶೇಕಡಾ ಶುದ್ಧೀಕರಿಸದ ಕುಡಿಯುವ ನೀರನ್ನು ಬಳಸುತ್ತಾರೆ. 37.1 ಶೇ. ಕುಟುಂಬಗಳು ಒಂಟಿ ಕೋಣೆಯ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ನಮ್ಮ ಜನಸಂಖ್ಯೆಯ ಸುಮಾರು ಮೂರನೇ ಒಂದು ಪಾಲು ಮಂದಿಗೆ ವಿದ್ಯುತ್ ಸಂಪರ್ಕವಿಲ್ಲ, 50 ಶೇಕಡಾದಷ್ಟು ಕುಟುಂಬಗಳು ಅಡುಗೆಗೆ ಈಗಲೂ ಕಟ್ಟಿಗೆಯನ್ನೇ ಬಳಸುತ್ತವೆ. ನಾಲ್ಕು ಚಕ್ರಗಳ ವಾಹನ ಹೊಂದಿರುವ ಭಾರತೀಯ ಕುಟುಂಬಗಳ ಸಂಖ್ಯೆ 5 ಶೇಕಡಾಕ್ಕಿಂತಲೂ ಕಡಿಮೆ. ಇನ್ನೂ ಶೋಚನೀಯ ಸಂಗತಿಯೆಂದರೆ ಎಲ್ಲ ಕುಟುಂಬಗಳಲ್ಲಿ 18 ಶೇಕಡಾದಷ್ಟು (ಇದರಲ್ಲಿ 23 ಶೇ. ಗ್ರಾಮೀಣ ಕುಟುಂಬಗಳೂ ಸೇರಿವೆ) ಈ ಜನಗಣತಿ ನಿರೂಪಿಸಿದ ಆಸ್ತಿಗಳಲ್ಲಿ ಯಾವುದನ್ನೂ ಹೊಂದಿಲ್ಲ. ಅಂದರೆ ಈ ಕುಟುಂಬಗಳಿಗೆ ಒಂದು ಕೋಣೆಯ ವಸತಿಯೂ ಇಲ್ಲ. ಹೀಗೆ ಗ್ರಾಮೀಣ ಭಾರತದ ಕಾಲುಭಾಗ ಜನ ತಲೆಯ ಮೇಲೊಂದು ಸೂರೂ ಇಲ್ಲದೆ ಬದುಕಿದ್ದಾರೆ.

ಇದೀಗ ನಿಜವಾದ ಭಾರತದ ಪ್ರಸಕ್ತ ಜೀವನಾಧಾರ ಸ್ಥಿತಿ.

ಪ್ರಸಕ್ತ ಸಮರ

ಇದು ಬದಲಾಗಬೇಕಾದರೆ, ಉತ್ತಮಗೊಳ್ಳಬೇಕಾದರೆ, ಇಂತಹ ಅಸಮಾನತೆಗಳ ಬೆಳವಣಿಗೆಯನ್ನು ತಂದಿರುವ, ಸಾಂಸ್ಥೀಕರಿಸಿರುವ ಧೋರಣೆಗಳನ್ನು ಕೈಬಿಡಬೇಕಿದೆ ಎಂಬುದು ಸ್ಪಷ್ಟ. ಇದನ್ನೇ ತನ್ನ ಸರಕಾರ ಮಾಡುವುದಿಲ್ಲ ಎಂದು ತನ್ನ ದೀರ್ಘ ಭಾಷಣದಲ್ಲಿ ರಾಷ್ಟ್ರಪತಿಗಳು ಹೇಳುತ್ತಾರೆ. ಬದಲಿಗೆ, ಹೊಸ ನವ–ಉದಾರವಾದಿ ಸುಧಾರಣೆಗಳನ್ನು ತರಲಾಗುವುದಂತೆ; ಇದು ಎರಡು ಭಾರತಗಳ ನಡುವಿನ ಈ ಕಂದರವನ್ನು ಇನ್ನಷ್ಟು ಹೆಚ್ಚಿಸುತ್ತದಷ್ಟೇ.

ಒಂದು ಉತ್ತಮ ಭಾರತದ ನಿರ್ಮಾಣಕ್ಕೆ ಈ ಐದು ಭದ್ರತೆಗಳ ಸಾಧನೆಯ ಅಗತ್ಯವಿದೆ ಎಂಬುದರ ಬಗ್ಗೆಯೇನೂ ವಿವಾದವಿಲ್ಲ. ಆದರೆ ವಾಸ್ತವ ಸಂಗತಿಯೆಂದರೆ, ನಮ್ಮ ಬಹುಪಾಲು ಜನತೆಗೆ ತದ್ವಿರುದ್ಧವಾದದ್ದನ್ನೇ ಒದಗಿಸಲಾಗುತ್ತಿದೆ.

ಹೀಗೆ ನಮ್ಮೆಲ್ಲಾ ಜನತೆಗೆ ನಿಜವಾದ ಜೀವನಾಧಾರ ಭದ್ರತೆಯನ್ನು ಸಾಧಿಸುವ, ಅವರ ಬದುಕಿನ ಆರೋಗ್ಯವನ್ನು ಉತ್ತಮಪಡಿಸುವ ಒಂದು ಹಾದಿಯಲ್ಲಿ ಮುನ್ನಡೆಸುವ ಸವಾಲನ್ನು ಎದುರಿಸಬೇಕಾದರೆ, ಈ ಸರಕಾರದ ಧೋರಣೆಯ ದಿಕ್ಕನ್ನು ನಮ್ಮೆಲ್ಲ ಜನತೆಗೆ ನಿಜವಾದ ಜೀವನಾಧಾರ ಭದ್ರತೆಯನ್ನು ಕಲ್ಪಿಸುವ ಒಂದು ಉತ್ತಮ ಭಾರತವನ್ನು ಕಟ್ಟುವತ್ತ ಬದಲಿಸುವ ಜನತೆಯ ಹೋರಾಟಗಳನ್ನು ತೀವ್ರಗೊಳಿಸುವುದು ಅನಿವಾರ್ಯ. ನಮ್ಮ ಬಹುಪಾಲು ಜನತೆ ಮತ್ತು ನಮ್ಮ ಸರಕಾರದ ಪ್ರಸಕ್ತ ಧೋರಣೆಯ ದಿಕ್ಕಿನ ನಡುವೆ ಈಗ ನಡೆದಿರುವ ಈ ಸಮರದ ಫಲಿತಾಂಶವೇ ಕೇವಲ ಕೆಲವರಿಗಷ್ಟೇ ಅಲ್ಲದೆ, ಎಲ್ಲ ಜನತೆಗೆ ಒಂದು ಉತ್ತಮ ಭಾರತದ ಭವಿಷ್ಯವನ್ನು ನಿರೂಪಿಸುತ್ತದೆ.

ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ
ಡಿ.ವೈ.ಎಫ್.ಐ ನ ಅಖಿಲ ಭಾರತ ಸಮ್ಮೇಳನ
ಸಿದ್ಧತೆಗೆ ಚಾಲನೆ: ಏಪ್ರಿಲ್ 1 ರಂದು ಸ್ವಾಗತ ಸಮಿತಿ ರಚನಾ ಸಭೆ

ಭಾರತವೆಂದರೆ ಯುವಭಾರತವೆಂದೇ ಇಂದು ಕರೆಯಲಾಗುತ್ತಿದೆ. ಇಲ್ಲೀಗ ಯುವಜನರ ಸಂಖ್ಯೆಯೇ ಒಟ್ಟು ಜನ ಸಂಖ್ಯೆಯ ಶೇ.52.5 . ಅಂದರೆ ಸುಮಾರು 60 ಕೋಟಿ. ಇಂತಹ ಯುವ ಜನತೆಯನ್ನು ಪ್ರಗತಿಪರ, ಧರ್ಮ ನಿರಪೇಕ್ಷಿತ, ಪ್ರಜಾಸತ್ತಾತ್ಮಕ ಆಂದೋಲನವನ್ನಾಗಿ ಸಂಘಟಿಸಲು ಡಿವೈಎಫ್ಐ ತೊಡಗಿದೆ. ದೇಶದಲ್ಲಿ 1 ಕೋಟಿ 36 ಲಕ್ಷ ಸದಸ್ಯರನ್ನು ಹೊಂದಿ, ಪ್ರಪಂಚದಲ್ಲೇ ಎರಡನೆಯ ಅತಿ ದೊಡ್ಡ ಯುವಜನ ಸಂಘಟನೆಯಾದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ)ನ 9ನೇ ಅಖಿಲ ಭಾರತ ಸಮ್ಮೇಳನವನ್ನು ಕರ್ನಾಟಕದ ರಾಜಧಾನಿ, ಪ್ರಖ್ಯಾತ ಬೆಂಗಳೂರು ಮಹಾ ನಗರದಲ್ಲಿ ನಡೆಸಲು ಅದರ ಕೇಂದ್ರ ಸಮಿತಿಯು ಉದ್ದೇಶಿಸಿದೆ. ಇದೇ ಮಾರ್ಚ್ 2 ಮತ್ತು 3ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಬಂದಿದ್ದ ಆಹ್ವಾನವನ್ನು ಡಿವೈಎಫ್ಐ ರಾಜ್ಯ ಸಮಿತಿಯು ಒಪ್ಪಿದೆ. ತನ್ನ ಸದಸ್ಯರ, ಕಾರ್ಯಕರ್ತರ ವಿಶೇಷವಾಗಿ ವಿವಿಧ ಪ್ರಗತಿಪರ, ಪ್ರಜಾಸತ್ತಾತ್ಮಕ ಸಂಘಟನೆಗಳು,ಎಡ ಶಕ್ತಿಗಳು, ವಿವಿಧ ವಿಭಾಗಗಳ ಪ್ರಮುಖರು, ಹಿತೈಷಿಗಳ ಸಕ್ರಿಯ ಸರ್ವ ಸಹಕಾರಗಳಿಂದ ಚಾರಿತ್ರಿಕ ಘಟನೆಯನ್ನು ಯಶಸ್ವಿಗೊಳಿಸುವ ವಿಶ್ವಾಸವನ್ನು ಸಂಘಟನೆ ವ್ಯಕ್ತಪಡಿಸಿದೆ.

ಈ ರಾಷ್ಟ್ರ ಸಮ್ಮೇಳನ ವು ಇದೇ ಸೆಪ್ಟಂಬರ್ ತಿಂಗಳ ಎರಡನೇ ವಾರದಲ್ಲಿ ಜರುಗಬೇಕಿದೆ. ಡಿವೈಎಫ್ಐ ನ ರಾಷ್ಟ್ರ ಸಮ್ಮೇಳನವನ್ನು ಕರ್ನಾಟಕದಲ್ಲಿ ಸಂಘಟಿಸುತ್ತಿರುವುದು ಪ್ರಪ್ರಥಮವಾಗಿದೆ. ಇಂತಹ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಲು ವಿಶಾಲ ನೆಲೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗುತ್ತಿದ್ದು ಇದೇ ಏಪ್ರಿಲ್ 1 ರಂದು ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಹಾಲ್ ನಲ್ಲಿ ಬೆಳಗ್ಗೆ 10.30ಕ್ಕೆ ಕರೆಯಲಾಗಿದೆ. ಇದರಲ್ಲಿ ಅಖಿಲ ಭಾರತ ಅಧ್ಯಕ್ಷರಾದ ಶಾಸಕ ಶ್ರೀರಾಮ ಕೃಷ್ಣನ್, ಪ್ರಧಾನ ಕಾರ್ಯದರ್ಶಿ ತಪಸ್‌ಸಿನ್ಹಾ, ಸಂಸದ, ಉಪಾಧ್ಯಕ್ಷ ಎಂ.ಬಿ.ರಾಜೇಶ್ ಆಗಮಿಸಲಿದ್ದಾರೆ. ಸರ್ವರೂ ಸಮ್ಮೇಳನದ ಯಶಸ್ಸಿಗೆ ಕೈ ಜೋಡಿಸಬೇಕೆಂದು ವಿನಂತಿಸಿ ಸ್ವಾಗತ ಸಮಿತಿಯ ಸಭೆಗೆ ಆಹ್ವಾನಿಸಲಾಗಿದೆ.

ರೈಲ್ವೆ ಬಜೆಟ್ 2012

ಜನರ ಬೆನ್ನಮೇಲೆ ದರ ಹೇರಿಕೆಯ ಹೊರೆ ಮತ್ತು ರಾಜೀನಾಮೆ ಎಂಬ ಗಿಮಿಕ್

ಕರ್ನಾಟಕಕ್ಕೆ ಅನ್ಯಾಯ

ಬಾಲಕೃಷ್ಣ ಶೆಟ್ಟಿ

ಬಜೆಟ್ ಮಂಡಿಸಿದ ದಿನ ರೈಲು ದರ ಹೆಚ್ಚಳ ವಿರೋಧಿಸಿ ಜನಶಕ್ತಿಗೊಂದು ಲೇಖನ ಬರೆಯ ಬೇಕೆಂದು ಆಲೋಚಿಸುತ್ತಿರುವಾಗಲೇ ರೈಲ್ವೆ ಮಂತ್ರಿ ದಿನೇಶ್ ತ್ರಿವೇದಿ ರಾಜೀನಾಮೆ ನೀಡಬೇಕೆಂದು ತೃಣಮೂಲ ಕಾಂಗ್ರೆಸ್‌ನ ಮುಖಂಡರಾದ ಮಮತಾ ಬ್ಯಾನರ್ಜಿ ಒತ್ತಾಯಿಸಿದ್ದರು. ಮರುದಿನ ಬೆಳಿಗ್ಗೆ ನೋಡಿದರೆ ರಾಜೀನಾಮೆ ಅಂಗೀಕಾರ ಆಗಿದೆ ಎಂದು ಒಮ್ಮೆ ಸುದ್ದಿ ಬಂದರೆ, ಪ್ರಧಾನಮಂತ್ರಿಯವರ ಚಿಂತನೆಯಲ್ಲಿದೆ ಎಂದು ಇನ್ನೊಂದು ಸುದ್ದಿಬಂತು. ಆದರೆ ಏರಿಸಿದ ಬೆಲೆಗಳು ಮಾತ್ರ ಇಳಿಯಲೇ ಇಲ್ಲ. ಕಾಂಗ್ರೆಸ್ ಸರ್ಕಾರದ ಧೋರಣೆಯನ್ನು ಗಮನಿಸಿದರೆ, ತೀವ್ರವಾದ ಚಳುವಳಿ ನಡೆಯದೇ ಹೋದಲ್ಲಿ ಯಾವ ಬೆಲೆ ಏರಿಕೆಗೂ ತಡೆ ಇರುವುದಿಲ್ಲ.

ಹಾಗೆ ನೋಡಿದರೆ, ಬೆಲೆ ಏರಿಕೆ ತಡೆಯಬೇಕೆಂಬುದು ಮಮತಾ ಬ್ಯಾನರ್ಜಿಯವರ ಉದ್ದೇಶವೂ ಅಲ್ಲ! ಅಂತಹ ಉದ್ದೇಶ ಇದ್ದಿದ್ದರೆ, ಫೆಬ್ರುವರಿ 28ರಂದು ಕಾರ್ಮಿಕ ಸಂಘಟನೆಗಳು ಬೆಲೆಏರಿಕೆ ವಿರುದ್ಧ ನಡೆಸಿದ ಮುಷ್ಕರವನ್ನು ವಿರೋಧಿಸುತ್ತಿರಲಿಲ್ಲ. ಮಾತ್ರವಲ್ಲ ಬೆಲೆ ಏರಿಕೆ ವಿರುದ್ಧ ಜನರನ್ನು ಸಂಘಟಿಸುತ್ತಿದ್ದ ಬರ್ದ್ವಾನ್ ಜಿಲ್ಲೆಯ ಇಬ್ಬರು ಸಿಪಿಐ(ಎಂ)ನ ಪ್ರಮುಖ ಮುಖಂಡರನ್ನು (ಒಬ್ಬರು ಮಾಜಿ ಶಾಸಕರು) ತಮ್ಮ ಪಕ್ಷದವರೇ ಆದ ತೃಣಮೂಲ ಕಾಂಗ್ರೆಸ್ಸಿನ ಗೂಂಡಾಗಳು ಹತ್ಯೆಗೈದಾಗ ಕಣ್ಣೀರು ಸುರಿಸುವುದಿರಲಿ, ಕನಿಕರದ ಮಾತುಗಳನ್ನೂ ಆಡಲಿಲ್ಲ. ಆದ್ದರಿಂದ ಮಮತಾ ಬ್ಯಾನರ್ಜಿಯವರ 'ಅಜ್ಞೆ'ಯ ಮೇರೆಗೆ ರೈಲ್ವೆ ಮಂತ್ರಿ ನೀಡಿದ ರಾಜೀನಾಮೆ, ರಾಜಕೀಯ ಗಿಮಿಕ್ ಅಲ್ಲದೆ ಬೇರೇನೂ ಅಲ್ಲ.

ಈ ರಾಜೀನಾಮೆಯಲ್ಲಿ ಅಡಗಿರುವ ಇನ್ನೊಂದು ಅಂಶವೆಂದರೆ ಕೆಲವುದಿನಗಳಿಂದ ರೈಲ್ವೆಮಂತ್ರಿ ದಿನೇಶ್ ತ್ರೀವೇದಿಯವರಿಗೂ ಮತ್ತು ಮಾಜಿ ರೈಲ್ವೆ ಮಂತ್ರಿ 'ದೀದಿ,'ಯವರಿಗೂ ಮನಸ್ತಾಪ ಉಂಟಾಗಿತ್ತು. ಕಲ್ಕತ್ತ ಮೂಲಗಳಿಂದ ಬಂದ ಸುದ್ದಿಯ ಪ್ರಕಾರ, ದರ ಹೆಚ್ಚಳ ಮಾಡುವ ವಿಚಾರವನ್ನು ಮಮತಾ ಬ್ಯಾನರ್ಜಿಯವರ ಗಮನಕ್ಕೆ ಕೂಡಾ ತರಲಾಗಿತ್ತು. ದಿನೇಶ್ ತ್ರೀವೇದಿಯವರ ರೆಕ್ಕೆಯನ್ನು 'ಕಟ್' ಮಾಡಲು ಬಯಸಿದ ಬ್ಯಾನರ್ಜಿಯವರು ಅಗ್ಗದ ಜನಪ್ರಿಯತೆಗಾಗಿ ಸೂಕ್ತ ಸಮಯಕ್ಕೆ ಕಾಯುತ್ತಿದ್ದರು. ಅತ್ತ ಲೋಕ ಸಭೆಯಲ್ಲಿ ಬೆಲೆ ಏರಿಕೆಯನ್ನು ಘೋಷಿಸುತ್ತಲೇ ಇತ್ತ ರಾಜೀನಾಮೆ ನೀಡಬೇಕೆಂಬ 'ಆಜ್ಞೆ'ಯ ನಾಟಕ ವನ್ನು ಆಡಿದರು.



ಪ್ರಯಾಣ ಮತ್ತು ಸಾಗಾಣಿಕೆ ದರ – ಎರಡೂ ಹೆಚ್ಚಳ:

ಪ್ರಯಾಣ ದರವನ್ನು ಬಜೆಟ್‌ನಲ್ಲಿ ಹೆಚ್ಚಿಸಿದರೆ, ಸಾಗಾಣಿಕೆ ದರವನ್ನು ನೋಟಿಫಿಕೇಶನ್ ಮೂಲಕ ಮಾರ್ಚ್ 6 ರಂದು ಹೆಚ್ಚಿಸಲಾಗಿತ್ತು. ಕಿ.ಮೀಟರಿಗೆ ಪೈಸೆಗಳ ಲೆಕ್ಕದಲ್ಲಿ ಹೆಚ್ಚಳವನ್ನು ತೋರಿಸುವುದರ ಮೂಲಕ ದರ ಏರಿಕೆ ನಗಣ್ಯ ಎಂಬಂತೆ ಬಿಂಬಿಸಲಾಗುತ್ತಿದೆ. ಆದರೆ ಬೆಂಗಳೂರಿನಿಂದ ಗುಲ್ಬರ್ಗಾ ಪ್ರಯಾಣಿಸುವವರಿಗೆ ಸ್ಲೀಪರ್ ದರ್ಜೆಯಲ್ಲಿ ಕನಿಷ್ಠ ರೂ 35 ರಿಂದ 40 ಹೆಚ್ಚಳವಾಗುತ್ತದೆ. ದೆಹಲಿಯಿಂದ ತಿರುವನಂತಪುರಕ್ಕೆ ಹೋಗುವವರು 156 ರೂ. ಹೆಚ್ಚಳ ನೀಡಬೇಕಾಗುತ್ತದೆ. ಪ್ಲಾಟ್ ಪಾರಂ ಟಿಕೆಟ್ ದರವನ್ನು ಸಹ ರೂ 3/– ರಿಂದ 5/ –ಕ್ಕೇರಿಸಿದ್ದ ಕೇಂದ್ರ ಸರ್ಕಾರದ ನೀತಿಗೆ ಏನೆನ್ನಬೇಕು?

ಮಾರ್ಚ್ 6ರಂದು ಹೊರಡಿಸಿದ ಸಾಗಣಿಕೆ ದರ ಶೇ 20 ರಷ್ಟು ಹೆಚ್ಚಳ ಆಗಿದೆ. ಅಂದರೆ ಹಿಂದೆ ಸಾಗಣಿಕೆ ದರ ರೂ. 100/ – ಇದ್ದರೆ ಇನ್ನು ಮುಂದೆ ರೂ. 120/– ಆಗುತ್ತದೆ. ಆಹಾರಧಾನ್ಯ, ಸಿಮೆಂಟ್, ಗೊಬ್ಬರ, ಕಲ್ಲಿದ್ದಲು, ಮೊದಲಾದ ಅಗತ್ಯ ವಸ್ತುಗಳ ಸಾಗಣಿಕೆ ದರವೂ ಹೆಚ್ಚಳವಾಗಿರುವುದರಿಂದ ಎಲ್ಲ ವಸ್ತುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇನ್ನೂ ಅಪಾಯಕಾರಿಯಾದ ಅಂಶವೆಂದರೆ ಇನ್ನು ಮುಂದೆ ಪ್ರಯಾಣ ದರವನ್ನು ಇಂಧನ ದರಕ್ಕೆ ಜೋಡಿಸಲಾಗುತ್ತದೆ. ಅಂದರೆ, ಡೀಸೆಲ್, ವಿದ್ಯುತ್ ಅಥವಾ ಕಲ್ಲಿದ್ದಲು ದರ ಹೆಚ್ಚಳವಾದಲ್ಲಿ ರೈಲು ಪ್ರಯಾಣ ಹಾಗೂ ಸಾಗಣಿಕ ದರವನ್ನು ಹೆಚ್ಚಿಸಲಾಗುವುದು. ಬಜೆಟ್‌ಗಾಗಿ ಕಾಯಬೇಕಾಗಿಲ್ಲ. –ಈಗ 15 ದಿನಗಳಿಗೊಮ್ಮೆ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದಂತೆ. ಇದೂ ಸಾಲದೆಂಬಂತೆ ಬೆಲೆ ಏರಿಕೆ ಶಿಫಾರಸ್ಸಿಗೆ ಪ್ರಾಧಿಕಾರವನ್ನು ರಚಿಸಲಾಗುವುದು. 'ಬೀಸೋ ದೊಣ್ಣೆ'ಯಿಂದ ತಪ್ಪಿಸಿಕೊಳ್ಳುವ ವಿಧಾನ! ವಿದ್ಯುತ್ ದರ ಹೆಚ್ಚಿಸಲು ಕೆ.ಇ.ಆರ್.ಸಿ.ಯನ್ನು ಬಳಸಿಕೊಂಡಂತೆ.

ಲಾಭದಿಂದ ನಷ್ಟಕ್ಕೆ:

ಯುಪಿಎ–1 ಸರ್ಕಾರದ ಅಡಿಯಲ್ಲಿ ಲಾಭದಲ್ಲಿದ್ದ ರೈಲ್ವೆ ಈಗ ನಷ್ಟದಲ್ಲಿದೆ. ಕಳೆದ ವರ್ಷ 3000 ಕೋಟಿ ರೂ. ಕೇಂದ್ರ ಸರ್ಕಾರದಿಂದ ಸಾಲ ಎತ್ತಿದ ರೈಲ್ವೆ ಇಲಾಖೆ, ಈ ಬಾರಿ 11,000 ಕೋಟಿ ರೂ. ಸಾಲ ಎತ್ತುವ ಯೋಜನೆ ಹೊಂದಿದೆ. ಇದರೊಂದಿಗೆ 2011–12 ರಲ್ಲಿ ಶೇ 91.1 ಇದ್ದ ಆದಾಯ ಮತ್ತು ಖರ್ಚು ಪ್ರಮಾಣವು ಶೇ. 95 ಕ್ಕೆ ಏರಿದೆ. ಅಂದರೆ ಹಿಂದೆ ರೂ.100/– ಆದಾಯ ಬರಲು 91.90 ರೂ. ಖರ್ಚು ಮಾಡಬೇಕೆಂದಿದ್ದರೆ, ಇನ್ನು ಮುಂದೆ ರೂ.95/ – ಖರ್ಚು ಮಾಡಬೇಕಾಗುತ್ತದೆ. ಇದು ರೈಲ್ವೆ ಇಲಾಖೆಯ ಪರಿಸ್ಥಿತಿ ದಿನದಿಂದ ದಿನಕ್ಕೆ ಕುಸಿಯುತ್ತಿರುವುದನ್ನು ಸೂಚಿಸುತ್ತದೆ.

ರೈಲ್ವೆ ಇಲಾಖೆಯ ದಕ್ಷತೆಗೆ ಇನ್ನೊಂದು ಉದಾಹರಣೆ – ಸಾಮಾನು ಮತ್ತು ಸರಕುಗಳ ಸಾಗಾಣಿಕೆಯಲ್ಲಿ ಗುರಿಮುಟ್ಟಲು ಸಾಧ್ಯವಾಗದಿರುವುದು. ಕಳೆದ ವರ್ಷದ ಬಜೆಟ್ ಪ್ರಕಾರ ಸಾಗಣಿಕೆಯ ಗುರಿಯನ್ನು 23 ಮಿಲಿಯ ಟನ್ ಎಂದು ನಿಗದಿ ಪಡಿಸಲಾಗಿತ್ತು. ಆದರೆ ಇದನ್ನು ತಲುಪಲು ಸಾಧ್ಯವಾಗಿಲ್ಲ. ಮಾತ್ರವಲ್ಲ ಆದಾಯದ ಒಟ್ಟು ಗುರಿಯಲ್ಲಿ 2000 ಕೋಟಿ ರೂ. ಕೊರತೆ ಉಂಟಾಗಿದೆ. ದೇಶದ ಆರ್ಥಿಕತೆ ಶೇ 7–8 ಹೆಚ್ಚಾಗುತ್ತಿದೆ ಎಂದು ಘೋಷಿಸುತ್ತಿರುವಾಗಲೇ ಸಾಮಾನು, ಸರಕುಗಳ ಸಾಗಾಣಿಕೆಯಲ್ಲಿ ಕೊರತೆ ಅನುಭವಿಸುತ್ತಿರುವುದು ಆಶ್ಚರ್ಯಕರ.

ಟೊಳ್ಳು ಘೋಷಣೆ:

ಯು.ಪಿ.ಎ.2 ಸರ್ಕಾರವು ಟೊಳ್ಳು ಘೋಷಣೆಗಳ ಮೂಲಕ ಜನರನ್ನು ಮೋಸಗೊಳಿಸುತ್ತಿದೆ ಎನ್ನುವುದಕ್ಕೆ ಹಲವಾರು ಉದಾಹರಣೆಗಳನ್ನು ನೀಡಬಹುದು. 2010ರ ರೈಲ್ವೆ ಬಜೆಟ್‌ನಲ್ಲಿ, ಬೆಂಗಳೂರು ಸೇರಿದಂತೆ, 50 ರೈಲ್ವೆ ಸ್ಟೇಷನ್‌ಗಳನ್ನು 'ವಿಶ್ವದರ್ಜೆ'ಗೆ ಏರಿಸಲಾಗುವುದು ಎಂದು ಹೇಳಲಾಗಿತ್ತು. ಅಂತಹ ಯಾವುದೇ ಪ್ರಗತಿಯನ್ನು ಬೆಂಗಳೂರಿನಲ್ಲಾಗಲೀ, ಇತರೆ ನಿಲ್ದಾಣಗಳಲ್ಲಾಗಲೀ ಕಾಣುತ್ತಿಲ್ಲ. ಅಂತೆಯೇ ಕುಡಿಯುವ ನೀರಿಗಾಗಿ '6 ಬಾಟ್ಲಿಂಗ್ ಪ್ಲಾಂಟ್', ಆರೋಗ್ಯಕ್ಕಾಗಿ '40 ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ಸೇರಿದಂತೆ, 522 ಆಸ್ಪತ್ರೆಗಳು' ಶಿಕ್ಷಣಕ್ಕಾಗಿ '50 ಕೇಂದ್ರೀಯ ವಿದ್ಯಾಲಯಗಳು' ಇತ್ಯಾದಿಗಳ ಸ್ಥಾಪನೆ ಘೋಷಣೆಯೂ ಬರೀ ಘೋಷಣೆಯಾಗಿಯೇ ಉಳಿದಿದೆ.

ಇದೀಗ 'ಭಾರತ ರೈಲ್ವೆ ನಿಲ್ದಾಣ ಅಭಿವೃದ್ಧಿ ನಿಗಮ'ವನ್ನು ಖಾಸಗಿ ಸಹಭಾಗಿತ್ವದೊಂದಿಗೆ ಆರಂಭಿಸುವುದಾಗಿ ಘೋಷಿಸಲಾಗಿದ್ದು ರೈಲ್ವೆ ಇಲಾಖೆಯ ಖಾಸಗೀಕರಣ ಪ್ರಕ್ರಿಯೆಯನ್ನು ತೀವ್ರಗೊಳಿಸುವತ್ತ ಮುನ್ನುಗ್ಗುತ್ತಿದೆ.

2011–12 ರಲ್ಲಿ 80,000 ಹೊಸ ನೇಮಕಾತಿಗಳನ್ನು ಮಾಡಲಾಗಿದೆ ಎಂದು ರೈಲ್ವೆ ಸಚಿವರು ಬಡಾಯಿ ಕೊಚ್ಚಿ ಕೊಂಡಿದ್ದಾರೆ. ಆದರೆ ಅವರೇ ನೀಡಿದ ಅಂಕಿ ಅಂಶಗಳ ಪ್ರಕಾರ, 2010ರ ಮಾರ್ಚಿಯಲ್ಲಿ 13.66 ಲಕ್ಷವಿದ್ದ ನೌಕರರ ಸಂಖ್ಯೆ 2011 ರ ಮಾರ್ಚ್ ಹೊತ್ತಿಗೆ 13.62 ಲಕ್ಷಕ್ಕೆ ಇಳಿದಿದೆ. ಅಂದರೆ 4000 ದಷ್ಟು ಕಡಿಮೆಯಾಗಿದೆ. 2011–12ರಲ್ಲಿ ಒಟ್ಟು ಉದ್ಯೋಗಿಗಳ ಅಂಕಿ ಅಂಶವನ್ನು ನೀಡಲೇ ಇಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ದೇಶದ ಆರ್ಥಿಕತೆಯ ಕೇಂದ್ರ

ಪುಟ 10ಕ್ಕೆ



ಎತ್ತ ಸಾಗುತ್ತಿದೆ ಭಾರತ

ರಾಜ್ಯದ ಬರ, ಬರಡುತನ ನಿವಾರಣೆಗೆ ಶಾಶ್ವತ ಪರಿಹಾರ ಜಲಸಂಪನ್ಮೂಲದ ಸಮರ್ಥ ಬಳಕೆಯ ಸಮಗ್ರ ಯೋಜನೆ

ಕರ್ನಾಟಕ ರಾಜ್ಯದ ಅಭಿವೃದ್ಧಿಯ ಪ್ರಶ್ನೆಯಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನ ಅತ್ಯಂತ ಮಹತ್ವದ್ದು. ಸೂಕ್ತ ನೀರಾವರಿ ಸೌಲಭ್ಯಗಳಿಲ್ಲದೇ ಬರಪೀಡಿತವಾಗಿ ನಲುಗುತ್ತಿರುವ ಬಯಲು ಸೀಮೆಯ ಜಿಲ್ಲೆಗಳು ಸೇರಿದಂತೆ ನೀರಿನ ಕೊರತೆಯಿಂದ ಬಳಲುತ್ತಿರುವ ಪ್ರದೇಶಗಳ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಹುಡುಕುವುದು ನಮ್ಮ ಮುಂದಿರುವ ಗಂಭೀರವಾದ ಸವಾಲಾಗಿದೆ. ರಾಜ್ಯದಲ್ಲಿನ ಲಭ್ಯ ನೀರಿನ ಸಂಪತ್ತನ್ನು ಸಮರ್ಥವಾಗಿ ಬಳಸಿಕೊಳ್ಳುವುದಕ್ಕೆ ಪೂರಕವಾದ ಮಹತ್ವ ಯೋಜನೆಗಳ ಕುರಿತು ಇಲ್ಲಿ ವಿವರಿಸಲಾಗಿದೆ.

ಜಿ.ವಿ. ಶ್ರೀರಾಮರೆಡ್ಡಿ


ದೇಶದಲ್ಲಿಯೇ ಅತ್ಯಂತ ಕಡಿಮೆ ನೀರಾವರಿ ಪ್ರದೇಶವಿರುವ ರಾಜ್ಯ ರಾಜಸ್ಥಾನ. ಅಷ್ಟೇ ಕಡಿಮೆ ಪ್ರಮಾಣದ ನೀರಾವರಿ ಇರುವ ಮತ್ತೊಂದು ರಾಜ್ಯ ಕರ್ನಾಟಕ. ಕರ್ನಾಟಕ ರಾಜ್ಯದಲ್ಲಿ ಒಟ್ಟು 3475.24 ಟಿ.ಎಂ.ಸಿ ಯಷ್ಟು ಜಲಸಂಪನ್ಮೂಲವಿದೆ. ನೀರು ಅತ್ಯಮೂಲ್ಯವಾದ ಸಂಪತ್ತು. ರಾಜ್ಯದ ಹಲವಾರು ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ನೀರು ಸಿಗದೇ ಜನರು ಕಷ್ಟ ಪಡುತ್ತಿದ್ದಾರೆ. ಕೆಲವೊಂದು ನಗರಗಳಲ್ಲಿ ವಾರಕ್ಕೊಮ್ಮೆ, ವಾರದಲ್ಲಿ ಎರಡು ಸಲ ನೀರು ಲಭ್ಯವಾಗುತ್ತವೆ, ಎಷ್ಟೋ ಕಡೆ ಚರಂಡಿ ನೀರನ್ನೇ ಶುದ್ಧಗೊಳಿಸಿ ಬಳಸುವ ಅನಿವಾರ್ಯತೆಗೆ ಜನತೆ ಒಳಗಾಗಿದೆ. ಬಯಲುಸೀಮೆಯಲ್ಲಿ ಪಶು, ಪ್ರಾಣಿ, ಪಕ್ಷಿಗಳು ಒಂದು ತೊಟ್ಟು ನೀರಿಗಾಗಿ ಆಹಾಕಾರ ಪಡುವಂತಹ ಪರಿಸ್ಥಿತಿ ಇದೆ.

ಬೇಸಿಗೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು 'ಕೊಯ್ನಾ' ಡಾಂ ನಿಂದ ಕೋಟ್ಯಾಂತರ ರೂಪಾಯಿ ದುಡ್ಡು ತೆತ್ತು ನೀರು ಖರೀದಿ ಮಾಡುತ್ತಿದೆ. ರಾಜ್ಯದಲ್ಲಿ 7 ನದಿ ವಲಯಗಳಿವೆ. ಕೃಷ್ಣ ವಲಯ 969.44 ಟಿ.ಎಂ.ಸಿ (ಶೇ27.90), ಕಾವೇರಿ ವಲಯ 425 ಟಿಎಂಸಿ (ಶೇ12.23) ಗೋದಾವರಿ 49.97 ಟಿಎಂಸಿ (ಶೇ 14.44), ಪಶ್ಚಿಮ ಘಟ್ಟದಲ್ಲಿ ಹರಿಯುವ ನದಿಗಳು 1998.83 ಟಿಎಂಸಿ (ಶೇ57)

ರಾಜ್ಯದ ಒಟ್ಟು ಜಲ ಸಂಪನ್ಮೂಲದಲ್ಲಿ ಅತ್ಯಂತ ಹೆಚ್ಚು ಜಲ ಸಂಪನ್ಮೂಲವಿರುವುದು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಂದ. ಅಂದರೆ ಒಟ್ಟು ಜಲ ಸಂಪನ್ಮೂಲದಲ್ಲಿ ಶೇಕಡ 57.51 ಜಲಸಂಪನ್ಮೂಲ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಲ್ಲಿ ಇದೆ. 1998.83 ಟಿ.ಎಂ.ಸಿ. ಗಳಷ್ಟು ನೀರು ಕೇವಲ 50 ರಿಂದ 300 ಕಿ.ಮೀ ಹರಿದು ಸಮುದ್ರ ಸೇರುತ್ತದೆ. ರಾಜ್ಯದ ಬಹುಭಾಗ ನೀರಿನ ಸಂಪತ್ತು ಕೇವಲ ಶೇ. 12 ಭಾಗದಲ್ಲಿ ಹರಿದು ಸಮುದ್ರ ಸೇರುತ್ತವೆ.

ಜಲ(ನದಿ) ವಿವಾದಗಳು:-

ದೇಶದಲ್ಲಿ ಜಲ ವಿವಾದಗಳು ಹುಟ್ಟಿಕೊಂಡಿವೆ. ಜಲ ವಿವಾದಗಳು ಸುಪ್ರೀಂಕೋರ್ಟ್ ಮೆಟ್ಟಿಲೇರಿವೆ. ಆದಾಗ್ಯೂ ಪರಿಹಾರ ಸಿಕ್ಕಿಲ್ಲ. ವಿಶೇಷವಾಗಿ ಕರ್ನಾಟಕದ ಜೊತೆಗೆ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು ,ಕೇರಳ ಗೋವಾ ಹಾಗೂ ಪಾಂಡಿಚೇರಿಗಳಿಗೆ ನದಿ ವಿವಾದಗಳಿವೆ. ರಾಜ್ಯ ರಾಜ್ಯಗಳ ಮಧ್ಯೆ ನೀರಿನ ಹಂಚಿಕೆ ಪ್ರಶ್ನೆ ತುಂಬಾ ಗಂಭೀರವಾಗಿದ್ದು ವಿವಾದಗಳನ್ನು ಸೃಷ್ಟಿ ಮಾಡಿವೆ. ಇನ್ನೂ ವಿವಾದಗಳು ಬಗೆಹರಿದಿಲ್ಲ. ವಿವಾದಗಳಿಂದಾಗಿ ರಾಜ್ಯದಲ್ಲಿ ಜಲಸಂಪನ್ಮೂಲ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.



ಕ್ರಸಂ	ನದಿ ಹೆಸರು	1000 sq K.ms	ಹರಿಯುವ ಪ್ರದೇಶ ಶೇಕಡ	ಸರಾಸರಿ	ನೀರಿನ ಲಭ್ಯತೆ
1	ಗೋದಾವರಿ	4.41	2.31%	49.97	1.44%
2	ಕೃಷ್ಣ	113.29	59.48%	966.44	27.90%
3	ಕಾವೇರಿ	34.27	17.99%	425.00	12.23%
4	ಪಶ್ಚಿಮ ದಿಕ್ಕಿನಲ್ಲಿ ಹರಿಯುವ ನದಿಗಳು	24.25	12.73%	1998.83	57.51%
5	ಉತ್ತರ ದಿಕ್ಕಿಗೆ	6.94	3.64%	32.00	0.92
6	ದಕ್ಷಿಣ ದಿಕ್ಕಿಗೆ	4.37	2,29		
7	ಪಲಾರ್	2.97	1.56%		

ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಲ್ಲಿ ಮಹದಾಯಿ ನದಿಯ ಗೋವಾ ಜೊತೆಗಿನ ವಿವಾದ ಬಿಟ್ಟರೆ ಹೆಚ್ಚಿನ ಎಲ್ಲಾ ನದಿಗಳು, ಉಪನದಿಗಳು ಕರ್ನಾಟಕದಲ್ಲಿ ಹುಟ್ಟಿ ಕರ್ನಾಟಕದಲ್ಲೇ ಅರಬ್ಬಿ ಸಮುದ್ರ ಸೇರುತ್ತವೆ. ರಾಜ್ಯದಲ್ಲಿ ಲಭ್ಯವಿರುವ ಜಲಸಂಪನ್ಮೂಲದಲ್ಲಿ ವಿವಾದ ರಹಿತವಾಗಿರುವುದು ಪಶ್ಚಿಮ ಘಟ್ಟಗಳಲ್ಲಿ ಮಾತ್ರ. ಪಶ್ಚಿಮ ಘಟ್ಟಗಳ ನೀರನ್ನು ಬಳಸಿಕೊಂಡರೆ ಮಾತ್ರವೇ ಕರ್ನಾಟಕ ಜನತೆಯ ನೀರಿನ ದಾಹ ಇಂಗಿಸಲು ಸಾಧ್ಯ.

ಮಳೆ ಪ್ರಮಾಣ

ರಾಜ್ಯದ ಶೇ 12 ರಷ್ಟು ಭೂ ಭಾಗವಿರುವ ಪಶ್ಚಿಮ ಘಟ್ಟಗಳಲ್ಲಿ ಸರಾಸರಿ 4000 ದಿಂದ 6000 ಮಿ.ಮೀ. ಮಳೆ ಬೀಳುತ್ತದೆ. ರಾಜ್ಯದ ಶೇಕಡಾ 88 ಭೂ ಭಾಗವಿರುವ ಬಯಲುಸೀಮೆಯಲ್ಲಿ 400 ರಿಂದ 600 ಮಿ.ಮೀ. ಮಳೆ ಬೀಳುತ್ತಿದೆ. ಒಂದೆಡೆ ಬರಗಾಲ, ಮತ್ತೊಂದೆಡೆ ನಿರಂತರ ಧೋ... ಎಂದು ಸುರಿಯುವ ಮಳೆ. ನಿರಂತರ ಬರಗಾಲದಿಂದ ಕೂಲಿಕಾರರು ಗುಳೆ ಹೋಗುವುದು, ಅನಾವೃಷ್ಟಿ, ಕುಡಿಯುವ ನೀರಿನ ಕೊರತೆ, ಇತ್ಯಾದಿಗಳು ಸಮಸ್ಯೆಗಳಾಗಿವೆ. ಕರಾವಳಿ ಜಿಲ್ಲೆಗಳಾದ, ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೊಂದರೆ ಎದುರಾಗುತ್ತಿರುವುದನ್ನು ಮಣಗಾಣಬೇಕು. ಕರ್ನಾಟಕದಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಬೀಳುವ ಮಳೆಯ ನೀರನ್ನು ಪೂರ್ವಾಭಿಮುಖವಾಗಿ ಹರಿಸುವುದೇ ಕರ್ನಾಟಕದ ಜಲಕ್ಷಾಮಕ್ಕೆ ಪರಿಹಾರ.

ಮರಳುಗಾಡಾಗುವ ಅಪಾಯ

ಮಧ್ಯ ಕರ್ನಾಟಕದ 8 ಜಿಲ್ಲೆಗಳು ನೀರಿಲ್ಲದೆ ಮರಳುಗಾಡಾಗುವ ಗಂಭೀರ ಆತಂಕವನ್ನು ಎದುರಿಸುತ್ತಿವೆ. ನಿರಂತರ ಬರಗಾಲಕ್ಕೆ ಸಿಕ್ಕಿ ಕುಡಿಯುವ ನೀರಿಗೂ ಪರದಾಡುವ ಸ್ಥಿತಿ ಇಂದು ಈ ಜಿಲ್ಲೆಗಳ ಜೀವಂತ ಸಮಸ್ಯೆಯಾಗಿದೆ.

ಬಯಲು ಸೀಮೆ ಪ್ರದೇಶದ 8 ಜಿಲ್ಲೆಗಳ ಒಟ್ಟು ಜನಸಂಖ್ಯೆಯ ಶೇಖಡ 80 ಭಾಗದ ಜನರ ಜೀವನ ಅವಲಂಬಿಸಿರುವುದು ಕೃಷಿಯ ಮೇಲೆ. ಕೃಷಿಗೆ ಮೂಲಾಧಾರವಾಗಿರುವ ನೀರು ಈ ಜಿಲ್ಲೆಗೆ ಇಲ್ಲವಾಗುತ್ತಿದೆ. ಇಡೀ ರಾಜ್ಯದಲ್ಲಿ ಅತಿ ಕಡಿಮೆ ನೀರಾವರಿ ಪ್ರದೇಶವಿರುವ ಜಿಲ್ಲೆಗಳಲ್ಲಿ ಈ ಜಿಲ್ಲೆಗಳೂ ಸೇರಿವೆ. ಇಲ್ಲಿ ನದಿ ನಾಲೆಗಳಿಲ್ಲದ ಕಾರಣ ವ್ಯವಸಾಯಕ್ಕೆ ಯೋಗ್ಯವಿರುವ ಒಟ್ಟು ಭೂಮಿಯಲ್ಲಿ ಶೇಕಡ 70 ಭಾಗ ಮಳೆ ಆಧಾರಿತ. ಇನ್ನು 30 ಭಾಗ ವ್ಯವಸಾಯ ಕೆರೆ, ತೆರೆದ ಭಾವಿ ಮತ್ತು ಕೊಳವೆ ಭಾವಿಗೆ ನೀರಿನ ಮೇಲೆ ಆಧಾರಿತವಾಗಿದೆ. ಪ್ರಕೃತಿಯಲ್ಲಾಗುತ್ತಿರುವ ಬದಲಾವಣೆಯಿಂದಾಗಿ ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆಯಾಗಿ ಕೆರೆಗಳು ತುಂಬುವುದು ಅಪರೂಪವಾಗಿದೆ ಮತ್ತು ಭಾವಿಗಳು ಬತ್ತಿ ಹೋಗತೊಡಗಿವೆ. ಹಾಗಾಗಿ ನೀರಿಗಾಗಿ ಅಂತರ್ಜಲವನ್ನು ಅವಲಂಬಿಸುವುದು ಅನಿವಾರ್ಯವಾಗಿ 1980ರ ನಂತರ ಕೃಷಿಗಾಗಿ ಕೊಳವೆ ಬಾವಿಗಳನ್ನು ಕೊರೆಯುವುದು ಪ್ರಾರಂಭವಾಯಿತು. ಇದರಿಂದಾಗಿ ಭೂಮಿಯಲ್ಲಿನ ಅಂತರ್ಜಲ ಮಟ್ಟ ತೀವ್ರ ಕುಸಿತಕ್ಕೊಳಗಾಗಿ ಈಗ 1000 ರಿಂದ 1500 ಅಡಿಗಳಷ್ಟು ಆಳಕ್ಕೆ ಹೋದರೂ ನೀರು ಸಿಗದಂತಹ ಪರಿಸ್ಥಿತಿ ಉಂಟಾಗಿದೆ. ಇದರಿಂದಾಗಿ ಈ ಜಿಲೆಗಳ ಕೃಷಿ ಪರಿಸ್ಥಿತಿಯ ಮೇಲೆ ಹಲವಾರು ತೀವ್ರತರವಾದಂತಹ ಪರಿಣಾಮಗಳು ಉಂಟಾಗುತ್ತಿವೆ. ಒಂದು ಕಡೆ ಅಷ್ಟು ಆಳದಿಂದ ನೀರನ್ನು ಭೂಮಿಯಿಂದ ಹೀರಿ ತೆಗೆದು ವ್ಯವಸಾಯ ಮಾಡಬೇಕಾದರೆ ಕನಿಷ್ಟ ಎರಡು ಲಕ್ಷ ರೂಪಾಯಿಗಳು ಖರ್ಚುಮಾಡಬೇಕಾಗಿರುತ್ತದೆ. ಇದು ಕೆಲವೇ ಮಂದಿ ರೈತರಿಗೆ ಮಾತ್ರ ಸಾಧ್ಯ.

ನಾವು ಕುಡಿಯುತ್ತಿರುವ ನೀರೆಲ್ಲ ವಿಷ!

ಭೂಮಿಯ ಹೆಚ್ಚು ಆಳದಿಂದ ನೀರು ತೆಗೆದಂತೆಲ್ಲಾ ಅದರಲ್ಲಿ ಕೆಲವು ಅಪಾಯಕಾರಿ ಲವಣಗಳು ಹೆಚ್ಚಾಗಿರುತ್ತವೆ. ಈಗ ಈ ಜಿಲ್ಲೆಗಳಲ್ಲಿ ಕುಡಿಯುತ್ತಿರುವ ನೀರಿನಲ್ಲಿ ಫ್ಲೋರೈಡ್. ರಂಜಕ ಮತ್ತು ಗಂಧಕ ಲವಣಗಳು ತುಂಬಿವೆ. ನೀರಿನಲ್ಲಿ ಈ ಲವಣಗಳು ಇರಬೇಕಾಗಿರುವುದು ಅವಶ್ಯವಾದರೂ ಇವುಗಳ ಪ್ರಮಾಣ ಶೇಕಡ 1ಕ್ಕಿಂತ ಹೆಚ್ಚು ಇರಬಾರದು. ಆದರೆ ಇವುಗಳ ಪ್ರಮಾಣ ಜಿಲ್ಲೆಯಲ್ಲಿ ಅಪಾಯಕಾರಿ ಮಟ್ಟ ತಲುಪಿದೆ. ಇದು ಫ್ಲೋರಿಸಿಸ್ ಎಂಬ ಮಾರಕ ಖಾಯಿಲೆಗೆ ಎಡೆಮಾಡಿಕೊಟ್ಟು ಮನುಷ್ಯನ ದೇಹದಲ್ಲಿರುವ ಮೂಳೆಗಳನ್ನು ತಿಂದು ಹಾಕುವುದಲ್ಲದೆ ಕೀಲು ನೋವು, ಹಲ್ಲುಗಳ ಕ್ಷಯ ಮುಂತಾದ ಗುಣಪಡಿಸಲಾಗದ ಖಾಯಿಲೆಗಳು ಬರುತ್ತವೆ. ಹಾಗಾಗಿ ನಾವು ಕುಡಿಯುತ್ತಿರುವ ನೀರು ನಿಧಾನವಾಗಿ ವಿಷವಾಗಿದೆ. ಈ ಅಪಾಯವನ್ನು ತಪ್ಪಿಸಬೇಕಾದರೆ ಇರುವ ಒಂದೇ ಮಾರ್ಗವೆಂದರೆ ಭೂಮಿಯ ಮೇಲಿನ ನೀರನ್ನು ಕುಡಿಯುವುದು. ನದಿ ನಾಲೆಗಳಿಲ್ಲದ ಮತ್ತು ಕೆರೆಗಳು ಬತ್ತಿಹೋಗಿರುವ ಈ ಸಂದರ್ಭದಲ್ಲಿ ಆ ನೀರನ್ನು ಹೇಗೆ ಪಡೆಯುವುದು? ಇದಕ್ಕೆ ನಾವು ಶಾಶ್ವತವಾದ ಪರಿಹಾರವನ್ನು

ಪುಟ 14 ಕ್ಕೆ

ಜನರ ಬೆನ್ನಮೇಲೆ ದರ ಹೇರಿಕೆಯ ಹೊರೆ

ಪುಟ 8 ರಿಂದ

ಬಿಂದುವಾಗಿರುವ ರೈಲ್ವೆಯನ್ನು ಯು.ಪಿ.ಎ.2 ಸರ್ಕಾರ ದೀವಾಳಿಯೆಡೆಗೆ ಕೊಂಡೊಯ್ಯುತ್ತಿರುವುದು ಅಪಾಯಕಾರಿ. ದೇಶದಾದ್ಯಂತ ಒಟ್ಟು 65,000 ಕಿ.ಮಿ. ನಷ್ಟು ವಿಸ್ತಾರವಾಗಿ ಹರಡಿಕೊಂಡಿರುವ ರೈಲ್ವೆ, 7500 ನಿಲ್ದಾಣಗಳನ್ನು ಹೊಂದಿದೆ: ಪ್ರತಿದಿನ 3 ಕೋಟಿಗೂ ಹೆಚ್ಚು ಪ್ರಯಾಣಿಕರು ಸಂಚರಿಸುವ, 28 ಲಕ್ಷ ಟನ್ ಸಾಮಾನು, ಸರಕುಗಳನ್ನು ಸಾಗಿಸುವ ರೈಲ್ವೆ 13.6 ಲಕ್ಷ ನೌಕರರನ್ನು ಹೊಂದಿದೆ. ಅಂತಹ ರೈಲ್ವೆ ಇಲಾಖೆಯನ್ನು ಅಪ್ರಾಮಾಣಿಕ, ಅಪ್ರಯೋಜಕ, ಅದಕ್ಷರ ಕೈಯಲ್ಲಿಡಬೇಕೆ ಎಂಬುದು ಪ್ರತಿಯೊಬ್ಬ ಭಾರತೀಯ ಕೇಳಲೇ ಬೇಕಾದ ಪ್ರಶ್ನೆ.

ಕರ್ನಾಟಕಕ್ಕೆ ಕಳೆದ ಬಜೆಟ್‌ಗಿಂತ ಕಡಿಮೆ:

ರೈಲ್ವೆ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯಕ್ಕೆ ಯಾವಾಗಲೂ ಅನ್ಯಾಯವಾಗುತ್ತಿದೆ ಎಂದು ಗಮನಿಸಲಾಗಿತ್ತು. ಹಾಗೆ ನೋಡಿದರೆ ಈ ವರ್ಷ ಇನ್ನೂ ಅನ್ಯಾಯವಾಗಿದೆ. ಹೊಸ ಮಾರ್ಗಗಳಾಗ್ಗಲೀ, ಜೋಡಿ ಮಾರ್ಗವಾಗಲೀ, ಹಳಿಪರಿವರ್ತನೆಯಾಗಲೀ ಇಲ್ಲವೇ ಇಲ್ಲ. ಹೊಸ ರೈಲುಗಳ ಘೋಷಣೆ ಕೂಡಾ ಕಳೆದ ವರ್ಷಕ್ಕಿಂತ ಕಡಿಮೆ. ಅದರಲ್ಲೂ ಮಹತ್ವದ ಯೋಜನೆಗಳು ಒಂದು ಅಥವಾ ಎರಡು. ಯಶವಂತಪುರ-ಗುಲ್ಬರ್ಗಾ-ಸೋಲ್ಲಾಪುರ ಮಾರ್ಗದಲ್ಲಿ ವಾರದಲ್ಲಿ 3 ಬಾರಿ ಓಡುವ ಹೊಸ ರೈಲನ್ನು ನೀಡಲಾಗಿದೆ. ಒಳ್ಳೆಯದೇ. ಆದರೆ ಈ ಭಾಗದ ಜನರ ಬೇಡಿಕೆಯನ್ನು ಗಮನಿಸಿದರೆ ವಾರಕ್ಕೆ 3 ದಿನ ಸಾಲದು.

ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಆಸುಪಾಸಿನ ಜಿಲ್ಲೆಗಳಿಂದ ಲಕ್ಷಾಂತರ ಕೂಲಿ ಕಾರ್ಮಿಕರು ಬೆಂಗಳೂರಿಗೆ ವಲಸೆ ಹೋಗುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ. ಈ ನಿಟ್ಟಿನಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಸಾಕಷ್ಟು ಬಾರಿ 'ಕೂಲಿ ಎಕ್ಸಪ್ರೆಸ್' ರೈಲು ಆರಂಭಿಸಬೇಕೆಂದು ಒತ್ತಾಯ ಮಾಡಿರುವುದನ್ನು ಗಮನಿಸಬೇಕು. ಸಿಪಿಐ(ಎಂ) ಪಕ್ಷದ ವತಿಯಿಂದ ಅಂದು ರೈಲ್ವೆಯ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದ ಬಸುದೇವ ಆಚಾರ್ಯ ಅವರ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿರುವುದನ್ನು ನೆನಪಿಸಿಕೊಳ್ಳಬೇಕು. ಇತ್ತೀಚಿಗೆ ನಡೆದ ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನದಲ್ಲಿ ಇದನ್ನು ಜಾರಿಗೆ ತರಲು ಪುನ: ಒತ್ತಾಯಿಸಲಾಗಿತ್ತು.

ಅದೇನೇ ಇರಲಿ, ಬಸ್ಸು ಪ್ರಯಾಣ ತೀರಾ ದುಬಾರಿಯಾಗುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯದ ಆರ್ಥಿಕ ಚಟುವಟಿಕೆಗಳು ಕೆಲವೇ ನಗರಗಳಿಗೆ ಸೀಮಿತ ಗೊಳ್ಳುತ್ತಿರುವ ಸನ್ನಿವೇಶದಲ್ಲಿ, ಹೆಚ್ಚು ಹೆಚ್ಚು ರೈಲ್ವೆ ಯೋಜನೆಗಳು ಜಾರಿಯಾಗಬೇಕು. ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳು ಪರಸ್ಪರ ಸಂಪರ್ಕ ಕಲ್ಪಿಸುವಂತಿರಬೇಕು. ಹಿಂದುಳಿದ ಪ್ರದೇಶಗಳು ನಗರ ಪ್ರದೇಶಗಳೊಂದಿಗೆ ವ್ಯಾಪಕ ಸಂಪರ್ಕ ಹೊಂದಬೇಕು. ಆಗ ಪ್ರದೇಶವಾರು ತಾರತಮ್ಯ ಕಡಿಮೆಯಾಗುತ್ತದೆ. ವ್ಯಾಪಾರ ವಹಿವಾಟುಗಳಿಗೆ ಉತ್ತೇಜನ ದೊರೆಯುತ್ತದೆ.

ಇನ್ನು ಕೋಲಾರಕ್ಕೊಂದು ಕೋಚ್ ಫ್ಯಾಕ್ಟರಿ. ಇದು ಸ್ವಾಗತಾರ್ಹ. ಇದು ಕಳೆದ ಬಜೆಟ್‌ನಲ್ಲೇ ಘೋಷಣೆಯಾಗಿತ್ತು. ಆದರೆ ಜಾರಿಯಾಗಿರಲಿಲ್ಲ. ಈಗ ಪುನಃ ಘೋಷಣೆ ಆಗಿದೆ. ಹಿಂದೆ ರೈಲ್ವೆ ಸಚಿವರಾಗಿದ್ದ ಜಾಫರ್ ಶರೀಫ್‌ರ ಕಾಲದಲ್ಲಿ ಅಚ್ಚು ಗಾಲಿ ಕಾರ್ಖಾನೆಯೊಂದು ಸ್ಥಾಪನೆಯಾಗಿರುವುದು ಬಿಟ್ಟರೆ, ಮತ್ಯಾವ ಯೋಜನೆಗಳನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಿರಲಿಲ್ಲ. ಇದು ಹಲವಾರು ವರ್ಷಗಳಿಂದ ರೈಲ್ವೆಯಲ್ಲಿ ರಾಜ್ಯ ಸಚಿವರಾಗಿರುವ ಮುನಿಯಪ್ಪರವರಿಗೆ ಮುಜುಗರ ತಂದಿರಬೇಕು. ಅದೂ ಅಲ್ಲದೇ ಕೋಲಾರದ ಚಿನ್ನದ ಗಣಿ ಕೆಲಸವನ್ನು ಪುನರಾರಂಭಿಸಬೇಕೆಂದು ಅಲ್ಲಿನ ಸಿಐಟಿಯು ಮತ್ತು ಸಿಪಿಐ(ಎಂ) ಹಲವಾರು ಹೋರಾಟಗಳನ್ನು ನಡೆಸಿ ಕೊಂಡುಬಂದಿದೆ. ಕೋಲಾರ ಬಂದ್ ಕೂಡಾ ನಡೆಸಲಾಗಿದೆ. ಜನರು ಒಂದಾಗಿ ಮುನಿಯಪ್ಪನವರ ಕುರ್ಚಿ ಅಲ್ಲಾಡಿಸಿದಾಗ ಮಾತ್ರವೇ ಅವರಿಗೆ ಎಚ್ಚರವಾದಂತೆ ಕಾಣಿಸುತ್ತದೆ. ಆದರೆ ಜಿಲ್ಲಾ ಕೇಂದ್ರವಾದ ಕೋಲಾರ ಇನ್ನೂ ಕೂಡಾ ಬೆಂಗಳೂರಿನೊಂದಿಗೆ ನೇರ ರೈಲು ಸಂಪರ್ಕ ಹೊಂದಿಲ್ಲ ಎಂಬುದು ವಿಷಾದವಾದರೂ ಸತ್ಯ ಸಂಗತಿ.

ಚಿಕ್ಕಬಳ್ಳಾಪುರದಲ್ಲಿ ನಡೆದ ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನದಲ್ಲಿ ಕಾರವಾರ-ಮಂಗಳೂರು ನಡುವೆ ಇಂಟರ್‌ಸಿಟಿ ರೈಲು ಆರಂಭಿಸಬೇಕೆಂದೂ, ಕಾರವಾರ-ಬೆಂಗಳೂರು ನಡುವೆ ಪ್ರತಿದಿನ ಹಗಲು ಹೊತ್ತು ರೈಲು ಸಂಚರಿಸಬೇಕು ಮತ್ತು ಸಂಚಾರದ ಅವಧಿಯನ್ನು10 ತಾಸುಗಳಿಗೆ ಇಳಿಸಬೇಕೆಂದೂ ಒತ್ತಾಯಿಸಲಾಗಿತ್ತು ಆದರೆ ಈ ಯೋಜನೆಗಳು ಇನ್ನೂ ಜಾರಿಗೆ ಬಂದಿಲ್ಲ. ಹಲವು ವರ್ಷಗಳಿಂದ ನೆನೆಗುಂದಿಗೆ ಬಿದ್ದಿರುವ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಮುಕ್ತಿ ಕಾಣಲಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ರೈಲ್ವೆ ಯೋಜನೆಗಳ ಜಾರಿಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿರುವುದಂತೂ ಸತ್ಯ. ಇದಕ್ಕೆ ಕೇಂದ್ರದ ಕಾಂಗ್ರೆಸ್ ಸರ್ಕಾರ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ಕೇಂದ್ರದ ಮೇಲೆ ಒತ್ತಡ ತರುವುದರಲ್ಲಿ ವಿಫಲವಾದ ಬಿಜೆಪಿ ರಾಜ್ಯ ಸರ್ಕಾರದ ಮೇಲೂ ಇದೆ.

ನಿರಂತರ ಐಕ್ಯ ಹೋರಾಟಗಳಿಂದ ಮಾತ್ರವೇ ರಾಜ್ಯಕ್ಕೆ ನ್ಯಾಯ ದೊರಕಿಸಲು ಸಾಧ್ಯ. ●

ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಆಂದೋಲನಕ್ಕೆ ಕರೆ

ಮಾರ್ಚ್ 8ರಂದು ಸೇರಿದ್ದ ಸಿ.ಪಿ.ಐ(ಎಂ) ರಾಜ್ಯ ಸಮಿತಿ ನಿರ್ಧಾರ

ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ಮುಂದಿನ ಹೋರಾಟ

ಮನೆ ನಿವೇಶನಗಳಿಗಾಗಿ, ಅನಧಿಕೃತ ಸಾಗುವಳಿ ಸಕ್ರಮಕ್ಕಾಗಿ ಅರ್ಜಿಗಳನ್ನು ಸಲ್ಲಿಸುವ ಮೂಲಕ ಆರಂಭಿಸಲಾದ ಚಳುವಳಿಯನ್ನು ರಾಜ್ಯ ಮಟ್ಟದ ಬೃಹತ್ ಹೋರಾಟವನ್ನಾಗಿ ಮಾರ್ಪಡಿಸಲು ಬರುವ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ "ಮಹಾಧರಣಿ"ಯುನ್ನು ನಡೆಸಲು ತೀರ್ಮಾನಿಸಲಾಗಿದೆ. ಮೇ 21 ರಿಂದ ಕನಿಷ್ಠ ಐದಾರು ದಿನಗಳ ಕಾಲ ನಡೆಸಲು ಉದ್ದೇಶಿಸಿರುವ ಈ ಮಹಾಧರಣಿಯಲ್ಲಿ ಕನಿಷ್ಠ 50 ಸಾವಿರ ಅರ್ಜಿದಾರರನ್ನು ಪಾಲ್ಗೊಳಿಸುವ ಉದ್ದೇಶವಿದೆ. ಈ ಹೋರಾಟದ ಸಿದ್ಧತೆಯ ಭಾಗವಾಗಿ ಈ ಕೆಳಗಿನ 3 ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

* ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಅರ್ಜಿಗಳನ್ನು ಹಾಕಿಸುವ ಕೆಲಸವನ್ನು ಮುಂದುವರೆಸಿ ಇನ್ನೂ ಕನಿಷ್ಠ 1ಲಕ್ಷ ಅರ್ಜಿಗಳನ್ನು ಹಾಕಿಸುವುದು.
* ತಾಲ್ಲೂಕು ಮಟ್ಟದ ಸಮಾವೇಶಗಳನ್ನು ನಡೆಸಿ ಹೋರಾಟ ಸಮಿತಿಗಳನ್ನು ರಚಿಸುವುದು.
* ಉತ್ತರ ಕರ್ನಾಟಕ, ಬಾಂಬೆ ಕರ್ನಾಟಕ, ಕರಾವಳಿ ಮತ್ತು ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ 4 ಪ್ರತ್ಯೇಕ ಜಾಥಗಳನ್ನು ನಡೆಸಿ ಮೇ ತಿಂಗಳ ಹೋರಾಟದ ಬಗ್ಗೆ ಪ್ರಚಾರ-ಪ್ರಕ್ಷೋಭೆ ನಡೆಸುವುದು.
* ಆದಿವಾಸಿ ಜನರ ಪ್ರಶ್ನೆಗಳಿಗಾಗಿ ಆ ವಿಭಾಗದ ಹೋರಾಟವನ್ನು ನಡೆಸುವುದು.

ಉಡುಪಿ-ಚಿಕ್ಕಮಗಳೂರು ಲೋಕಸಭಾ ಉಪ ಚುನಾವಣೆ ಜೆಡಿಎಸ್‌ಗೆ ಬೆಂಬಲ

ಉಡುಪಿ-ಚಿಕ್ಕಮಗಳೂರು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ವಿರುದ್ಧ ಜೆಡಿ(ಎಸ್) ಅಭ್ಯರ್ಥಿಗೆ ಬೆಂಬಲ ನೀಡಲು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ನಿರ್ಧರಿಸಿದೆ.

ಮಡೇಸ್ನಾನ-ಪಂಕ್ತಿಭೇದದ ವಿರುದ್ಧ ಮಾರ್ಚ್ 26 ಧರಣಿ ಬೆಂಬಲಿಸಿ ನಿರ್ಧಾರ

ಮಡೇಸ್ನಾನ-ಪಂಕ್ತಿಭೇದದ ವಿರುದ್ಧ ನಿಡುಮಾಮಿಡಿ ಸ್ವಾಮಿಯವರ ಮುತುವರ್ಜಿಯಿಂದಾಗಿ ನಾಡಿನ ಮಠಾಧೀಶರನ್ನು, ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳು, ಶಕ್ತಿಗಳನ್ನು ಒಳಗೊಂಡ ವಿಶಾಲ ಆಂದೋಲನವನ್ನು ಮುಂದುವರೆಸಲು ನಿರ್ಧರಿಸಿದ್ದಾರೆ. ಇದೇ ಮಾರ್ಚ್ 26ರಂದು ಬೆಂಗಳೂರಿನ 'ಸ್ವಾತಂತ್ರ್ಯ ಉದ್ಯಾನ'ದಲ್ಲಿ ಮಠಾಧೀಶರ ಮತ್ತು ನಾಡಿನ ಚಿಂತಕರ, ಸಂಘಟನೆಗಳ ಧರಣಿ ನಡೆಸಲು ಉದ್ದೇಶಿಸಿದ್ದು ಸಮಾನ ಮನಸ್ಕರು ಭಾಗವಹಿಸಬೇಕೆಂದು ವಿನಂತಿಸಲಾಗಿದೆ, ಈ ಕಾರ್ಯಕ್ರಮದಲ್ಲಿ ಮತ್ತು ಜಿಲ್ಲೆಗಳಲ್ಲಿ ನಡೆಸಲಿರುವ ಕಾರ್ಯಕ್ರಮಗಳನ್ನೂ ಯಶಸ್ವಿಗೊಳಿಸಲು ನಿರ್ಧರಿಸಿದೆ.

ಅಪೌಷ್ಠಿಕತೆಯ ಸಮಸ್ಯೆಯ ಕುರಿತು

ರಾಜ್ಯದಲ್ಲಿ ಅಪೌಷ್ಠಿಕತೆಯಿಂದ ಹೆಚ್ಚಾಗಿರುವ ಶಿಶುಗಳ ಸಾವು, ಮಹಿಳೆಯರು ಅಪೌಷ್ಠಿಕತೆಯಿಂದ ನರಳುತ್ತಿರುವ ಪ್ರಶ್ನೆಯ ಕುರಿತು ರಾಜ್ಯದಲ್ಲಿ ವ್ಯಾಪಕವಾದ ಚರ್ಚೆ ನಡೆಯುತ್ತಿದ್ದು ಇಂತಹ ಪ್ರಕರಣಗಳು ಹೆಚ್ಚಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಂಭವಿಸುತ್ತಿವೆ. ಈ ಕುರಿತು ಬರುವ ಎಪ್ರಿಲ್ ಮೊದಲ ಅಥವಾ ಎರಡನೇ ವಾರದಲ್ಲಿ ರಾಯಚೂರಿನಲ್ಲಿ ಒಂದು ಪ್ರಾದೇಶಿಕ ಸಮಾವೇಶ ನಡೆಸುವುದೆಂದೂ ಈ ಸಮಾವೇಶದಲ್ಲಿ ಬೀದರ್, ಗುಲ್ಬರ್ಗಾ, ಯಾದಗಿರಿ, ವಿಜಾಪುರ, ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಂದ ಪ್ರತಿನಿಧಿಗಳನ್ನು ಕರೆತರಬೇಕೆಂದು ತೀರ್ಮಾನಿಸಲಾಗಿದೆ.

ಬರ, ನೀರಿನ ಅಭಾವ, ವಿದ್ಯುತ್ ಕೊರತೆ ಸಂಬಂಧಿಸಿ ಹೋರಾಟ :

ರಾಜ್ಯದ ನೂರಾರು ತಾಲ್ಲೂಕುಗಳಲ್ಲಿ ಭೀಕರವಾದ ಬರ ವ್ಯಾಪಿಸಿದ್ದು, ಕುಡಿಯುವ ನೀರಿನ ಗಂಭೀರ ಸಮಸ್ಯೆ ಉಂಟಾಗಿದೆ. ದನಕರುಗಳಿಗೆ ಮೇವಿನ ಕೊರತೆ, ಜನಗಳಿಗೆ ಕೆಲಸ ಇಲ್ಲದೆ ವಲಸೆ ಹೋಗುವುದು ವ್ಯಾಪಕವಾಗಿದೆ. ಇದರ ಜೊತೆಯಲ್ಲಿ ರಾಜ್ಯದಲ್ಲಿ ವಿದ್ಯುತ್ ಕೊರತೆ ಗಂಭೀರ ಸ್ವರೂಪ ತಾಳುತ್ತಿದೆ. ಈ ಪ್ರಶ್ನೆಗಳನ್ನು ಎತ್ತಿಕೊಂಡು ಆಯಾ ಜಿಲ್ಲೆಗಳ ಪರಿಸ್ಥಿತಿಗಳಿಗೆ ಅನುಗುಣವಾಗಿ, ಸರಿಯಾದ ಬೇಡಿಕೆಗಳನ್ನು ರೂಪಿಸಿ ಎಪ್ರಿಲ್ 15ರ ಒಳಗಾಗಿ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ವಿವಿಧ ರೀತಿಯ ಹೋರಾಟಗಳನ್ನು ಹಮ್ಮಿಕೊಳ್ಳಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

'ಕಹಿ ಯುಗಾದಿ'

ರಾಜ್ಯ ಅಂಗವಿಕಲರ ಮತ್ತು ಪಾಲಕರ ಸಂಘವು ಸರ್ಕಾರದ ನಿರ್ಲಕ್ಷ್ಯ ಧೋರಣೆಯ ವಿರುದ್ಧ 'ಕಹಿ ಯುಗಾದಿ' ಆಚರಿಸಲು ನಿರ್ಧರಿಸಿದೆ. ಈ ಪ್ರಯುಕ್ತ ಜಿಲ್ಲೆಗಳಲ್ಲಿ ನಡೆಸುವ ಪ್ರತಿಭಟನಾ ಕಾರ್ಯಕ್ರಮಗಳಿಗೆ ಪಕ್ಷದ ಸಮಿತಿಗಳು ಅಗತ್ಯ ಸಹಕಾರ ನೀಡುವುದು.

ಕಾಮಿಕ ವರ್ಗದ ಹೋರಾಟ

ವಿವಿಧ ಕಾರ್ಮಿಕ ವಿಭಾಗಗಳ ಸಾಮಾನ್ಯ ಬೇಡಿಕೆಗಳಿಗಾಗಿ ನಡೆಸುತ್ತಾ ಬರಲಾದ ಚಳುವಳಿಯನ್ನು ಮುನ್ನಡೆಸುವ ಅಂಗವಾಗಿ ಬರುವ ಎಪ್ರಿಲ್ 17 ರಿಂದ 19ರ ವರೆಗೆ ಬೆಂಗಳೂರಿನಲ್ಲಿ 3ದಿನಗಳ ಸಾಮೂಹಿಕ ಧರಣಿಯನ್ನು ಸಂಘಟಿಸಲು ಸಿ.ಐ.ಟಿ.ಯು. ತೀರ್ಮಾನಸಿದೆ. ಏಪ್ರಿಲ್ 19 ರಂದು ಕೊನೆಯ ದಿನ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಧರಣಿ ನಡೆಸುವುದೆಂದು ನಿರ್ಧರಿಸಲಾಗಿದೆ. ಈ ಹೋರಾಟಕ್ಕೆ ಸಿಪಿಐ(ಎಂ) ಪಕ್ಷ ಸಂಪೂರ್ಣ ಬೆಂಬಲ ಕೊಡುವುದೆಂದು ರಾಜ್ಯ ಸಮಿತಿ ನಿರ್ಧರಿಸಿದೆ.

"ಬಿಜೆಪಿಗೆ ಅಲ್ಪ ಸಂಖ್ಯಾತರ ಮತಗಳ ಅವಶ್ಯಕತೆ ಇಲ್ಲ........"

"..ಬಿಜೆಪಿಗೆ ಅಲ್ಪ ಸಂಖ್ಯಾತರ ಮತಗಳ ಅವಶ್ಯಕತೆ ಇಲ್ಲ. ಬಿಜೆಪಿ ಯಾವುದೇ ವ್ಯಕ್ತಿಗೆ ಕಾದಿರುವುದಿಲ್ಲ...ವ್ಯಕ್ತಿಗಿಂತ ಪಕ್ಷ ಮುಖ್ಯ..ಯಾರೂ ಪಕ್ಷಕ್ಕೆ ಅನಿವಾರ್ಯರಲ್ಲ..."

ಹೀಗೆಂದು ಸಂಘ ಪರಿವಾರದ ಕಟ್ಟಾಳು, ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ಅನಂತ ಕುಮಾರ ಹೆಗಡೆಯವರು ಮಾರ್ಚ್ 11, 2012ರಂದು ಬೆಂಗಳೂರಿನ ಮಹದೇವಪುರದಲ್ಲಿ ಬಿಜೆಪಿಯ 14 ವಿಧಾನಸಭಾ ಕ್ಷೇತ್ರಗಳ ಕಾರ್ಯಕಾರಣಿ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ ಘೋಷಿಸಿದ್ದಾರೆ. ಅವರು ಇಂತಹ ಹೇಳಿಕೆಗಳನ್ನು ಈ ಹಿಂದೆಯೂ ನೀಡಿದ್ದಾರೆ.

ಜಾತ್ಯತೀತತೆ, ಪ್ರಜಾಪ್ರಭುತ್ವ, ಸಮಾನತೆಯಂತಹ ತತ್ವಗಳೇ ನಮ್ಮ ಸಮಾಜಿಕ, ರಾಜಕೀಯ ವ್ಯವಸ್ಥೆಯ ಅಡಿಗಲ್ಲುಗಳಾಗಬೇಕೆಂದು ನೆಮ್ಮದಿಯ ನಾಳೆಗಳನ್ನು ರೂಪಿಸಬೇಕೆಂದು ಬಯಸುವ ಎಲ್ಲರಿಗೂ ಜವಾಬ್ದಾರಿ ಸ್ಥಾನದಲ್ಲಿರುವವರ ಇಂತಹ ಹೇಳಿಕೆಗಳು ಆತಂಕದ ಸಮಾಚಾರ. ಅನಂತಕುಮಾರ ಹೆಗಡೆ ತಮ್ಮ ಎದೆಯಲ್ಲಿ, ಮಿದುಳಿನಲ್ಲಿ ಯಾವ ವಿಷವನ್ನು ತುಂಬಿಕೊಂಡಿದ್ದಾರೋ ಅದನ್ನು ಯಾವ ಲಜ್ಜೆಯೂ ಇಲ್ಲದೇ ನೇರವಾಗಿ ಜನರ ಮುಂದೆ ಕಕ್ಕಿದ್ದಾರೆ. ಹಾಗಾಗಿ ಜನಗಳಿಗೆ ಸಂಘ ಪರಿವಾರದ ಜನಾಂಗ ದ್ವೇಷ ಯಾವ ಪರಿಯದು, ಕೇಸರಿ ವೀರರ ಹೃದಯಾಂತರಾಳದಲ್ಲಿ ಇರುವ ಹೊಲಸು, ಗಲೀಜು ವಿಚಾರಗಳೇನೆಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ.

ಆದರೆ–ಒಂದೆಡೆ ತಮ್ಮದೇ ನಿಜವಾದ ಜಾತ್ಯತೀತ ಪಕ್ಷ.... ತಮ್ಮದೇ ನಿಜವಾದ ದೇಶ ಪ್ರೇಮಿ ಪಕ್ಷ. ಉಳಿದವರೆಲ್ಲ 'ಸೂಡೋ ಸೆಕ್ಯುಲರ್‌ವಾದಿ'ಗಳು ಅಂತ ಹೇಳುತ್ತಾ ಹೇಳುತ್ತಾ ಮತ್ತೊಂದು ಕಡೆ ಚರ್ಚು, ಮಸೀದಿಗಳ ಮೇಲೆ ದಾಳಿಗಳಿಗೆ ಕುಮ್ಮಕ್ಕು ಕೊಡುತ್ತಾ, ಅಲ್ಪ ಸಂಖ್ಯಾತರ ಹಲ್ಲೆ ಮಾಡುವ ಕೋಮುವಾದಿ ಗೂಂಡಾಗಳಿಗೆ ಸಕಲ ಸೌಲಭ್ಯ ಮತ್ತು ರಕ್ಷಣೆಯನ್ನೂ ಕೊಡುತ್ತ ಇರುವುದಕ್ಕಿಂತ ಇದು ಸ್ವಲ್ಪ ಭಿನ್ನವಾದ ನಿಲುವು. ಸಂಘ ಪರಿವಾರದೊಳಗೆ ಯಾರು ಯಾರು ಯಾವಾಗ ಯಾವಾಗ ಯಾವ ಯಾವ ರೀತಿಯ ರಾಗ ಹೊರಡಿಸಬೇಕೆಂಬ ಜವಾಬ್ದಾರಿ ಹಂಚಿಕೆಯೂ ಆಗಿರಬಹುದೇನೋ !! ಇರಲಿ. ಈ ಕಡೆ ಭೀಕರ ಕೋಮುಗಲಭೆಗಳಿಗೆ ತಿದಿಯೂದಿತ್ತಾ ಪಿತೂರಿ ಮಾಡುವುದು, ಆ ಕಡೆ ತಮ್ಮದು ಮುಸ್ಲಿಂ ವಿರೋಧಿ ಪಕ್ಷವಲ್ಲ, ಅಲ್ಪಸಂಖ್ಯಾತ ವಿರೋಧಿ ಪಕ್ಷವಲ್ಲ ಅಂತ ಹೇಳುತ್ತಲೆ 'ಗುಜರಾತ್', 'ಒರಿಸ್ಸಾ'ದಂತಹ ಅನಾಗರೀಕ



ಕೃಪೆ : ಪ್ರಜಾವಾಣಿ


ಹತ್ಯಾಕಾಂಡಗಳನ್ನು ಸಂಘಟಿಸುವುದು ಸಂಘ ಪರಿಪಾರ ಕರಗತ ಮಾಡಿಕೊಂಡಿರುವ ಒಂದು ವಿಶೇಷ 'ನೈಪುಣ್ಯ'ವಾಗಿದೆ.

ಈಗ ಇಲ್ಲಿ ಬಿಜೆಪಿ ಪಕ್ಷವನ್ನು ಒಂದು ಪ್ರಶ್ನೆ ಕೇಳ ಬೇಕಾಗಿದೆ. ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರ ಹೇಳಿಕೆಗೆ ಬಿಜೆಪಿ ಪಕ್ಷದ ಸಮ್ಮತಿ, ಸಹಮತ ಇದೆಯೇ ? ಇದ್ದರೆ ಸದಾನಂದ ಗೌಡ, ಈಶ್ವರಪ್ಪನಂತಹವರು ಇದನ್ನು ಚಿಕ್ಕ ಮಗಳೂರು ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪುನರುಚ್ಛರಿಸುವರೇ ? ಅಥವಾ ಜನಾಂಗ ದ್ವೇಷವನ್ನು ಹರಡುವ, ಜನರನ್ನು ಕೋಮು ಆಧಾರದಲ್ಲಿ ಒಡೆದು ರಾಜಕೀಯ ಲಾಭ ಮಾಡಿಕೊಳ್ಳುವ ಇಂತಹ ಸಂವಿಧಾನ ವಿರೋಧಿ ಹೇಳಿಕೆ ನೀಡಿದ ಸಂಸದನ ವಿರುದ್ದ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವರೇ ? ಹೆಗಡೆ ಮಾತುಗಳು ಬಿಜೆಪಿ ಒಪ್ಪಿಗೆ ಇಲ್ಲವಾದರೆ, ಬಿಜೆಪಿಯ ತತ್ವ ಸಿದ್ದಾಂತಕ್ಕೆ ವಿರುದ್ಧವಾಗಿ ಮಾತನಾಡಿರುವ ಇವರನ್ನು ಪಕ್ಷದಿಂದ ಹೊರಹಾಕುವರೇ ?

ಈ ಪ್ರಶ್ನೆಗಳನ್ನು ನಾವು ಕೇಳಬಹುದು. ಪಾಪ ಈ ಪ್ರಶ್ನೆಗಳನ್ನು ಕಿವಿಮೇಲೆ ಹಾಕಿಕೊಳ್ಳಲು ಬಿಜೆಪಿ ಪಕ್ಷದಲ್ಲೀಗ ಯಾರಿಗೆ ಬಿಡುವಿದೆ ? ತಮ್ಮ ತಮ್ಮ ಬಣಗಳ ಸಂಖ್ಯಾ ಬಲ ಕಾಪಾಡಿಕೊಂಡು, ಕುರ್ಚಿ ಕಾದಾಟ, ಎಳೆದಾಟದ ಆಟ, ಜೊತೆಗೆ ಚುನಾವಣಾ ಆಟ ಆಡಿದರೆ ಅದೇ ಸಾಕಾಗಿದೆ.

ಬಾಲಂಗೋಚಿ –

ಇಲ್ಲೊಂದು ವೈರುಧ್ಯದ ಸಂಗತಿ ಇದೆ. ನೋಡಿ ಬಿಜೆಪಿ ಪಕ್ಷ ರಾಷ್ಟ್ರೀಯ ಅಧ್ಯಕ್ಷ ನೀತಿನ್ ಗಡ್ಕರಿ ಮೊನ್ನೆ ಏನು ಹೇಳಿದ್ದಾರೆ ನೋಡಿ. "ಅಲ್ಪಸಂಖ್ಯಾತರ ವಿರೋಧಿ ಎಂದು ಬಿಜೆಪಿಯನ್ನು ದೂಷಿಸಲಾಗುತ್ತದೆ. ಆದರೆ ಈ ಬಾರಿ ಗೋವಾದಲ್ಲಿ ಕ್ಯಾಥೋಲಿಕ್ ಕ್ರೈಸ್ತರು ಕೂಡ ನಮಗೆ ಮತ ಹಾಕಿದ್ದಾರೆ." ಎಂದಿದ್ದಾರೆ ಅವರು. ಗುಜರಾತ್‌ನ ಅನಾಗರೀಕ ನರಮೇಧದ ಸಂದರ್ಭದಲ್ಲಿ 'ನಾನು ಹೊರ ದೇಶಗಳಿಗೆ ಯಾವ ಮುಖ ಹೊತ್ತುಕೊಂಡು ಹೋಗಲಿ' ಎಂದು ಕಣ್ಣೀರು ಸುರಿಸಿದ ವಾಜಪೇಯಿಯವರು 2004ರ ಲೋಕಸಭಾ ಚುನಾವಣೆ ಬಂದಾಗ ಮುಸಲ್ಮಾನ ಮುಖಂಡರನ್ನು ಕರೆಸಿಕೊಂಡು ಅವರಿಂದ ಹಸಿರು ರುಮಾಲು ತಲೆಗೆ ಸುತ್ತಿಸಿಕೊಂಡರೂ ಜನ ಏನು ತೀರ್ಪು ಕೊಡಬೇಕೋ ಅದನ್ನೇ ಕೊಟ್ಟರು. ಇದು ಅನಂತ ಕುಮಾರ ಹೆಗಡೆ, ಗಡ್ಕರಿ ಆದಿಯಾಗಿ ಬಿಜೆಪಿ ಮುಖಂಡರಿಗೆ ಗೊತ್ತಾದರೆ ಒಳ್ಳೆಯದು.



ಬಿಜೆಪಿ ದರ್ಬಾರ್

ಆರ್ ರಾಮಕೃಷ್ಣ

ಕುಡಿಯುವ ನೀರಿನ ಟ್ಯಾಂಕರ್ ಖರೀದಿಗೆ ಬಿಬಿಎಂಪಿ ಹಣವನ್ನೇ ಬಿಡುಗಡೆ ಮಾಡಿಲ್ಲ

"ಬಿಬಿಎಂಪಿ ವ್ಯಾಪ್ತಿಯಲ್ಲಿ ನೀರು ವಿತರಣೆಗಾಗಿ 30 ಹೊಸ ಟ್ಯಾಂಕರ್‌ಗಳ ಖರೀದಿಗೆ 7.50 ಕೋಟಿ ರೂ.,ಯನ್ನು ಪಾಲಿಕೆ ಈವರೆಗೆ ಬಿಡುಗಡೆ ಮಾಡಿಲ್ಲ. ಹಣ ಬಿಡುಗಡೆಯಾದ ನಂತರ 45 ದಿನಗಳಲ್ಲಿ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಟ್ಯಾಂಕರ್ ಖರೀದಿ ಪ್ರಸ್ತಾವ ಕಳೆದ ವರ್ಷವೇ ಇತ್ತು. ಆದರೆ ಪಾಲಿಕೆ ಹಣ ಬಿಡುಗಡೆ ಮಾಡದ ಕಾರಣ ಇದು ಸಾಧ್ಯವಾಗಿಲ್ಲ. "

ಈ ಮೇಲಿನ ಹೇಳಿಕೆಯನ್ನು ನೀಡಿರುವವರು ಯಾವುದೇ ವಿರೋಧ ಪಕ್ಷದ ಮುಖಂಡರಲ್ಲ. –ಟಿ.ವೆಂಕಟರಾಜು, ಅವರು ಜಲಮಂಡಳಿಯಲ್ಲಿ ಪ್ರಧಾನ ಎಂಜಿನಿಯರ್ . ಆಗಿದ್ದಾರೆ.

ಬೆಂಗಳೂರು ನಗರದಲ್ಲಿ ಹಲವಾರು ಬಡಾವಣೆಗಳಲ್ಲಿ ನೀರಿಗೆ ಆಹಾಕಾರವೆದ್ದಿದೆ. ಇಲ್ಲಿ ಜನರು ಬಿಂದಿಗೆ, ಪಾತ್ರೆಗಳನ್ನು ಹಿಡಿದು ನೀರಿಗೆ ಅಲೆಯುವುದು ಮಾಮೂಲಿ ದೃಶ್ಯವಾಗಿತ್ತು. ಈಗ ಆ ಜನ ಜಲಮಂಡಳಿ ಕಛೇರಿಯ ಮುಂದೆ ಅವೇ ಪಾತ್ರೆಗಳನ್ನು ಹೊತ್ತು ತಂದು ನೀರಿಗಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಇದೆಲ್ಲ ತೀರಾ ಅನಿರೀಕ್ಷಿತವೇನೂ ಆಗಿರಲಿಲ್ಲ. ಇದು ಪ್ರತಿ ವರ್ಷದ ಬೇಸಿಗೆಯ ವಿದ್ಯಮಾನ. ಈ ಬಗ್ಗೆ ಕಳೆದ ವರ್ಷವೇ ಚರ್ಚೆಯಾಗಿ ತೀರ್ಮಾನವಾಗಿದ್ದರೂ ಕುಡಿಯುವ ನೀರು ಪೂರೈಕೆ ಟ್ಯಾಂಕರ್ ಖರೀದಿಗೆ ಹಣ ಬಿಡುಗಡೆಯಾಗಿಲ್ಲ. ಈ ವರ್ಷ ಮತ್ತೆ ಚರ್ಚೆ ನಡೆದು ಡಿಸೆಂಬರ್ ತಿಂಗಳಲ್ಲೇ ತೀಮಾನವಾಗಿದ್ದರೂ ಮಾರ್ಚ್ 11ರ ವರೆಗೆ ಹಣ ಬಿಡುಗಡೆಯಾಗಿರಲಿಲ್ಲ. ಆ ನಂತರ ಬಿಡುಗಡೆಯಾದ ಬಗೆಗೆ ವರದಿಯಾಗಿದೆ. ವಾಹನ ಖರೀದಿ ಪ್ರಕ್ರಿಯೆ ಮುಗಿಸಿ ಟ್ಯಾಂಕರ್ ಖರೀದಿ ಆಗುವ ಹೊತ್ತಿಗೆ ಮತ್ತೆ ಮಳೆಗಾಲ ಬಂದಿರುತ್ತದೆ. ಹೇಗಿದೆ ದೇಶಭಕ್ತ ಬಿಜೆಪಿ ಆಳ್ವಿಕೆಯ ಬಿಜೆಪಿ ದರ್ಬಾರ್– ಬಿಬಿಎಂಪಿಯಲ್ಲಿ.

ಪಿಯುಸಿ ವಿದ್ಯಾರ್ಥಿಗಳ ಪ್ರವೇಶ ಪತ್ರದಲ್ಲಿ ಜಾತಿ ನಮೂದು

ರಾಜ್ಯದ ಬಿಜೆಪಿ ಸರ್ಕಾರ, ಬಿಜೆಪಿ ಪಕ್ಷ, ಸಂಘ ಪರಿವಾರಗಳೆಲ್ಲಾ ಸೇರಿ ಜಾತಿವಾದವನ್ನು, ಜಾತಿ ರಾಜಕೀಯವನ್ನು ಕರ್ನಾಟಕದ ಇತಿಹಾಸದಲ್ಲಿ ಹಿಂದೆಂದೂ ಇಲ್ಲದ ಮಟಕ್ಕೆ ಅಂದರೆ ಅದರ ಉತ್ತುಂಗಕ್ಕೆ ಕೊಂಡೊಯ್ದಿರುವುದು ನಮಗೆಲ್ಲ ಗೊತ್ತು.

ಈಗ ಈ ಮಾಹಿತಿ ನೋಡಿ: ಮಾರ್ಚ್ 15 ರಂದು 2012 ರಾಜ್ಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾಗುತ್ತಿವೆ. ಆ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಪ್ರವೇಶ ಪತ್ರಗಳಲ್ಲಿ ವಿದ್ಯಾರ್ಥಿಗಳ ಜಾತಿಯನ್ನು ನಮೂದಿಸಲಾಗಿದೆಯಂತೆ. ಈ ಕೃತ್ಯದ ಹೊಣೆಯನ್ನು ಬರಿ ಪದಪಿ ಪೂರ್ವ ಪರೀಕ್ಷಾ ಮಂಡಳಿ ತಲೆಗೆ ಕಟ್ಟಿ ಸರ್ಕಾರ ತಪ್ಪಿಸಿಕೊಳ್ಳಬಹುದೇ ? ಈ ಸರ್ಕಾರಕ್ಕೆ ಶಿಕ್ಷಣ ಸಚಿವರು, ಮುಖ್ಯಮಂತ್ರಿಗಳು ಎಂಬುವವರೆಲ್ಲಾ ಇದ್ದಾರಲ್ಲವೇ ? ಅವರೆಲ್ಲಾ ಯಾಕೆ ಇದ್ದಾರೆ?

ಜಾತಿವಾದಿ ಶಿಕ್ಷಕರು. ಪರೀಕ್ಷಕರು ತಮ್ಮ ಜಾತಿಯವರೆಂದು ಅನುಕೂಲ ಮಾಡಿಕೊಡುವುದು, ಅಥವಾ ಬೇರೆ ಜಾತಿಯವರೆಂದು ಅನಾನುಕೂಲ ಮಾಡುವುದು ಇಂಥದ್ದೆಲ್ಲ ನಡೆದರೆ ಅದಕ್ಕೆ ಯಾರು ಹೊಣೆ? ಅಂಥದ್ದು ನಡೆಯದಿದ್ದರೂ, ನಡೆದಿದೆ ಎಂಬ ಅನುಮಾನ, ಸಂಶಯ ಮೂಡಿದರೆ, ಗೊಂದಲ, ಗದ್ದಲ ನಡೆದರೆ ಅದಕ್ಕೆ ಯಾರು ಹೊಣೆ?

ಬೆಳ್ತಂಗಡಿ : ಬಂಧನ, ಸುಳ್ಳು ಮೊಕದ್ದಮೆ ಉನ್ನತ ಪೋಲೀಸ್ ಅಧಿಕಾರಿಗಳಿಗೆ ನಿಯೋಗದ ಒತ್ತಾಯ

ನಕ್ಸಲ್ ವಿರೋಧಿ ಪಡೆಗಳ ದೌರ್ಜನ್ಯಕ್ಕೆ ಈಡಾಗಿ ಸುಳ್ಳು ಮೊಕದ್ದಮೆಗಳಿಂದ ಬಂಧಿತರಾಗಿರುವ ವಿಠ್ಠಲ ಹಾಗೂ ಅವರ ತಂದೆ ಲಿಂಗಣ್ಣನವರನ್ನು ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಅದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಪೋಲೀಸ್ ಮಹಾನಿರ್ದೇಶಕರಾದ ಶಂಕರ್ ಬಿದರಿಯವರನ್ನು ಹಾಗೂ ಎ.ಡಿ.ಜಿ.ಪಿ. ಬಿಪಿನ್ ಗೋಪಾಲ ಕೃಷ್ಣ ರವರನ್ನೂ ನೀಯೋಗವು ಭೇಟಿ ಮಾಡಿ ಮನವಿ ಸಲ್ಲಿಸಿ ಚರ್ಚಿಸಿತು.

ಈ ವಿಷಯದಲ್ಲಿ ಖಂಡಿತಕ್ಕೂ ಮುಗ್ದರನ್ನು ಬಿಡುಗಡೆಗೊಳಿಸುವುದಾಗಿ [illegible] ನೀಡಿದ್ದರು. ನಿಯೋಗದಲ್ಲಿ ಸಂಘಟನೆಯ ಮುಖಂಡರು, ರೈತ ಸಂಘಟನೆಯ ಪದಾಧಿಕಾರಿ[illegible] ಜಿ.ಸಿ. ಬಯ್ಯರೆಡ್ಡಿ, ಮಾರುತಿ ಮಾನ್ಪಡೆ, ಸಮಿತಿಯ ಪಿ.ಆರ್. ಭರತ್ ಹಾಗೂ [illegible] ಗುರುಶಾಂತ್, ಇದ್ದರು.

ಇದಕ್ಕಾಗಿ ಆಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆಗಳು [illegible]

ಕಾರ್ಮಿಕ ವರ್ಗದ ಐಕ್ಯತೆ

ಪಿ.ರಾಮಮೂರ್ತಿಯವರು ನೀಡಿದ ಪುಟ ಹೇಳಿಕೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಪ್ರಶ್ನೆಯಲ್ಲಿ

ಸಾರ್ವಜನಿಕ ವಲಯದ ಸಂಘಗಳನ್ನು ಸೇರಿಸಿ ಹೋರಾಟದ ಒಂದು ಐಕ್ಯ ವೇದಿಕೆಯನ್ನು ರಚಿಸಿ ಕೇಂದ್ರ ಸರ್ಕಾರ ಸಾರ್ವಜನಿಕ ವಲಯವನ್ನು ಮೂದಲಿಸುವ ಹುನ್ನಾರದ ವಿರುದ್ಧ ಸಿಐಟಿಯು ದೇಶವ್ಯಾಪಿಯಾಗಿ ಸ್ವತಂತ್ರ ಪ್ರಚಾರವನ್ನು ನಡೆಸಿತು. ಡಾ|| ಅರ್ಜುನ್ ಸೇನ್ ಗುಪ್ತಾ ಸಮಿತಿ ತಯಾರಿಸಿದ ಗುಪ್ತ ವರದಿ ಸಾರ್ವಜನಿಕ ವಲಯದ ಜಾಲವನ್ನು ಕಳಚಿ ಹಾಕಬೇಕು ಎಂಬ ಶಿಫಾರಸ್ಸನ್ನು ಮಾಡುತ್ತಾ, ಅದನ್ನು ಹೇಗೆ ಮೂದಲಿಸಿ, ಕಳಚಿ ಹಾಕಬೇಕು ಎಂಬುದರ ನೀಲ ನಕ್ಷೆಯನ್ನು ರೂಪಿಸಿದೆ ಎನ್ನುವುದನ್ನು ಸಿಐಟಿಯು ಬೆಳಕಿಗೆ ತಂದು ಪ್ರಚಾರ ಮಾಡಿತು.

1985ರಲ್ಲಿ ಬೆಂಗಳೂರಿನಲ್ಲಿ ಸಿಐಟಿಯು ಸಂಯೋಜಿತ ಮತ್ತು ಮಿತ್ರ ಸಂಘಗಳ ಬೃಹತ್ ಸಮಾವೇಶವನ್ನು ನಡೆಸಿ ಸಾರ್ವಜನಿಕ ವಲಯದ ವಿಶಾಲವಾದ ಐಕ್ಯ ವೇದಿಕೆಗೆ ಬುನಾದಿ ಹಾಕಿತು. 1986ರಲ್ಲಿ ಹೈದ್ರಾಬಾದ್‌ನಲ್ಲಿ ನಡೆದ ಸಾರ್ವಜನಿಕ ವಲಯದ ಸಂಘಗಳ ಸಮಾವೇಶವನ್ನು ನಡೆಸಿ ಬೆಂಗಳೂರಿನ ಜಂಟಿ ಕ್ರಿಯಾ ಸಮಿತಿ(ಜೆಎಎಫ್) ಮತ್ತು ಹೈದ್ರಾಬಾದ್‌ನ ಸಾರ್ವಜನಿಕ ವಲಯ ಸಂಘಗಳ ಸಮನ್ವಯ ಸಮಿತಿಯನ್ನು ಸೇರಿಸಿ (ಸಿಪಿಎಸ್‌ಟಿಯು) ಸಾರ್ವಜನಿಕ ವಲಯದ ಕಾರ್ಮಿಕ ಐಕ್ಯ ವೇದಿಕೆಯನ್ನು ರಚಿಸಿತು.

ಜಾಗತೀಕರಣ-ಉದಾರೀಕರಣ ನೀತಿಗಳ ವಿರುದ್ಧ

ಆಳುವ ವರ್ಗಗಳು ಅದುವರೆಗೂ ಅನುಸರಿಸಿಕೊಂಡು ಬಂದ ಆರ್ಥಿಕ ನೀತಿ 1991 ರಿಂದ ದೊಡ್ಡ ಪ್ರಮಾಣದಲ್ಲಿ ಬಲಪಂಥದತ್ತ, ಸ್ವಾವಲಂಬನೆ-ಜನಪರ ಅಭಿವೃದ್ಧಿಯ ಆಶಯಗಳಿಗೆ ಸಂಪೂರ್ಣ ವಿರುದ್ಧವಾದ ಹಾದಿಗೆ ಸರಿದು ಸಾಮ್ರಾಜ್ಯಶಾಹಿ ಪ್ರೇರಿತ ನವ-ಉದಾರವಾದಿ, ಜಾಗತೀಕರಣದತ್ತ ತಿರುಗಿತು. 1991ರಲ್ಲಿ ವಿಶ್ವಬ್ಯಾಂಕ್, ಐಎಮ್‌ಎಫ್ ಆದೇಶಗಳಿಗೆ ತಲೆಬಾಗಿ ಆರಂಭಿಸಿದ ಈ ಎಲ್‌ಪಿಜಿ ನೀತಿಗಳನ್ನು ವಿರೋಧಿಸಿ ಕಾರ್ಮಿಕ ಸಂಘಗಳ ಐಕ್ಯ ಆಂದೋಲನ ಒಂದು ಸಂಪೂರ್ಣ ಹೊಸಘಟ್ಟವನ್ನೇ ಪ್ರವೇಶಿಸಿತು. 1991, ನವೆಂಬರ್ 29ರಂದು ನಡೆದ ದೇಶವ್ಯಾಪಿ ಮುಷ್ಕರದಲ್ಲಿ ಹಲವಾರು ಕಾರ್ಮಿಕ ಸಂಘಟನೆಗಳು ಐಕ್ಯ ಕಾರ್ಯಾಚರಣೆಗೆ ಸೇರಿಕೊಂಡವು. ಇದು ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ರಚನೆಗೆ ಹಾದಿಯಾಯಿತು. ಕೇಂದ್ರ ಮತ್ತು ರಾಜ್ಯ ಸರಕಾರಗಳ ನೌಕರರನ್ನು, ರಕ್ಷಣೆ, ಔಷಧಿ, ರಸಗೊಬ್ಬರ, ಬ್ಯಾಂಕ್, ವಿಮೆ ಮತ್ತಿತರ ಬಹು ಸಂಖ್ಯೆಯ ನೌಕರರನ್ನು ಪ್ರತಿನಿಧಿಸುವ ಪ್ರಮುಖ ಸ್ವತಂತ್ರ ಅಖಿಲ ಭಾರತ ಒಕ್ಕೂಟಗಳು ಈ ಪ್ರಾಯೋಜಕ ಸಮಿತಿಗೆ ಸೇರಿದವು.

ಪ್ರಾಯೋಜಕ ಸಮಿತಿಯ ಮುತುವರ್ಜಿಯಿಂದ ವಿವಿಧ ಜನವಿಭಾಗಗಳ ರೈತರು ಕೃಷಿಕೂಲಿಕಾರರು, ವಿದ್ಯಾರ್ಥಿಗಳು ಯುವಜನ, ಮಹಿಳೆಯರು, ವಕೀಲರು, ವೃತ್ತಿಪರ ಜನಗಳ ಸಾಮೂಹಿಕ ಸಂಘಟನೆಗಳನ್ನು 1993ರ "ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ" (ಎನ್‌ಪಿಎಂಒ) ಯ ರಚನೆಯ ಮೂಲಕ ವಿನಾಶಕಾರಿ ಆರ್ಥಿಕ ಧೋರಣೆಗಳ ವಿರುದ್ಧ ಐಕ್ಯ ಹೋರಾಟಗಳಲ್ಲಿ ಒಳಗೊಳ್ಳಲಾಗಿದೆ. ಅಂದಿನಿಂದ ಬಿಎಂಎಸ್ ಮತ್ತು ಐಎನ್‌ಟಿಯುಸಿಯನ್ನು ಹೊರತು ಪಡಿಸಿ 13 ಮುಷ್ಕರಗಳನ್ನು 1991ರ ಜಾಗತಿಕರಣದ ನೀತಿಗಳ ನಂತರ ನಡೆಸಲಾಗಿದೆ. ಈ ಜಾಗತೀಕರಣದ ನೀತಿಗಳು ಸಂಪೂರ್ಣವಾಗಿ ಕಾರ್ಮಿಕರ ನಿರ್ದಯ ಶೋಷಣೆಯ ಪರವಾಗಿ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿರುವ ನೀತಿಗಳಾಗಿವೆ. ಈ ನಿರ್ದಯ ಕಾರ್ಮಿಕ ದ್ರೋಹಿ, ದೇಶದ್ರೋಹಿ ನೀತಿಗಳ ವಿರುದ್ಧ ತಳಹಂತದಲ್ಲಿ ಕಾರ್ಮಿಕರ ವಿಶಾಲ ಐಕ್ಯತೆ ಅನಿವಾರ್ಯವಾಗಿದ್ದು ಸುದೀರ್ಘ ಕಾಲದಿಂದ ಇಂತಹ ಐಕ್ಯತೆಗಾಗಿ ಪಟ್ಟ ಶ್ರಮ ಇದೀಗ ಫಲ ನೀಡುತ್ತಿದೆ. ಅದರ ಭಾಗವಾಗಿ ಇಂದು ಎಡಪಂಥೀಯ ಮತ್ತು ಬಲಪಂಥೀಯ ಕಾರ್ಮಿಕ ಸಂಘಟನೆಗಳು 'ಕಾರ್ಮಿಕ ಸಂಘಟನೆಗಳ ಜಂಟೀ ವೇದಿಕೆ'ಯನ್ನು ರಚಿಸಿ ಪ್ರಥಮ ಬಾರಿಗೆ ಭಾರತದ ಕಾರ್ಮಿಕ ಚಳುವಳಿಯಲ್ಲಿಯೇ ಐತಿಹಾಸಿಕವಾದ ಅಭೂತ ಪೂರ್ವ ಐಕ್ಯತೆಯ ಯಶಸ್ವಿ ಮುಷ್ಕರವನ್ನು ನಡೆಸಲಾಗಿದೆ.

ಮುಂದೆಯೂ ಕಾರ್ಮಿಕ ವರ್ಗದ ಮೇಲೆ ದುಡಿಯುವ ವರ್ಗದ ಮೇಲೆ ಆಳುವ ಸರ್ಕಾರಗಳು ಕ್ರೂರವಾದ ನೀತಿಗಳನ್ನು ಹೇರುವುದು ಖಚಿತವಾಗಿವೆ. ಅಷ್ಟು ಸುಲಭವಾಗಿ ಆಳುವ ಸರ್ಕಾರಗಳು ಹಿಂದೆ ಸರಿಯುವುದಿಲ್ಲ ಎಂಬುದನ್ನು ನಮಗೆ ಇತಿಹಾಸದ ಪಾಠಗಳು ಕಲಿಸಿವೆ. ಈಗ ಸಾಧಿಸಲಾಗಿರುವ ಕಾರ್ಮಿಕ ವರ್ಗದ ಐಕ್ಯತೆಯನ್ನು ಜೋಪಾನ ಮಾಡುತ್ತಾ ಇನ್ನಷ್ಟು ಇನ್ನಷ್ಟು ವಿಶಾಲ ವ್ಯಾಪ್ತಿಯ ಕಾರ್ಮಿಕ ವರ್ಗವನ್ನು ಐಕ್ಯ ಚಳುವಳಿಯೊಂದಿಗೆ ಬೆಸೆಯುತ್ತಾ ಸಾಗುವುದು ಈಗ ದೇಶದ ಕಾರ್ಮಿಕ ಚಳುವಳಿಗಳ ನಾಯಕತ್ವದ ಮೇಲಿರುವ ಸವಾಲಾಗಿದೆ.

ತಮ್ಮ ರಾಜಕೀಯ ಒಲವು ನಿಲುವುಗಳು, ಸಂಘಟನಾತ್ಮಕ ಭಿನ್ನತೆಗಳು, ಜಾತಿ, ಭಾಷೆ, ಬಣ್ಣ, ಪ್ರಾದೇಶಿಕತೆಗಳನ್ನಾಧರಿಸಿದ ಎಲ್ಲ ವ್ಯತ್ಯಾಸಗಳನ್ನು ಮೀರಿ ಕೇವಲ ಕಾರ್ಮಿಕ ವರ್ಗವಾಗಿ ಯೋಚಿಸಿ- ಮನುಷ್ಯತ್ವದ ಕನಿಷ್ಠ ಘನತೆಯೊಂದಿಗೆ ಬದುಕಲು ಸಾಧ್ಯ ಮಾಡುವ ತನ್ನ ಬೇಡಿಕೆಗಳಿಗಾಗಿ, ತನ್ನ ಕಾನೂನು ಬದ್ಧವಾದ ಹಕ್ಕುಗಳಿಗಾಗಿ ತನ್ನ ಬೆವರಿನಿಂದ ಉತ್ಪತ್ತಿಯಾದ ಸಂಪತ್ತಿನಲ್ಲಿ ತನ್ನ ನ್ಯಾಯಯುತ ಪಾಲಿಗಾಗಿ ಕಾರ್ಯಾಚರಣೆಗೆ ಇಳಿದರೂ ಅದು ಭಾರತದ ಪ್ರಜಾಪ್ರಭುತ್ವ ಆಂದೋಲನದ ಹೊಸ ಮುನ್ನಡೆಗೆ ದಾರಿಯಾಗುತ್ತದೆ.

ಅಂತಹ ಗುರಿಯ ಕಡೆಗೆ ನಡೆಯುವುದು ಸಿಐಟಿಯು ಸಂಘಟನೆಯ ಕಾಳಜಿಯಾಗಿದೆ. ಸಿಐಟಿಯು ಸಂಘಟನೆ ಮುಂದೆಯೂ ಈ ಗುರಿಯ ಕಡೆಗೆ ಸಾಗಲು, ಕಾರ್ಮಿಕರ ಐಕ್ಯತೆಯ ರಕ್ಷಣೆಗೆ ಸತತ ಶ್ರಮಿಸಲಿದೆ.



ಕಾರವಾರ : ಭರವಸೆ ವಂಚನೆಗಳ ವಿರುದ್ಧ ಪಾದಯಾತ್ರೆ

ಕಾರವಾರ ತಾಲೂಕಿನ ಉಳಗಾ ಗ್ರಾಮದ ಕಾಲಿನ ದಾರಿಯಿಂದ ಜಿಲ್ಲಾಧಿಕಾರಿ ಕಛೇರಿಗೆ ಸ್ಥಳೀಯ ಪ್ರಮುಖ ಬೇಡಿಕೆಗಳಾದ ಕಾಳಿನದಿಗೆ ಉಳಗಾ-ಕೇರವಾಡಿ ಮಧ್ಯೆ ಸೇತುವೆ ನಿರ್ಮಾಣ, ಏತನೀರಾವರಿ ಯೋಜನೆ ಸಮರ್ಪಕ ಜಾರಿಗಾಗಿ, ಅರಣ್ಯ ಅತಿಕ್ರಮಣ ಭೂಮಿ ಸಕ್ರಮಕ್ಕಾಗಿ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ, ಕಾರವಾರ ತಾಲೂಕು ಸಮಿತಿ ನೇತೃತ್ವದಲ್ಲಿ 31 ಕಿ.ಮೀ. ಪಾದಯಾತ್ರೆ ಯಶಸ್ವಿಯಾಗಿ ನಡೆಯಿತು. ಮಾರ್ಚ್ 2ರಂದು ಪಾದಯಾತ್ರೆಯನ್ನು ಜಿಲ್ಲಾ ಕಾರ್ಯದರ್ಶಿ ಶಾಂತರಾಮ ನಾಯಕ ಉದ್ಘಾಟಿಸಿದರು, ಸುಮಾರು 31 ಕಿ.ಮೀ. ಕ್ರಮಿಸಿ ಸಾಯಂಕಾಲ 4 ಗಂಟೆಗೆ ಜಿಲ್ಲಾಧಿಕಾರಿ ಕಛೇರಿಯನ್ನು ಪಾದಯಾತ್ರೆ ತಲುಪಿತು.

ಕಾಳಿನದಿಗೆ ಉಳಗಾ-ಕೇರವಾಡಿ ಮಧ್ಯೆ ಸೇತುವೆ ನಿರ್ಮಾಣವಾದರೆ 8-9 ಗ್ರಾಮ ಪಂಚಾಯತ್ ಜನರಿಗೆ ಅನುಕೂಲವಾಗುತ್ತದೆಯೆಂದು 2-3 ತಿಂಗಳಿಂದ ಈ ಪ್ರದೇಶಗಳಲ್ಲಿ ರೈತ ಸಂಘ ಸಹಿ ಸಂಗ್ರಹ ನಡೆಸಿ ಪಾದಯಾತ್ರೆ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಹತ್ತಾರು ಗ್ರಾಮಗಳ ಜನತೆ ಪಾದಯಾತ್ರೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದರು.

ಚುನಾವಣೆ ಬಂದಾಗ ಆಶ್ವಾಸನೆ ನೀಡಿ ಆಮೇಲೆ ಮರೆಯುವ ರಾಜಕೀಯ ಪಕ್ಷಗಳ ನೀತಿಯನ್ನು ತೀವ್ರವಾಗಿ ಖಂಡಿಸಲಾಯಿತು. ಈ ಸಲದ ಬಜೆಟ್‌ನಲ್ಲೇ ಸೇತುವೆ ನಿರ್ಮಾಣಕ್ಕೆ ಹಣ ತೆಗೆದಿಡಬೇಕು, ಏತನೀರಾವರಿ ಯೋಜನೆಗಳ ಜಾರಿಯಲ್ಲಿ ನಡೆದಿರುವ ಭ್ರಷ್ಟಾಚಾರ ತಡೆಯಬೇಕು ಮತ್ತು ವೈಜ್ಞಾನಿಕವಾಗಿ ಜಾರಿಗೊಳಿಸಬೇಕು. 50-80 ವರ್ಷಗಳಿಂದ ವಶದಲ್ಲಿರುವ ಸಾಗುವಳಿ-ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ಅರಣ್ಯ ಅತಿಕ್ರಮಣ ಭೂಮಿಯನ್ನು ಸಕ್ರಮಗೊಳಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ನೀಡಿದ ಮನವಿಯಲ್ಲಿ ಆಗ್ರಹಿಸಲಾಯಿತು.

ಉಳಗಾ, ಕೇರವಡಿ, ಹಳಗಾ, ಹಳಗೇಜೂಗಾ, ಹಣಕೋಣ ಜೂಗಾ, ಹಣಕೋಣ, ತನ್ನೋಡಿ, ಬಗತವಾಡು, ಕೃಷ್ಣಪುರ, ಚಿತ್ತಾಕುಲ ಮುಂತಾದ ಗ್ರಾಮಗಳ ಜನರು ಈ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಅರ್ಜುನಕೋಟದಲ್ಲಿ ಪಾದಯಾತ್ರೆಯಲ್ಲಿ ಆಗಮಿಸಿದ ರೈತರಿಗೆ ತಂಪು ಪಾನೀಯ ನೀಡಿ ಸ್ವಾಗತಿಸಿದರು. ಕಾರವಾರ ಹೂವಿನ ಚೌಕದಲ್ಲಿ ಆಟೋ ಚಾಲಕರು ಸ್ವಾಗತಿಸಿದರು.

ಪಾದಯಾತ್ರೆಯಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತರಾಮ ನಾಯಕ್, ಕಾರ್ಮಿಕ ಮುಖಂಡರಾದ ಯಮುನಾ ಗಾಂವ್ಕರ್, ರೈತ ಸಂಘದ ನಾಯಕ ಸಮಿತಿ ಅಧ್ಯಕ್ಷರಾದ ವಿಷ್ಣು ಶಂಕರನಾಯ್ಕ, ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ಉದಯ ಮಡಿವಾಳ, ಕ್ಷೀಮಾ ಎಳಗೀಕರ, ಎ.ಜಿ.ನಾಯ್ಕ, ಗೋವಿಂದನಾಯ್ಕ, ನಾರಾಯಣ ನಾಯ್ಕ, ಸದಾನಂದ ಆಚಾರಿ, ಉಲ್ಲಾಸ ನಾಯ್ಕ, ಮನೋಜ ಗಜನಿಕರ ಮುಂತಾದವರು ಸೇರಿ 250ಕ್ಕೂ ಹೆಚ್ಚು ಜನ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಪ್ರಮುಖರಾದ ಬಾಬನಿ ಅಸ್ನೋಟಿಕರ, ವರದಾ ನಾಯ್ಕ, ಸುಭಾಶ ಕೊಪ್ಪಿಕರ ಮುಂತಾದವರು ಹಾಜರಿದ್ದರು.

ರೈಲ್ವೆ ಬಜೆಟ್ ಬಂತು, ಮಂತ್ರಿಗಳು ಹೋದರು(?), ಹೊರೆ ಮಾತ್ರ ತಪ್ಪಿಲ್ಲ

ಯುಪಿಎ-2 ಸರಕಾರದ 2012-13ರ ರೈಲ್ವೆ ಬಜೆಟ್ ಮಂಡನೆಯಾದ ಮರುದಿನವೇ ರೈಲ್ವೆ ಮಂತ್ರಿಗಳ ರಾಜೀನಾಮೆ/ವಜಾದ ಸುದ್ದಿಯೂ ಬಂದಿದೆ. ಬಜೆಟ್ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕಿ, ಜತೆಗೆ ಭಾರತೀಯ ರೈಲ್ವೆಯನ್ನೇ ನಾಶಮಾಡಲು ಹೊರಟಿದ್ದರೆ, ರೈಲ್ವೆ ಮಂತ್ರಿಗಳ ರಾಜೀನಾಮೆ/ವಜಾ ಯುಪಿಎ-2 ಸರಕಾರದ ಹಳಿ ತಪ್ಪಿಸುತ್ತದೆಯೇ ಎಂಬ ಪ್ರಶ್ನೆ ಹುಟ್ಟಿಸಿದೆ.

ಬಜೆಟ್ ಮಂಡಿಸುವ ಒಂದು ವಾರ ಮೊದಲು ಕಲ್ಲಿದ್ದಲು, ರಸಗೊಬ್ಬರ, ಆಹಾರ ಧಾನ್ಯಗಳು, ಉಕ್ಕು, ಸಿಮೆಂಟ್ ಮುಂತಾದ ಸರಕುಗಳ ಸಾಗಾಣಿಕೆ ದರಗಳನ್ನು 20ಶೇ.ದಷ್ಟು ಹೆಚ್ಚಿಸಲಾಗಿತ್ತು. ಈಗ ಬಜೆಟಿನಲ್ಲಿ ಪ್ರಯಾಣ ದರಗಳನ್ನೂ ಹೆಚ್ಚಿಸಲಾಗಿದೆ. ಸಾಮಾನ್ಯ ಎರಡನೇ ದರ್ಜೆಯ ದರಗಳನ್ನು ಕಿ.ಮೀಗೆ 3 ಪೈಸೆಯಂತೆ ಮತ್ತು ಎರಡನೇ ದರ್ಜೆ ಸ್ಲೀಪರ್ ದರಗಳನ್ನು ಕಿ.ಮೀ.ಗೆ 5 ಪೈಸೆಯಂತೆ ಹೆಚ್ಚಿಸಲಾಗಿದೆ. ಇದೇ ರೀತಿ ಮೇಲಣ ದರ್ಜೆಗಳ ದರಗಳನ್ನೂ ಹೆಚ್ಚಿಸಲಾಗಿದೆ. ಹೆಚ್ಚಳದ ಪ್ರಮಾಣ ಸರಾಸರಿ 20-25 ಶೇ. ಆಗುತ್ತದೆ. ಇದೂ ಸಾಲದೆಂಬಂತೆ, ಪ್ರಯಾಣ ದರಗಳಲ್ಲಿ 'ಇಂಧನ ಹೊಂದಾಣಿಕೆ ಅಂಶ'ವನ್ನು ಕೂಡ ಸೇರಿಸುವ ಪ್ರಸ್ತಾವವಿದೆ, ಅಂದರೆ ಪೆಟ್ರೋಲಿಯಂ ದರಗಳ ಏರಿಕೆಯೊಂದಿಗೆ ಪ್ರಯಾಣ ದರಗಳೂ ತಂತಾನೇ ಏರುತ್ತವೆ!

ರೈಲ್ವೆ ಮಂತ್ರಿಗಳು ತೃಣಮೂಲ ಕಾಂಗ್ರೆಸಿನವರೇ ಆಗಿದ್ದರೂ, ಸಂಸತ್ತಿನಲ್ಲಿ ಅವರ ಪಕ್ಷದ ಸದಸ್ಯರು ಬಜೆಟ್ ಮಂಡಿಸುವಾಗ ಸುಮ್ಮನಿದ್ದರೂ, ಕೆಲವರಂತೂ ಬಜೆಟಿಗೆ ಬೆಂಬಲವಾಗಿ ಇತರ ಆಳುವ ಕೂಟದ ಸದಸ್ಯರೊಂದಿಗೆ ಮೇಜು ಕುಟ್ಟುತ್ತಿದ್ದರೂ, ಅವರ ಸರ್ವೋಚ್ಚ ನಾಯಕಿ ದರ ಏರಿಕೆಗಳ ವಿರುದ್ಧ ಹರಿ ಹಾಯ್ದಾಗ ಆ ಪಕ್ಷದ ಸದಸ್ಯರೆಲ್ಲರೂ ಅದನ್ನು ಅನುಕರಿಸಿದ್ದಾರೆ. ಇದು ಕೇವಲ ನಾಟಕವಲ್ಲ ಎಂದು ಜನರಿಗೆ ಮನವರಿಕೆ ಮಾಡಿಸಲು ಆಕೆ ಪ್ರಧಾನ ಮಂತ್ರಿಗಳಿಗೆ ತಮ್ಮ ಪಕ್ಷಕ್ಕೆ ಸೇರಿದ ರೈಲ್ವೆ ಮಂತ್ರಿಯನ್ನು ಸಂಪುಟದಿಂದ ಕೈಬಿಡುವಂತೆ ಸಂದೇಶವನ್ನೂ ಕಳಿಸಿದರು. ಈ ನಡುವೆ ದರ ಏರಿಕೆಗಳ, ಪಿಪಿಪಿ ಮಾದರಿಯ ಮೂಲಕ ಖಾಸಗೀಕರಣದ ಹಾದಿಯಲ್ಲಿ ಸಾಗಿರುವ ಬಜೆಟನ್ನು ಪ್ರಧಾನ ಮಂತ್ರಿಗಳು ಎಂದಿನಂತೆ ಹಾಡಿ ಹೊಗಳಿದರೆ, ಸ್ವತಃ ರೈಲ್ವೆ ಮಂತ್ರಿಗಳು ಬಲವಾಗಿ ಸಮರ್ಥಿಸಿಕೊಂಡು, ಈಗ ಸಂಪುಟದಲ್ಲಿ ಸ್ಥಾನ ಕಳಕೊಂಡಿದ್ದಾರೆ. ಆ ಸ್ಥಾನದಲ್ಲಿ ತೃಣಮೂಲ ಸರ್ವೋಚ್ಚ ನಾಯಕಿ ಸೂಚಿಸಿದ ಹೆಸರನ್ನು ಇನ್ನೂ ಪ್ರಧಾನ ಮಂತ್ರಿಗಳು ಸ್ವೀಕರಿಸಿಲ್ಲ. ಸದ್ಯಕ್ಕೆ ತಾನೇ ರೈಲ್ವೆ ಇಲಾಖೆಯನ್ನು ನೋಡಿಕೊಳ್ಳುವುದಾಗಿ ಹೇಳಿದ್ದಾರಂತೆ.

ವಾಸ್ತವವಾಗಿ, ಈಗಿನ ದರ ಏರಿಕೆ ಈ ನಾಯಕಿಯೇ ಸ್ವತಃ ರೈಲ್ವೆ ಮಂತ್ರಿಯಾಗಿದ್ದ ಅವಧಿಯಲ್ಲಿ ರೈಲ್ವೆ ಇಲಾಖೆಯ ಅದಕ್ಷ ನಿರ್ವಹಣೆಯ ಸಂಚಿತ ಪರಿಣಾಮ. ಇದೇ ನಾಯಕಿ ಒಂದು ವಾರದ ಹಿಂದೆಯಷ್ಟೇ ಸಾಗಾಣಿಕೆ ದರಗಳನ್ನು ಏರಿಸಿದಾಗ ಮೌನವಾಗಿದ್ದರು. ಈ ಸಾಗಾಣಿಕೆ ದರಗಳ ಹೆಚ್ಚಳದ ಹೊರೆಯನ್ನೂ ಅಂತಿಮವಾಗಿ ಜನಸಾಮಾನ್ಯರೇ ಸರಕುಗಳಿಗೆ ಹೆಚ್ಚಿನ ಬೆಲೆ ತೆರುವ ಮೂಲಕ ಹೊರುತ್ತಾರೆ ಎಂಬುದು ಆಕೆಗೆ ಗೊತ್ತಿರದ ಸಂಗತಿಯೇನಲ್ಲ.

★

ಆರೋಗ್ಯ ವ್ಯವಸ್ಥೆಯ ಸುಧಾರಣೆಯ ಹೆಸರಿನಲ್ಲೂ ಖಾಸಗಿ ಬಂಡವಾಳ ಶೇಖರಣೆಯ ಹುನ್ನಾರ

ಭಾರತದಲ್ಲಿ ಒಂದು ಆರೋಗ್ಯ ಪಾಲನೆ ವ್ಯವಸ್ಥೆ ಎಂಬುದು ಇದೆ ಎಂದು ಹೇಳುವ ಧೈರ್ಯ ಈಗ ಯಾರಿಗೂ ಇಲ್ಲ. ಇಲ್ಲಿಯದ್ದು ಜಗತ್ತಿನಲ್ಲೇ ಅತಿ ಹೆಚ್ಚು ಖಾಸಗೀಕೃತ ಆರೋಗ್ಯ ವ್ಯವಸ್ಥೆ, ಸರಕಾರ ಆರೋಗ್ಯದ ಮೇಲೆ ಮಾಡುವ ಸಾರ್ವಜನಿಕ ಖರ್ಚು ದೇಶದ ಒಟ್ಟು ಉತ್ಪನ್ನದ 1ಶೇ.ದಷ್ಟು ಮಾತ್ರ, ಇದರಿಂದಾಗಿ ಪ್ರತಿ ವರ್ಷ ಆರೋಗ್ಯ ಪಾಲನೆಯ ಖರ್ಚು ಭರಿಸುವುದರಲ್ಲೇ 4 ಕೋಟಿ ಜನ ಬಡತನದ ರೇಖೆಯ ಕೆಳಗೆ ತಳ್ಳಲ್ಪಡುತ್ತಿದ್ದಾರೆ ಎಂಬುದನ್ನು ಈ ಅಂಕಣದಲ್ಲಿ ಹಿಂದೆ ನೋಡಿದ್ದೇವೆ.

ಇತ್ತೀಚೆಗೆ ಸರಕಾರ ಆರೋಗ್ಯ ವ್ಯವಸ್ಥೆಯಲ್ಲಿ ಪ್ರಮುಖ ಸುಧಾರಣೆಗಳನ್ನು ತರುವ ಆಶಯವನ್ನು ವ್ಯಕ್ತಪಡಿಸಿದೆ. ಆದರೆ ಇದರಲ್ಲೂ ಅದರ ನವ-ಉದಾರವಾದಿ ಒಲವುಗಳದ್ದೇ ಕೈ ಮೇಲಾಗುತ್ತಿದೆ. ಆರೋಗ್ಯ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬದಲು ಖಾಸಗಿ ವಲಯದ ಬಂಡವಾಳ ಶೇಖರಣೆಗೆ ಆರೋಗ್ಯ ಪಾಲನೆಯ ವ್ಯವಸ್ಥೆಯನ್ನೂ ಇನ್ನೊಂದು ಮಾಧ್ಯಮವಾಗಿ ಬಳಸುವ ಗೀಳನ್ನೇ ಅದು ತಗಲಿಸಿ ಕೊಂಡಿರುವಂತೆ ಕಾಣುತ್ತದೆ.

12ನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವ ಪ್ರಕ್ರಿಯೆಯಲ್ಲಿ 'ಸಾರ್ವತ್ರಿಕ ಆರೋಗ್ಯ ಪಾಲನೆ ಲಭ್ಯತೆ'(ಯುಎಹೆಚ್‌ಸಿ)ಗಾಗಿ ಒಂದು ಯೋಜನೆ ತಯಾರಿಸಲು ಒಂದು 'ಉನ್ನತ ಮಟ್ಟದ ಪರಿಣತರ ಗುಂಪು'(ಹೆಚ್‌ಎಲ್‌ಇಜಿ) ನೇಮಿಸಲಾಯಿತು. ಇದು ಹಲವು ಅರ್ಥಪೂರ್ಣ ಶಿಫಾರಸುಗಳನ್ನು ಮಾಡಿದೆ. ಉದಾ: ಆರೋಗ್ಯ ಕುರಿತ ಸಾರ್ವಜನಿಕ ವೆಚ್ಚದ ಪ್ರಮಾಣವನ್ನು 12 ನೇ ಯೋಜನೆಯ ಅಂತ್ಯದ ವೇಳೆಗೆ ದ್ವಿಗುಣಗೊಳಿಸಬೇಕು, ಅಂದರೆ ಈಗ ಜಿಡಿಪಿಯ 1ಶೇ.ದಷ್ಟಿರುವುದು 2.5ಶೇ.ಕ್ಕೇರಬೇಕು, 2022ರ ವೇಳೆಗೆ 3ಶೇ.ಕ್ಕೇರಬೇಕು; ಔಷಧಿ ಖರೀದಿಯ ಮೇಲೆ ಹೆಚ್ಚಿನ ಹಣ ಹಾಕಿ ಅಗತ್ಯ ಔಷಧಿಗಳು ಪುಕ್ಕಟೆಯಾಗಿ ಸಿಗುವಂತೆ ಮಾಡಬೇಕು; ಆರೋಗ್ಯಪಾಲನೆಗೆ ಹಣ ಕ್ರೋಢೀಕರಿಸಲು ಸಾಮಾನ್ಯ ತೆರಿಗೆ ಆಕರಣೆಯೇ ಮುಖ್ಯ ಮೂಲವಾಗಬೇಕು; ಆರೋಗ್ಯಪಾಲನೆ ಸೇವೆಗಳನ್ನು ಒದಗಿಸಲು ವಿಮಾ ಕಂಪನಿಗಳನ್ನು ಅಥವ ಸ್ವತಂತ್ರ ಮಧ್ಯಸ್ಥಿಕೆದಾರರನ್ನು ಅವಲಂಬಿಸಬಾರದು; ಪ್ರಾಥಮಿಕ ಆರೋಗ್ಯ ಸೇವೆಗಳಿಗೆ ಹೆಚ್ಚಿನ ಒತ್ತು ಕೊಡಬೇಕು.

ಯೋಜನಾ ಆಯೋಗ ಈ ಗುಂಪು ಕಲೆ ಹಾಕಿದ ಮಾಹಿತಿಗಳನ್ನೇ ಬಳಸಿ ಅದರ ಶಿಫಾರಸುಗಳೇ ಗಿರಕಿ ಹೊಡೆಯುವಂತೆ ಮಾಡಿದೆ. ಈಗಾಗಲೇ ಖಾಸಗಿಯವರದ್ದೇ ಆರೋಗ್ಯ ವ್ಯವಸ್ಥೆಯಲ್ಲಿ ಪ್ರಾಬಲ್ಯವಿದ್ದರೂ ಮತ್ತೆ ತನ್ನ ಪ್ರಿಯ 'ಪಿಪಿಪಿ'(ಖಾಸಗೀ-ಸಾರ್ವಜನಿಕ-ಪಾಲುದಾರಿಕೆ) ಮಾದರಿಯನ್ನು ಆರೋಗ್ಯ ಸೇವೆಗಳನ್ನು ಒದಗಿಸುವುದರಲ್ಲಿಯೂ ಬಳಸಿ ದೇಶದ ಆರೋಗ್ಯ ಪಾಲನೆ ವ್ಯವಸ್ಥೆಯಲ್ಲಿ ಖಾಸಗಿಯವರ ಪಾತ್ರ ಮಹತ್ವದ್ದು ಎಂದಿದೆ. ಒಂದೆಡೆ ಪರಿಣತರ ಶಿಫಾರಸುಗಳನ್ನು ಒಪ್ಪಿಕೊಳ್ಳುವಂತೆ ನಟಿಸುತ್ತಲೇ ಖಾಸಗಿಯವರಿಗೆ ಮಣೆ ಹಾಕುವ ತಂತ್ರವನ್ನು ದೇಶದ ಯೋಜನಾ ಆಯೋಗ ಅನುಸರಿಸುತ್ತಿದೆ.

ಸಾರ್ವಜನಿಕ ಸೇವೆಗಳ ಖಾಸಗೀಕರಣದ ಮೂಲಕ ಆದಿಮ ಬಂಡವಾಳ ಶೇಖರಣೆಗೆ ಪ್ರೋತ್ಸಾಹ ನೀಡುವುದು ನವ-ಉದಾರವಾದಿ ಅರ್ಥಶಾಸ್ತ್ರದ ಒಂದು ಪ್ರಮುಖ ಲಕ್ಷಣ. ಮೊಂಟೆಕ್ ಸಿಂಗ್ ಅಹ್ಲುವಾಲಿಯ ಅವರ ಯೋಜನಾ ಆಯೋಗ ಈ ನವ-ಉದಾರವಾದಿ ಪಥ್ಯಕ್ಕೆ ಬದ್ಧವಾಗಿರುವುದರಿಂದ, ಅದು ಅನುಸರಿಸಿರುವ ದಾರಿ ಆರೋಗ್ಯ ಪಾಲನೆ ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡುವುದಕ್ಕಲ್ಲ, ಬದಲಾಗಿ, ಖಾಸಗೀ ವಲಯಕ್ಕೆ ಬಂಡವಾಳ ಶೇಖರಣೆಗೆ ಇನ್ನೊಂದು ಮಾಧ್ಯಮವಾಗಿ ಒದಗಿಸುವುದಕ್ಕಾಗಿಯೇ ಎಂದು ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ. ಸಾರ್ವಜನಿಕ ಹಣವನ್ನು ಸಾರ್ವಜನಿಕ ಸೌಲಭ್ಯಗಳ ನಿರ್ಮಾಣಕ್ಕೆ ಬಳಸುವ ಬದಲು ಖಾಸಗೀ ವಲಯಕ್ಕೆ ಗಿರಾಕಿಗಳನ್ನು ಒದಗಿಸಲಿಕ್ಕಾಗಿ ಬಳಸುವುದು ಯೋಜನಾ ಆಯೋಗದ ಹುನ್ನಾರ, ಇದನ್ನು ಬಯಲಿಗೆಳೆಯಬೇಕಾಗಿದೆ. ನೀರು ಪೂರೈಕೆ, ವಿದ್ಯುತ್ ಪೂರೈಕೆ ಮುಂತಾದ ಸಾರ್ವಜನಿಕ ಸೇವೆಗಳಲ್ಲೂ ಇದೇ ನವ-ಉದಾರವಾದಿ ಹುನ್ನಾರ ಕೆಲಸ ಮಾಡುತ್ತಿದೆ.

★

2ಜಿ ಲೂಟಿಗೆ ಹೊಣೆ ಎ.ರಾಜ ಅಷ್ಟೇ ಅಲ್ಲ

ಇದನ್ನು 2ಜಿ ಕುರಿತ ಸುಪ್ರಿಂ ಕೋರ್ಟಿನ ತೀರ್ಪಿನ ಮರುವಿಮರ್ಶೆ ಮಾಡಬೇಕೆಂಬ ಯುಪಿಎ-2 ಸರಕಾರದ ಅರ್ಜಿ ಸಾಬೀತು ಮಾಡಿದೆ. ಅಪರೂಪದ ನೈಸರ್ಗಿಕ ಸಂಪನ್ಮೂಲಗಳನ್ನು ಹರಾಜಿನ ಮೂಲಕ ಅಥವ ಮಾರುಕಟ್ಟೆ ಮೌಲ್ಯಮಾಪನದ ಆಧಾರದಲ್ಲಿ ಮಾಡಬೇಕು ಎಂಬ ಈ ತೀರ್ಪು ಅತ್ಯಂತ ತರ್ಕಬದ್ಧವಾಗಿದ್ದು ಅದನ್ನು ಒಪ್ಪಿಕೊಳ್ಳುವ ಬದಲು ಮನಮೋಹನ ಸಿಂಗ್ ಸರಕಾರ ಅದರ ಮರುವಿಮರ್ಶೆಯ ಅರ್ಜಿ ಹಾಕಿದೆ. ಅಷ್ಟೇ ಅಲ್ಲ, ಈ ವಿಷಯವನ್ನು ರಾಷ್ಟ್ರಪತಿಗಳು ಸುಪ್ರಿಂ ಕೋರ್ಟಿನ ಅವಗಾಹನೆಗೆ ತರುವಂತೆ ಮಾಡಬೇಕೆಂದು ಅದು ಯೋಚಿಸುತ್ತಿದೆಯಂತೆ.

ತಪ್ಪು ದಾರಿ ಹಿಡಿದಿರುವವರನ್ನು ರಕ್ಷಿಸಲು ಈ ಯುಪಿಎ-2 ಸರಕಾರ ಹೇಗೆ ಕಟಿಬದ್ಧವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ತಮ್ಮ ಮರ್ಜಿಗನುಸಾರವಾಗಿ ವರ್ತಿಸುವ ಹಕ್ಕು ಕಾರ್ಯಾಂಗಕ್ಕಿರಬೇಕು, ನ್ಯಾಯಾಂಗ ಈ ವಿಷಯದಲ್ಲಿ ಅತಿಕ್ರಮಿಸಬಾರದು ಎಂಬುದೀಗ ಸರಕಾರದ ಆಶಯ.

'ಮೊದಲು ಬಂದವರಿಗೆ ಮೊದಲ ಸೇವೆ' ಎಂಬ ತನ್ನ ದಾರಿಯನ್ನು ಸಮರ್ಥಿಸಿಕೊಳ್ಳುವ ಅದರ ಪ್ರಯತ್ನ, 2ಜಿ ಲೂಟಿಗೆ ಮಾಜಿ ದೂರಸಂಪರ್ಕ ಮಂತ್ರಿಗಳಷ್ಟೇ ಅಲ್ಲ, ಯುಪಿಎ-2 ಹಣಕಾಸು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳೂ ಹೊಣೆ ಎಂಬುದನ್ನು ತೋರಿಸಿದೆಯೆಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಹೇಳಿದೆ.

ಈ ನಡುವೆ, ಈ ವಾರ ಪ್ರಕಟಿಸಿದ ಭಾರತದ 2011 ಜನಗಣತಿಯ ಅಂಕಿ-ಅಂಶಗಳ ಪ್ರಕಾರ 63.2 ಶೇಕಡಾ ಕುಟುಂಬಗಳ ಬಳಿ ಈಗ ದೂರವಾಣಿ ಸಂಪರ್ಕ ಇದೆ, 53.2ಶೇ. ಮೊಬೈಲ್ ಫೋನುಗಳನ್ನು ಹೊಂದಿದ್ದಾರೆ. ಇದು ತಮ್ಮ 2ಜಿ ತರಂಗಾಂತರ ಹಂಚಿಕೆಯ ನೀತಿಯನ್ನು ಸಮರ್ಥಿಸುತ್ತದೆ ಎಂದೇನೂ ಇದುವರೆಗೆ ಹಾಲಿ ಯುಪಿಎ-2 (2ಜಿ ಹಂಚಿಕೆಯಲ್ಲಿ ಹಗರಣವೇ ಇಲ್ಲ ಎಂದು ಸುಪ್ರಿಂ ಕೋರ್ಟ್ ತೀರ್ಪಿನ ಮೊದಲು ಸಾರುತ್ತಿದ್ದ) ದೂರಸಂಪರ್ಕ ಮಂತ್ರಿಯಾಗಲೀ, ಮಾಜಿ ಮಂತ್ರಿಯಾಗಲೀ, ಬೇರೆ ಯಾವುದೇ ವಕ್ತಾರರಾಗಲಿ ಹೇಳಿಲ್ಲ. ಆದರೆ ಯೋಜನಾ ಆಯೋಗ ಬಡತನದ ರೇಖೆ ಕುರಿತು ಸುಪ್ರಿಂ ಕೋರ್ಟ್ ಎದುರು ಸಲ್ಲಿಸಿದಂತೆ, ಈ ಅಂಕಿ-ಅಂಶವನ್ನು ತಮ್ಮ ಸಮರ್ಥನೆಗೆ ಯುಪಿಎ-2 ಮಂದಿ ಸಲ್ಲಿಸಿದರೂ ಆಶ್ಚರ್ಯ

ಪುಟ 15ಕ್ಕೆ



ವೇದರಾಜ ಎನ್.ಕೆ.

ರಾಜ್ಯದ ಬರ, ಬರಡುತನ ನಿವಾರಣೆಗೆ ಶಾಶ್ವತ ಪರಿಹಾರ

......ಪುಟ 9 ರಿಂದ

ಕಂಡುಕೊಳ್ಳದಿದ್ದಲ್ಲಿ ಇಡೀ ಬಯಲುಸೀಮೆ ಪ್ರದೇಶದ ಜನಾಂಗವೇ ರೋಗಪೀಡಿತವಾಗುವ ಸಂಭವವುಂಟು.

ಪರಿಹಾರದ ಸೂಚನೆಗಳು

ಮಧ್ಯ ಕರ್ನಾಟಕದ 8 ಜಿಲ್ಲೆಗಳಲ್ಲಿನ ಕೃಷಿ ಮತ್ತು ಶುದ್ಧ ಕುಡಿಯುವ ನೀರಿಗೆ ಇರುವ ಮಾರ್ಗಗಳು, ಮತ್ತು ಪರಿಹಾರಗಳ ಬಗ್ಗೆ ಹಲವಾರು ಸೂಚನೆಗಳು ಮತ್ತು ಸಲಹೆಗಳು ಕೇಳಿಬರುತ್ತಿವೆ. ಇವುಗಳ ಸಾಧ್ಯಾ ಸಾಧ್ಯತೆಗಳನ್ನು ನಾವು ಪರಿಶೀಲಿಸಬೇಕಾಗಿದೆ.

ಪರಮಶಿವಯ್ಯ ವರದಿ

ಕರ್ನಾಟಕ ನಿವೃತ್ತ ಇಂಜಿನಿಯರ್ ಮತ್ತು ನೀರಾವರಿ ತಜ್ಞ ಡಾ.ಪರಮಶಿವಯ್ಯ ಸಮಿತಿ ವರದಿಯ ಪ್ರಕಾರ ಮಳೆ ಬಂದಾಗ ಪಶ್ಚಿಮ ಘಟ್ಟಗಳಲ್ಲಿ ಬಿದ್ದ ನೀರು ನೇತ್ರಾವತಿ ಮತ್ತು ಇತರ ನದಿಗಳ ಮೂಲಕ ಅರಬ್ಬಿ ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುವ 1998.83 ಟಿಎಂಸಿ ನೀರಿನಲ್ಲಿ 168.46 ಟಿಎಂಸಿ ನೀರನ್ನು ಗಾರ್ಲ್ಯಾಂಡ್ ಕೆನಾಲ್‌ಗಳ ಮೂಲಕ ಪೂರ್ವಕ್ಕೆ ಹರಿಸಿದರೆ ನಿರಂತರ ಬರಗಾಲಕ್ಕೆ ತುತ್ತಾಗುತ್ತಿರುವ ಮಧ್ಯ ಕರ್ನಾಟಕದ 8 ಜಿಲ್ಲೆಗಳಿಗೆ ಮತ್ತು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸಹ ಒದಗಿಸಬಹುದು, ಆ ಜಿಲ್ಲೆಗಳು ಯಾವುವೆಂದರೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕುಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಹೆಚ್ಚಿಸುವುದರೊಂದಿಗೆ ಆ ನೀರನ್ನು ಕೃಷಿಗೂ ಉಪಯೋಗಿಸಬಹುದಾಗಿದೆ.

ಈ ವರದಿಯಲ್ಲಿ ಡಾ.ಪರಮಶಿವಯ್ಯನವರು ಕೃಷ್ಣಾ ಕಣಿವೆಯ ಭದ್ರಾ ಮೇಲ್ದಂಡೆಯಿಂದ ಲಭ್ಯವಿರುವ 76.39 ಟಿಎಂಸಿ ನೀರನ್ನು, ನೇತ್ರಾವತಿ ಗಾರ್ಲ್ಯಾಂಡ್ ಕೆನಾಲ್‌ಗಳ ಮೂಲಕ ದೊರೆಯುವ 168.46 ಟಿಎಂಸಿ ನೀರಿಗೆ ಸೇರಿಸಿ 2 ಭಾಗಗಳಾಗಿ ಮಾಡಿ, ಅಂದರೆ ಪೂರ್ವ ಮತ್ತು ಉತ್ತರಪೂರ್ವ ಭಾಗಗಳಿಂದ ಬರಪೀಡಿತ ಜಿಲ್ಲೆಗಳಿಗೆ ಹರಿಸುವ ಯೋಜನೆಗಳನ್ನು ಕೊಟ್ಟಿದ್ದಾರೆ. (ಈ ಕುರಿತ ಇನ್ನು ಕೆಲವು ವಿವರಗಳಿಗಾಗಿ ಜನಶಕ್ತಿಯ ಕಳೆದ ವಾರದ ಸಂಚಿಕೆಯನ್ನು ಗಮನಿಸಿ. ಇನ್ನೂ ಹೆಚ್ಚಿನ ವಿವರಗಳಿಗೆ ಇದೀಗ ಪ್ರಕಟಗೊಂಡಿರುವ ಕಿರುಹೊತ್ತಿಗೆ ಓದಿ)

ಕೃಷ್ಣಾ ಕಣಿವೆಯಲ್ಲಿನ ನೀರಿನಲ್ಲಿ ಪಾಲು

ಸಾಮಾನ್ಯವಾಗಿ, ಮೇಲೆ ಹೇಳಲಾದ ಜಿಲ್ಲೆಗಳು ಕೃಷ್ಣ ಕಣಿವೆಗೆ ಸೇರುವುದರಿಂದ ಅಲ್ಲಿನ ನೀರನ್ನು ಪಡೆಯಲು ಈ ಜಿಲ್ಲೆಗಳು ಅರ್ಹವಾಗಿವೆ. 1976ರಲ್ಲಿ ಬಚಾವತ್ ತೀರ್ಪಿನಿಂದ ದೊರೆತ ಕರ್ನಾಟಕದ ಪಾಲು 734 ಟಿಎಂಸಿ ಇದ್ದು ಇದರಲ್ಲಿ ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗೆ 93 ಟಿಎಂಸಿ, ಉಳಿದ 636 ಟಿಎಂಸಿ ನೀರು ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೋಗಿದೆ. ಇನ್ನು ಉಳಿದ 5 ಟಿಎಂಸಿ ನೀರನ್ನು ಚೆನ್ನೈ ನಗರಕ್ಕೆ ಕುಡಿಯುವ ನೀರಿಗಾಗಿ ಕೊಡಲಾಗಿದೆ. ಆದರೆ ಕೃಷ್ಣಾ ಕಣಿವೆಯಲ್ಲಿ ಲಭ್ಯವಿರುವ ಒಟ್ಟು ನೀರಿನಲ್ಲಿ ರಾಜ್ಯ ದಕ್ಷಿಣ ಜಿಲ್ಲೆಗಳು ನೀಡುತ್ತಿರುವ ಕೊಡುಗೆ 500 ಟಿಎಂಸಿ. ಆದರೆ ದಕ್ಷಿಣದ ಜಿಲ್ಲೆಗಳಿಗೆ ಸಿಕ್ಕುತ್ತಿರುವುದು 93 ಟಿಎಂಸಿ ಮಾತ್ರ. ಅದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಷ್ಟೇ ಹಿಂದುಳಿದ ಮತ್ತು ಬರಗಾಲಕ್ಕೆ ತುತ್ತಾಗಿರುವ ಈ ಜಿಲ್ಲೆಗಳಿಗೆ ನೀರಿಲ್ಲ. ಈಗಲಾದರೂ ಈ ಎಲ್ಲಾ 8 ಜಿಲ್ಲೆಗಳಿಗೆ ಕೃಷ್ಣಾ ಕಣಿವೆ ನೀರು ಸಿಗಬೇಕಿದೆ. ಕೃಷ್ಣಾ ಕಣಿವೆಯಿಂದ 76.39 ಟಿಎಂಸಿ, ಪಶ್ಚಿಮ ಘಟ್ಟಗಳಿಂದ 168.46 ಟಿಎಂಸಿ ಒಟ್ಟು 244.85 ಟಿಎಂಸಿ ನೀರು 7 ಜಿಲ್ಲೆಗಳಿಗೆ ಹಾಯಿಸಲು ಸಾಧ್ಯವಿದೆ. ಈ ಯೋಜನೆ ಜಾರಿಗೆ ಬಂದರೆ ಚಿಕ್ಕಬಳ್ಳಾಪುರ,ಕೋಲಾರಗಳಂತಹ ನೀರಿನ ತೀವ್ರ ಕೊರತೆ ಎದುರಿಸುತ್ತಿರುವ ಜಿಲ್ಲೆಗಳು ಕನಿಷ್ಠ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಈ ಯೋಜನೆ ಜಾರಿಯಾಗಬೇಕಾದರೆ ಕನಿಷ್ಠ 25 ಸಾವಿರ ಕೋಟಿ ರೂ.ಗಳು ಬೇಕಾಗುತ್ತದೆ. ಕರ್ನಾಟಕದಂತಹ ಸಂಪನ್ಮೂಲ ಭರಿತವಾದ ಒಂದು ರಾಜ್ಯ ಸರ್ಕಾರಕ್ಕೆ ಇದು ಅಸಾಧ್ಯ ಎನ್ನುವ ದೊಡ್ಡ ಮೊತ್ತವೇನು ಅಲ್ಲ. ಆದರೆ ಇದಕ್ಕೆ ಬಲಿಷ್ಠ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ.



> **ಮಾರ್ಚ್ 22,**
> **ವಿಶ್ವ ಜಲ ದಿನಾಚರಣೆ**
>
> ವಿಶ್ವದಲ್ಲಿ ಹೆಚ್ಚುತ್ತಿರುವ ನೀರಿನ ಅಭಾವ, ನೀರಿನ ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳ ಲಾಭಕೋರತನ, ಸರ್ಕಾರಗಳ ಬೇಜವಾಬ್ದಾರಿತನ ಮುಂತಾದ ವಿಷಯಗಳ ಬಗ್ಗೆ ಜನಜಾಗೃತಿ ಉಂಟು ಮಾಡುವ ಮತ್ತು ಸರ್ಕಾರದ ಮೇಲೆ ಒತ್ತಡ ತರುವ ಉದ್ದೇಶದಿಂದ ವಿಶ್ವ ಜಲ ದಿನಾಚರಣೆಯ ಅಂಗವಾಗಿ ಮಾರ್ಚ್ 22ರಂದು ಪಕ್ಷದ ಜಿಲ್ಲಾ/ತಾಲ್ಲೂಕು ಸಮಿತಿಗಳು ಧರಣಿ/ಮತ ಪ್ರದರ್ಶನ ನಡೆಸಬೇಕೆಂದು ಸಿಪಿಐ(ಎಂ) ರಾಜ್ಯಸಮಿತಿ ತೀರ್ಮಾನಿಸಿದೆ. ಅಂದು ಶಾಶ್ವತ ನೀರಾವರಿಗೆ ಸಂಬಂಧಪಟ್ಟ ಜಿಲ್ಲೆಗಳಲ್ಲಿ ಹೋರಾಟಕ್ಕೆ ಸಾಂಕೇತಿಕ ಚಾಲನೆ ನೀಡಲಾಗುವುದು.

ಪಶ್ಚಿಮ ಘಟ್ಟಗಳಲ್ಲಿ ಬೀಳುವ ಮಳೆ ನೀರನ್ನು ಪೂರ್ವಾಭಿಮುಖವಾಗಿ ಹರಿಸುವ ಯೋಜನೆ

ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ದಕ್ಷಿಣ ಭಾಗದ ತುಮಕೂರು, ಕೋಲಾರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಮುಂತಾದ ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಹಾಗೂ ಅಂತರ್ಜಲ ಅಭಿವೃದ್ಧಿ ಬಗ್ಗೆ ಅಧ್ಯಯನ ನಡೆಸಲು ಸಮಿತಿಯನ್ನು ಸರ್ಕಾರವು 26-08-2000 ರಲ್ಲಿ ರಚಿಸಿತ್ತು. ಈ ಸಮಿತಿಯು 23-3-2001 ರಂದು ಪಶ್ಚಿಮಾಭಿಮುಖವಾಗಿ ಹರಿಯುವ ನೇತ್ರಾವತಿ ನದಿಯಿಂದ ಗುರುತ್ವಾಕರ್ಷಣೆಯ ಮೂಲಕ 142 ಟಿಎಂಸಿ ನೀರನ್ನು ಮಾರ್ಗಾಂತರಿಸಿ, ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ಉಪಯೋಗಿಸುವ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು.

ಈ ಮೇಲ್ಕಂಡ ಯೋಜನೆಯನ್ನು ಪರಮಶಿವಯ್ಯನವರು ಹಲವಾರು ಬಾರಿ ಮಾರ್ಪಾಡು ಮಾಡಿ ಅಂತಿಮವಾಗಿ 10-09-2004 ರಂದು ಸರ್ಕಾರಕ್ಕೆ ಮಾಸ್ಟರ್ ಪ್ಲಾನ್ ವರದಿಯನ್ನು ಸಲ್ಲಿಸಿರುತ್ತಾರೆ. ಮೊದಲನೆಯ ಭಾಗವು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ತಿರುವು ಯೋಜನೆಗಳ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಅಂತರ್ಜಲ ಅಭಿವೃದ್ಧಿ ಮತ್ತು ಕುಡಿಯುವ ನೀರು ಒದಗಿಸಲು ಪ್ರಾಥಮಿಕ ಸಾಧ್ಯತಾ ವರದಿಯನ್ನು ಒಳಗೊಂಡಿರುತ್ತದೆ. ಎರಡನೆಯ ಭಾಗವು ಕರ್ನಾಟಕ ರಾಜ್ಯದಲ್ಲಿ ನೀರಾವರಿ ಸೌಲಭ್ಯದ ಅಭಿವೃದ್ಧಿಗಾಗಿ ನೀರನ್ನು ಒದಗಿಸುವ ವರದಿಯನ್ನು ಒಳಗೊಂಡಿರುತ್ತದೆ. ಸದರಿ ಮಾಸ್ಟರ್ ಪ್ಲಾನ್‌ನಲ್ಲಿ ಪರಮಶಿವಯ್ಯನವರು, 7 ಯೋಜನೆಗಳನ್ನು ಪ್ರಸ್ತಾಪಿಸಿರುತ್ತಾರೆ. (ವಿವರಗಳು ಕಿರು ಹೊತ್ತಿಗೆಯಲ್ಲಿ)

ಕರ್ನಾಟಕ ನೀರಾವರಿ ನಿಗಮ ನಿಯಮಿತ (ಎ.ಓ.ಓ.ಐ) ಪ್ರಸ್ತಾವನೆ:

ಎತ್ತಿನಹೊಳೆ ಯೋಜನೆ ಪ್ರಮುಖ ಅಂಶಗಳು

- ಎತ್ತಿನಹೊಳೆ ಹಾಗೂ ಇನ್ನಿತರ ಉಪನದಿಗಳಿಂದ ನೀರನ್ನು ಎತ್ತಿ ಕೊಳವೆಗಳ ಮೂಲಕ ಪಶ್ಚಿಮ ಘಟ್ಟವನ್ನು ದಾಟಿಸುವುದು.
- ತದನಂತರ ಕಾಲುವೆಯ ಮುಖಾಂತರ ತುಮಕೂರಿನ ಹತ್ತಿರ ನಿರ್ಮಿಸಲು ಯೋಜಿಸಲಾದ ಜಲಾಶಯದವರೆಗೆ ನೀರನ್ನು ತರುವುದು.
- ಈ ಜಲಾಶಯದಿಂದ ನೀರನ್ನು ಎತ್ತಿ ಕೊಳವೆಗಳ ಮುಖಾಂತರ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳಿಗೆ ನೀರು ಒದಗಿಸುವುದು. ಹಾಗೆಯೇ, ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕೆರೆಗಳಿಗೂ ಕೂಡ ನೀರನ್ನು ಒದಗಿಸಲು ಯೋಜಿಸಲಾಗಿದೆ.
- ಈ ಯೋಜನೆಯಡಿಯಲ್ಲಿ 24 ಟಿ.ಎಂ.ಸಿ ನೀರು ಲಭ್ಯವಾಗುತ್ತದೆ ಮತ್ತು ಈ ಜಿಲ್ಲೆಗಳ ಎಲ್ಲಾ ಕೆರೆಗಳನ್ನು ತುಂಬಿಸಲು ಸಾಧ್ಯವಾಗುತ್ತದೆ.

ಎತ್ತಿನಹೊಳೆ ಯೋಜನೆಯ ವಿವರಗಳು

- ಪಶ್ಚಿಮಘಟದ ಮೇಲ್ಭಾಗದಲ್ಲಿನ ಎತ್ತಿನಹೊಳೆ, ಕಾಡುಮನೆಹೊಳೆ, ಕೆರೆಹೊಳೆ ಮತ್ತು ಹೊಂಗದಹಳ್ಳಿಗಳ ಪ್ರವಾಹದ ನೀರನ್ನು ಸಣ್ಣ ಸಣ್ಣ ಬ್ಯಾರೇಜುಗಳನ್ನು ನಿರ್ಮಿಸಿ, ಅಲ್ಲಿಂದ ನೀರನ್ನು ಎತ್ತಿ ಪೂರ್ವಭಾಗದ ಕೋಲಾರ, ಚಿಕ್ಕಬಳ್ಳಾಪುರ, ಚಿಕ್ಕಮಂಗಳೂರು, ಹಾಸನ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಗಳಿಗೆ ಪೂರೈಸುವುದು.
- ಸಕಲೇಶಪುರದ ಹತ್ತಿರ ಪಶ್ಚಿಮಘಟದಲ್ಲಿ ಹುಟ್ಟಿ ಹರಿಯುವ ಎತ್ತಿನಹೊಳೆ ಮತ್ತು ಅದರ ಉಪನದಿಗಳು ಮತ್ತು ಇತರ ಹಳ್ಳಗಳಿಂದ ಲಭ್ಯವಿರುವ ನೀರನ್ನು ಅತ್ಯಂತ ಸರಿಯಾದ ಮೂಲವೆಂದು ಗುರುತಿಸಿದ್ದು, ಅದರ ವಿವರಗಳು ಕೆಳಗಿನಂತಿವೆ:-

ಹಂತ - 1	ಹಂತ 2
ಎತ್ತಿನಹೊಳೆ	ಎತ್ತಿನಹೊಳೆ ಕೆಳಭಾಗ
ಎತ್ತಿನಹೊಳೆಗೆ ಉಪನದಿ-1	ಕೇರಿಹೊಳೆ
ಎತ್ತಿನಹೊಳೆಗೆ ಉಪನದಿ-2	ಹೊಂಗದಹಳ್ಳ
ಕಾಡುಮನೆಹೊಳೆ-2	
ಕಾಡುಮನೆಹೊಳೆ-3	

- ಈ ನದಿ / ಹಳ್ಳಗಳಿಗೆ ಅಡ್ಡಲಾಗಿ ನೀರನ್ನು ತಿರುವುಗೊಳಿಸಲು ಇವುಗಳ ದಂಡೆಗಳ ವ್ಯಾಪ್ತಿಯ ಮಟ್ಟದಲ್ಲಿಯೇ ಮುಂಗಾರು ಮಳೆಯ ಅವಧಿಯಲ್ಲಿ ಪ್ರವಾಹದ ನೀರನ್ನು ಹಿಡಿದಿಡಲು ಅನುಕೂಲವಾಗುವಂತೆ ಸಣ್ಣ ಸಣ್ಣ ಬ್ಯಾರೇಜುಗಳನ್ನು ನಿರ್ಮಿಸಿ, ಈ ದಂಡೆಗಳಿಂದ ಸೂಕ್ತ ಸ್ಥಾವರಗಳ ಮುಖಾಂತರ ನೀರನ್ನು ಎತ್ತುವುದು.
- ಈ ಬ್ಯಾರೇಜುಗಳಿಂದ ನೀರನ್ನು ಪಂಪ್ ಮಾಡಿ ಪ್ರಸ್ತುತ ಅಸ್ಥಿತ್ವದಲ್ಲಿರುವ ಸಂಪರ್ಕ ಮಾರ್ಗಗಳ ಪಕ್ಕದಲ್ಲಿಯೇ ಸಮಾನಾಂತರವಾಗಿ ಭೂಮಿಯೊಳಗೆ ಹೂತು ಹಾಕಲಾಗುವ ಪೈಪುಗಳ ಮುಖಾಂತರ ಸಕಲೇಶಪುರದ ಹತ್ತಿರ ಹರವನಹಳ್ಳಿ ಬಳಿಯ ವಿತರಣಾ ತೊಟ್ಟಿಗೆ ನೀರನ್ನು ಪೂರೈಸುವುದು.
- ಇಲ್ಲಿಂದ ಕಾವೇರಿ ಮತ್ತು ಕೃಷ್ಣಾ ಕಣಿವೆಯನ್ನು ಬೇರ್ಪಡಿಸುವ ಎತ್ತರ ಪ್ರದೇಶದ ಗುಂಟ ಸುಮಾರು 233 ಕಿ.ಮೀ ಉದ್ದದ ಗುರುತ್ವ ಕಾಲುವೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಕಾಲುವೆಯ ಅಂತ್ಯ ಭಾಗದಲ್ಲಿ ಪುನಃ ನೀರನ್ನು ಎತ್ತಿ 8.1 ಕಿ.ಮೀ ಉದ್ದದ ರೈಸಿಂಗ್ ಮೇನ್ ಮುಖಾಂತರ ದೇವರಾಯನದುರ್ಗದ ಬಳಿ ನಿರ್ಮಿಸಲು ಉದ್ದೇಶಿಸಿರುವ 10 ಟಿ.ಎಂ.ಸಿ ಸಾಮರ್ಥ್ಯದ ಸಂಗ್ರಹಣಾ ಜಲಾಶಯಕ್ಕೆ ಪೂರೈಸುವುದು. ಈ ಸಂಗ್ರಹಣಾ ಜಲಾಶಯದಿಂದ ನೀರನ್ನು ಎತ್ತಿ 88.2 ಕಿ.ಮೀ ಉದ್ದದ ರೈಸಿಂಗ್ ಮೇನ್ ಮುಖಾಂತರ ಚಿಕ್ಕಬಳ್ಳಾಪುರ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳನ್ನು

-ಪುಟ 15ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ತುಂಬಿಸಲು ಹಾಗೂ 55.5 ಕಿ.ಮೀ ಉದ್ದದ ರೈಸಿಂಗ್ ಮೈನ್ ಮುಖಾಂತರ ಕೋಲಾರ ಜಿಲ್ಲೆಯ ಸಣ್ಣ ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ.

ನ ಹೊಳೆ ಯೋಜನೆ ನಕಾರಾತ್ಮಕ ಅಂಶಗಳು:-

ಈ ಯೋಜನೆಯ ಮೂಲಕ 24 ಟಿ.ಎಂ.ಸಿ. ನೀರು ಪೂರೈಸುವ ಪ್ರಸ್ತಾಪನ್ನು ಸಮರ್ಪಕವಾಗಿ ವಿವರಿಸಲು ಸಾಧ್ಯವಾಗಿಲ್ಲ. ಬದಲಿಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತ 3 ಭಾರಿ ಸಮೀಕ್ಷೆ ನಡೆಸಿ ಮೂರು ವಿಧದ ಅಂಕಿ ಅಂಶಗಳ ವರದಿ ನೀಡಿದೆ (8.20 ಟಿ.ಎಂ.ಸಿ 10 ಟಿ.ಎಂ.ಸಿ 24 ಟಿ.ಎಂ.ಸಿ) ಆದ್ದರಿಂದ ಯೋಜನೆಯ ಒಟ್ಟು ನೀರಿನ ಸಂಪನ್ಮೂಲದ ಬಗ್ಗೆ ಸ್ಪಷ್ಟತೆ ಇಲ್ಲ.

24 ಟಿ.ಎಂ.ಸಿ. ನೀರನ್ನು ಟ್ಯೂನಲ್‌ಗಳ ಮೂಲಕ ಹರಿಸಬೇಕು ಮತ್ತು ರೈಸಿಂಗ್ ಮೇನ್ ಮುಖಾಂತರ ಹರಿಸಬೇಕು ಎಂದು ಹೇಳಿದೆ. ಹಾಗಾದರೆ 24 ಟಿ.ಎಂ.ಸಿ ನೀರನ್ನು ಲಿಫ್ಟ್ ಮಾಡಲು ಅವಶ್ಯಕತೆ ಇರುವ ವಿದ್ಯುತ್‌ಚ್ಛಕ್ತಿ ಬಗ್ಗೆ ವಿವರಣೆ ಇಲ್ಲ.

ಇದರ ಹಿಂದಿನ ವರದಿ ಪ್ರಕಾರ 10 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡಲು 250 ಮೆ.ವ್ಯಾ.ವಿದ್ಯುತ್‌ಚ್ಛಕ್ತಿ ಬೇಕಾಗುತ್ತದೆ ಎಂದು ಹೇಳಿದೆ. ಹಾಗಾದರೆ 24 ಟಿ.ಎಂ.ಸಿ ನೀರನ್ನು ಹರಿಸಲು ಸುಮಾರು 600 ಮೆ..ವ್ಯಾ. ಅವಶ್ಯಕತೆ ಇದೆ. ಆದರೆ ಈ ಯೋಜನೆಯಲ್ಲಿ ಇಷ್ಟು ವಿದ್ಯುತ್ ಪೂರೈಸುವ ವಿಧಾನಗಳನ್ನು ಸ್ಪಷ್ಟ ಪಡಿಸಿಲ್ಲ.

3) ಎತ್ತಿನ ಹೊಳೆ ಯೋಜನೆ ವರದಿಯಂತೆ 4 ಜಿಲ್ಲೆಗಳ ಕೆರೆಗಳಿಗೆ ನೀರು ಹರಿಸುವುದು ಎಂದು ಹೇಳಿದೆ. ಈ ನಾಲ್ಕು ಜಿಲ್ಲೆಗಳಾದ ತುಮಕೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಟ್ಟು 4879 ಸಣ್ಣ ನೀರಾವರಿ ಕರೆಗಳಿವೆ. ಇವುಗಳ ಶೇಖರಣ ಸಾಮರ್ಥ್ಯ 94.93 ಟಿ.ಎಂ.ಸಿ ನೀರು ಆಗಿದೆ.

ಇದೇ ಜಿಲ್ಲೆಗಳಲ್ಲಿ 1106 ಹಳ್ಳಿಗಳಿಗೆ ಕೆರೆಗಳು ಇಲ್ಲ. ಇಲ್ಲಿ ಗೋಕಟ್ಟೆಗಳ ಮೂಲಕ 4 ಟಿ.ಎಂ.ಸಿ ನೀರನ್ನು ಸಂಗ್ರಹಿಸಬೇಕಾಗಿದೆ. ಈ ಬಗ್ಗೆ ಯಾವುದೇ ಮಾಹಿತಿ ಈ ಯೋಜನೆಯಲ್ಲಿ ಇಲ್ಲ.

4) ಎತ್ತಿನ ಹೊಳೆ ಯೋಜನೆ ಮೂಲಕ ಈ ನಾಲ್ಕು ಜಿಲ್ಲೆಗಳಿಗೆ ತಾಲ್ಲೂಕುವಾರು ನೀರು ಹಂಚಿಕೆ ಬಗ್ಗೆ ಮಾಹಿತಿ ಇಲ್ಲ.

5) ಸಕಲೇಶಪುದಿಂದ ನೀರನ್ನು ಕೊಳವೆಗಳ ಮೂಲಕ ಹರಿಸುವಾಗ ಇತರೆ ತಾಲ್ಲೂಕುಗಳಲ್ಲಿ ಹಾದು ಹೋಗುವಾಗ ಅಲ್ಲಿ ನೀರಿನ ಅಭಾವ ಎದುರಿಸುವ ಜನ ಸುಮ್ಮನೆ ಇರುತ್ತಾರೆಯೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

ಇನ್ನೂ ಹಲವು ವಿವರಣೆಗಳು ಈ ಯೋಜನೆಯಲ್ಲಿ ಸ್ಪಷ್ಟವಾಗಿಲ್ಲ. ಆದ್ದರಿಂದ ಈ ಯೋಜನೆ ಜನರ ನೀರಿನ ದಾಹ ನಿವಾರಿಸಲು ಸಾಧ್ಯವಿಲ್ಲ .

●

………. 75ನೇ ವಾರ್ಷಿಕೋತ್ಸವ

ಪುಟ 6 ರಿಂದ

ಸಿಕ್ಕಾಪಟ್ಟೆ ಹೆಚ್ಚಾಗಿದೆ. ವಿದೇಶೀ ಸಂಸ್ಥೆಗಳು ದೇಶೀಯ ತಳಿಗಳನ್ನು ಪೇಟೆಂಟ್ ಮಾಡಿಕೊಂಡಿವೆ. ದುಡಿಯಬೇಕಾದವರಲ್ಲಿ ಭೂಮಿ ಇಲ್ಲ; ದುಡಿಯುವ ಅವಶ್ಯಕತೆ ಇಲ್ಲದವರಲ್ಲಿ ಭೂಮಿ ಇದೆ.

ಹಳ್ಳಿಗಳು ಬಡ್ಡಿ ವ್ಯವಹಾರಗಾರರು, ಜಮಾನ್ದಾರರು, ಕಾಂಟ್ರಾಕ್ಟರುಗಳು ಹಾಗೂ ಗೂಂಡಾಗಳೂ ಎಂಬ 4 ವಿಭಾಗದ ಜನರ ಅಧೀನ ಇವೆ; ಈ ಶಕ್ತಿಗಳ ವಿರುದ್ಧ ರೈತರು ಹೋರಾಡ ಬೇಕಾಗಿದೆ. ಪ್ರತಿಯೊಂದು ಕುಟುಂಬವೂ ಮನೆ ನಿವೇಶನಕ್ಕಾಗಿ ಹೋರಾಟಕ್ಕೆ ಜತೆಗೂಡಿದೆ. ಈ ಹೋರಾಟದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜೊತೆಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವೂ ಇದೆ.



ಸಭೆಯನ್ನುದ್ದೇಶಿಸಿ ಕೆ.ಆರ್. ಶ್ರೀಯಾನ್ ಮಾತನಾಡುತ್ತಿ ರುವುದು. ವೇದಿಕೆಯಲ್ಲಿ ಮಾನ್ಪಡೆ, ಯಾದವ ಶೆಟ್ಟಿ, ಶಿವಕುಮಾರ್

ರೈತರು ಹೋರಾಟ ಮಾಡದೆ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ. ಇವರ ಜೊತೆ ಕೃಷಿಕೂಲಿಕಾರರೂ, ಉದ್ದಿಮೆ ಕಾರ್ಮಿಕರೂ ಜತೆಗೂಡಬೇಕಾಗಿದೆ. ರೈತನಿಗೆ ಕೃಷಿ ಭೂಮಿ, ಕಡಿಮೆ ಬಡ್ಡಿಯ ಸಾಲ ಹಾಗೂ ಪೌಷ್ಟಿಕ ಆಹಾರದ ಲಭ್ಯತೆಗಾಗಿ ಹೋರಾಟ ಸಾಗಿದೆ ಎಂದು ಮಾರುತಿ ಮಾನ್ಪಡೆ ವಿವರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಹಿರಿಯ ರೈತ ಮುಖಂಡ ಕೆ.ಆರ್.ಶ್ರೀಯಾನ್ ಮಾತನಾಡಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ 75 ವರ್ಷಗಳ ರೈತ ಹೋರಾಟದ ಚರಿತ್ರೆಯಿದ್ದು, ಅದರಲ್ಲೂ ಹೋರಾಟಗಾರರಿಗೆ ಸ್ಫೂರ್ತಿ ನೀಡುವ ಹಲವಾರು ಘಟನೆಗಳಿವೆ ಎಂದು ವಿವರಿಸಿದರು. ಭೂಮಾಲಕ ಪದ್ಧತಿ ರದ್ದಾಗಬೇಕು, ಗೇಣಿದಾರ ರೈತರಿಗೆ ಭೂಮಿ ಲಭಿಸಬೇಕು ಎಂಬುದು 60-70ರ ದಶಕದ ರೈತ ಹೋರಾಟದ ಬೇಡಿಕೆಯಾಗಿತ್ತು. ಈ ಹೋರಾಟದ ಪರಿಣಾಮವಾಗಿ 'ಉಳುವವನೆ ಹೊಲದೊಡೆಯ' ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕಾಯ್ತು. ಈ ಭೂಸುಧಾರಣಾ ಶಾಸನ ಬಂದುದರಿಂದ ದ.ಕ.ಜಿಲ್ಲೆಯಲ್ಲಿ ಚಾಲಗೇಣಿ ರೈತರಿಗೆ ಭೂಮಿ ಸಿಗುವಂತಾಯಿತು ಎಂದು ಹೋರಾಟದ ಚರಿತ್ರೆಯನ್ನು ಕೆ.ಆರ್.ಶ್ರೀಯಾನ್ ವಿವರಿಸಿದರು.

ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಸ್ವಾಗತಿಸಿದರು. ಉಪಾಧ್ಯಕ್ಷ ವಾಸುದೇವ ಉಚ್ಚಿಲ ಧನ್ಯವಾದವಿತ್ತರು.

★

ಮಂಗಳೂರಿನಲ್ಲಿ ಎಸ್‌ಎಫ್‌ಐ ವಿದ್ಯಾರ್ಥಿನಿಯರ ಸಮಾವೇಶ:

ಮಂಗಳೂರು 'ವಿಕಾಸ' ಕೊಠಡಿಯಲ್ಲಿ ನಡೆದ ಎಸ್‌ಎಫ್‌ಐ ವಿದ್ಯಾರ್ಥಿನಿಯರ ಸಮಾವೇಶದಲ್ಲಿ ಎಸ್‌ಎಫ್‌ಐ ರಾಜ್ಯ ಸಮಿತಿ ನಾಯಕಿ ದಿವ್ಯಾ ಹಾಸನ ಅತಿಥಿಯಾಗಿ ಭಾಗವಹಿಸಿದರು. ದಿವ್ಯಾ ಬೋಳಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಐ ರಾಜ್ಯ ಸಮಿತಿ ಜೊತೆ ಕಾರ್ಯದರ್ಶಿ ಜೀವನ್‌ರಾಜ್ ಕುತ್ತಾರ್, ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್ ಅತಿಥಿಗಳಾಗಿ ಭಾಗವಹಿಸಿದ್ದರು.

ಯುಪಿಎ ದರ್ಬಾರ್

ಪುಟ 13 ರಿಂದ

ಪಡಬೇಕಿಲ್ಲ.

ಆದರೆ ಅವರ ಇಕ್ಕಟ್ಟೆಂದರೆ ಇದೇ ಜನಗಣತಿಯ ಇನ್ನೊಂದು ಅಂಕಿ-ಅಂಶದ ಪ್ರಕಾರ ಭಾರತದ 26.66 ಕೋಟಿ ಕುಟುಂಬಗಳಲ್ಲಿ 49.8ಶೇ. ಕುಟುಂಬಗಳ ಸದಸ್ಯರಿಗೆ ಶೌಚಾಲಯ ವ್ಯವಸ್ಥೆಯೆಂಬುದೇ ಇಲ್ಲ, ಅವರಿಗೇ ಬಯಲೇ ಗತಿ; 3.2 ಶೇ. ಕುಟುಂಬಗಳು ಸಾರ್ವಜನಿಕ ಶೌಚಾಲಯಗಳನ್ನು ಬಳಸುತ್ತಿವೆ; 46.9ಶೇ. ಕುಟುಂಬಗಳು ಮಾತ್ರ ಶೌಚಾಲಯ ವ್ಯವಸ್ಥೆ ಹೊಂದಿದ್ದಾರೆ.

ಮತ್ತೊಂದು ಅಂಕಿ-ಅಂಶದ ಪ್ರಕಾರ, ಕೇವಲ 32ಶೇ. ಕುಟುಂಬಗಳಿಗೆ ಬಳಕೆ ಯೋಗ್ಯ ಕುಡಿಯುವ ನೀರು ಸಿಗುತ್ತಿದೆ; ಈಗಲೂ 17 ಶೇಕಡಾ ಕುಟುಂಬಗಳು ಕಡಿಯುವ ನೀರು ಪಡೆಯಲು ಸರಾಸರಿ ಅರ್ಧ ಕಿ.ಮೀ. ದೂರ ಹೋಗಬೇಕಾಗಿದೆ, ತಮ್ಮ ಮನೆಗಳ ಬಳಿ ಅವರಿಗೆ ಸಿಗುತ್ತಿಲ್ಲ. ಇಷ್ಟೇ ಅಲ್ಲ, ಮೂರನೇ ಎರಡರಷ್ಟು ಕುಟುಂಬಗಳ ಮಹಿಳೆಯರು ಈಗಲೂ ಕಟ್ಟಿಗೆ, ಬೆರಣಿ, ಇದ್ದಿಲು ಬಳಸುವ ಒಲೆಗಳ ಮುಂದೆಯೇ ಕೂತು ಕೆಲಸ ಮಾಡಿ ತಮ್ಮ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆ.

ಒಟ್ಟಿನಲ್ಲಿ ಲಕ್ಷಾಂತರ ಕುಟುಂಬಗಳಿಗೆ ಅತ್ಯಾಧುನಿಕ ತಂತ್ರಜ್ಞಾನದ ಬಳಕೆ ಸರಕುಗಳೇನೋ ಲಭ್ಯ ಇವೆ. ಆದರೆ ಬಹುಪಾಲು ಕುಟುಂಬಗಳಿಗೆ ಬದುಕಿನ ಅತ್ಯಂತ ಮೂಲಭೂತ ಸೌಕರ್ಯಗಳೇ ಸಿಗುತ್ತಿಲ್ಲ. ಇದೀಗ ಮನಮೋಹನ ಸಿಂಗ್-ಅಹ್ಲುವಾಲಿಯಾ ನವ-ಉದಾರವಾದಿ ಧೋರಣೆಗಳ ವ್ಯವಸ್ಥೆಯ ಸಾಧನೆ!

STATEMENT OF THE OWNERSHIP ETC
The Weekly Newspaper "JANASHAKTHI KANNADA VARA PATRIKE"
Form IV
(See Rule 8)

1. Place of Publication	:	# 12, 18th Cross, S.R.Nagar, Bangalore -560 027 (Karnataka)
2. Periodicity of Publication	:	Weekly
3. Printer's Name	:	G.N.Nagaraj
(Whether Citizen of India? If Foreigner, State the Country of Origin)	:	Indian
4. Address	:	# 12, 18th Cross, S.R.Nagar, Bangalore -560 027, (Karnataka)
5. Editor's Name	:	S.Y. Gurushanth
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore -560 027, (Karnataka)
6. Name and address of Individuals who own the Newspaper and partners or Shareholders holding more than one percent of the Notal capital :		Communist Party of India(Marxist) Karnataka State Committee, # 12, 18th Cross, S.R.Nagar, Bangalore -560 027, (Karnataka)

I G.N. Nagaraj, hereby declare that the particulars given above are true to the best of my knowledge and belief.

Date : march 17, 2012
Bangalore

Sd/-
G.N.Nagaraj
Publisher

RNI No. KARKAN /2006/17926 Posted on every Satuar
Postal Reg. No. RNP/KA/BGS/2078/2010-12 Posted at MBC Bangalore G

"ಮಡೆಸ್ನಾನ–ಪಂಕ್ತಿಭೇಧ ಇವು ಮಾನವ ಘನತೆಗೆ ಮಾಡುವ ಅಪಚಾರ" – ಸಂದರ್ಶನದಲ್ಲಿ ಶ್ರೀ ನಿಡುಮಾಮಿಡಿ ಸ್ವಾಮೀಜಿ ಸ್ಪಷ್ಟ ನುಡಿ

ಮನುಷ್ಯತ್ವದ ಘನತೆಗೆ ಮಸಿ ಬಳಿಯುವ ನೀಚ ಆಚರಣೆ, ಜಾತಿ ತಾರತಮ್ಯದ, ಜಾತೀಯತೆಯ ಆಚರಣೆಯ ಕಣ್ಣು ಕುಕ್ಕುವ ಉದಾರಹರಣೆಯಾದ ಮಡೆಸ್ನಾನದ ಆಚರಣೆಯನ್ನು ನಿಷೇದಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಶ್ರೀ ನಿಡುಮಾಮಿಡಿ ಮಠವು ಮತ್ತೊಂದು ಸುತ್ತಿನ ಬೃಹತ್ ಹೋರಾಟದ ನಾಯಕತ್ವ ವಹಿಸಿದೆ. ಇದೇ ಮಾರ್ಚ್ 26 ರಂದು ಬೆಂಗಳೂರಿನಲ್ಲಿ ಬೃಹತ್ ಧರಣಿ ಏರ್ಪಡಿಸಿದೆ. 136 ಮಠಾಧೀಶರು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ನಿಡುಮಾಮಿಡಿ ಮಠದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಯರನ್ನು 'ಜನಶಕ್ತಿ' ಸಂದರ್ಶಿಸಿತು.

ಸಂದರ್ಶಕರು : ಬಿ. ರಾಜಶೇಖರಮೂರ್ತಿ

ಜನಶಕ್ತಿ: ಮಡೆ ಸ್ನಾನ – ಪಂಕ್ತಿಬೇಧ ಪದ್ಧತಿ ಬಗ್ಗೆ ತಮ್ಮ ವಿಶ್ಲೇಷಣೆ ಏನು?

ಸ್ವಾಮೀಜಿ: ಮಡೆ ಸ್ನಾನ ಎನ್ನುವುದು ಒಂದು ಅಮಾನವೀಯ ಪದ್ಧತಿ. ಇಂಥ ಹೇಯ ಪದ್ಧತಿಯನ್ನು ಕೆಲವರು ಸಂಪ್ರಾದಾಯ ಎಂದು ಧರ್ಮದ ಹೆಸರಿನಲ್ಲಿನ ಸಮರ್ಥನೆ ಮಾಡುವುದು ವಿಷಾದಕರ. ಮೇಲ್ಜಾತಿ ಜನ ಊಟ ಮಾಡಿಬಿಟ್ಟ ಎಂಜಲೆಯ ಮೇಲೆ ಹಿಂದುಳಿದ ಮತ್ತು ಕೆಳವರ್ಗದ ಜನರನ್ನು ಉರುಳಾಡಿಸುವಂತಹ ಕೆಟ್ಟ ಪದ್ಧತಿ ಖಂಡಿತ ನಿಲ್ಲಬೇಕು.

ಕೆಲವರು ಮೇಲ್ಜಾತಿ ಜನರೂ ಮಡೆಸ್ನಾನ ಪದ್ಧತಿಯನ್ನು ಆಚರಿಸುತ್ತಾರೆಂದು ಸಮರ್ಥಿಸುವ ಕಾರಣ ಹೇಳುತ್ತಾರೆ. ಇದು ಮೇಲ್ಜಾತಿ ಕೆಳಜಾತಿ ಪ್ರಶ್ನೆಯೇ ಅಲ್ಲ. ಇದು ಮಾನವ ಘನತೆಯ ಪ್ರಶ್ನೆ. ಮಾನವ ಘನತೆಯಲ್ಲಿ ನಂಬಿಕೆ ಇಟ್ಟಿರುವರೆಲ್ಲರೂ ಇದನ್ನು ವಿರೋಧಿಸಬೇಕು. ಬಡವರನ್ನು, ದುರ್ಬಲ ಜಾತಿ ಜನರನ್ನು ಅವಮಾನಿಸುವಂತಹ ಕೆಟ್ಟ ಪದ್ಧತಿಗಳು ನಿಲ್ಲಬೇಕು.

ಪಂಕ್ತಿ ಬೇಧ ಬಹಳ ಸ್ಪಷ್ಟವಾಗಿ ವರ್ಗ ಮತ್ತು ಜಾತಿ ಪದ್ಧತಿಯ ಆಚರಣೆ. ಮೇಲು ಜಾತಿಯ ಜನರಿಗೆ ಮಾತ್ರ ಒಂದು ಪಂಕ್ತಿ. ಉಳಿದವರಿಗೆಲ್ಲಾ ಒಂದು ಪದ್ಧತಿ ಎಂಬುದೇ ಬ್ರಾಹ್ಮಣೇತರ ಸಮುದಾಯವನ್ನು ಅಪಮಾನಗೊಳಿಸುವ ಸಂಗತಿ. ಸಮಾಜಕ್ಕೆ ಕೇಡು ಬಗೆಯುವ ಇಂತಹ ಆಚರಣೆಗಳು ಖಂಡಿತ ಇರಬಾರದು.


ವೀರಭದ್ರ ಚನ್ನಮಲ್ಲ ಸ್ವಾಮೀಜಿಯರನ್ನು ಸಂದರ್ಶಿಸುತ್ತಿರುವ ಬಿ. ರಾಜಶೇಖರ ಮೂರ್ತಿ

ಈ ಪಂಕ್ತಿಬೇಧ ಬ್ರಾಹ್ಮಣ ಮಠಗಳಲ್ಲದೆ ಜೈನ ಮಠಗಳಲ್ಲಿ ಹಾಗೂ ಕೆಲ ವೀರಶೈವ ಮಠಗಳಲ್ಲಿ ಆಚರಣೆಯಲ್ಲಿದೆ.

ಜನಶಕ್ತಿ: ಮೂಢನಂಬಿಕೆಗಳು ಇನ್ನೂ ಇರಲು ಕಾರಣವೇನು?

ಸ್ವಾಮೀಜಿ:- ಮುಖ್ಯವಾದ ಕಾರಣಗಳಿವು. ಮೊದಲನೆಯದು ಅನಕ್ಷರತೆ. ಎರಡನೆಯದು ವಿದ್ಯಾವಂತರ ಅಜ್ಞಾನ. ಮೂರನೇಯದು ಜನರಲ್ಲಿ ಇರುವ ಅಭದ್ರತೆ. ನಾಲ್ಕನೆಯದು ನಂಬಿಕೆಗಳ ವ್ಯಾಪಾರೀಕರಣ. ಐದನೆಯದು ಪುರೋಹಿತ ಶಾಹಿಗಳ ಸ್ವಾರ್ಥ.

ಜನಶಕ್ತಿ: ಇಂಥವುಗಳ ವಿರುದ್ಧ ಹೋರಾಟದ ಅನಿವಾರ್ಯತೆ ಏನು?

ಸ್ವಾಮೀಜಿ: ನಮ್ಮ ಸಮಾಜದಲ್ಲಿ ಪ್ರಜ್ಞಾವಂತರ ಹೋರಾಟಕ್ಕೆ ಬೇಕಾದಷ್ಟು ವಿಷಯಗಳಿವೆ. ಅವುಗಳಲ್ಲಿ ಅಮಾನವೀಯ ಪದ್ಧತಿಗಳು. ಮೂಢನಂಬಿಕೆಗಳು ಇಲ್ಲವಾಗಬೇಕೆಂಬುದು ಒಂದು ಪ್ರಮುಖ ವಿಷಯ. ಅಜ್ಞಾನದ ಕಾಲದಲ್ಲಿ ಮೂಢನಂಬಿಕೆಗಳನ್ನು ಆಶ್ರಯಿಸುತ್ತಿದ್ದುದು ಆ ಕಾಲದ ಮಿತಿ. ಇಂದಿನ ವೈಜ್ಞಾನಿಕ ಕಾಲದಲ್ಲಿ ಮೂಢನಂಬಿಕೆಗಳನ್ನು ಬೆಳೆಸುತ್ತಿರುವುದು ಪಟ್ಟಭದ್ರ ಹಿತಾಸಕ್ತಿಗಳ ಸ್ವಾರ್ಥ. ಮಾನವ ಸಮಾಜದ ವಿಕಾಸಕ್ಕೆ ಕಂಟಕವಾಗದಿರುವ ಕೆಲ ನಂಬಿಕೆಗಳಿದ್ದರೆ ತೊಂದರೆ ಏನು ಇಲ್ಲ. ಆದರೆ ಸಮಾಜಕ್ಕೆ ಕೇಡು ಬಗೆಯುವ ನಂಬಿಕೆಗಳು ಅಪಾಯಕಾರಿ. ಇಂತಹ ಕೇಡು ಬಗೆಯುವ ನಂಬಿಕೆಗಳ ವಿರುದ್ಧ ಬಹುದೊಡ್ಡ ಜನಾಂದೋಲನದ ಅಗತ್ಯವಿದೆ. ಈ ಕಾರ್ಯವನ್ನು ಕಳೆದ ಮೂರು ದಶಕಗಳಲ್ಲಿ ಸಂಘಟನೆಗಳ ಮೂಲಕವು ವ್ಯಕ್ತಿಗತವಾಗಿಯೂ ಅನೇಕರು ಹೋರಾಡುತ್ತಾ ಬಂದಿದ್ದಾರೆ. ಅದರೂ ನೀರಿಕ್ಷಿಸಿದಷ್ಟೂ ಪರಿಣಾಮ ಆಗಲಿಲ್ಲ. ಕಾರಣ ನಮ್ಮ ಹೋರಾಟಗಳು ನಿಸ್ತೇಜಗೊಳ್ಳುತ್ತಿರುವುದು. ಅಶಕ್ತಗೊಳ್ಳುತ್ತಿರುವುದು ಕೂಡದು. ಹೋರಾಟಗಳಿಲ್ಲದ ಸಮಾಜ ಬಡವಾಗುತ್ತದೆ. ಹೋರಾಟಗಳು ಒಂದು ಸಮಾಜದ ಜೀವಂತಿಕೆಯ ಸಂಕೇತ.

ಜನಶಕ್ತಿ: ಈ ಪ್ರಶ್ನೆಗಳನ್ನು ಮಠಾದೀಶರು ಎತ್ತಿಕೊಳ್ಳುವುದಕ್ಕೆ ಬೇರೆ ಬೇರೆ ಮಠಾದೀಶರ ಬೆಂಬಲ ವಿದೆಯೇ?

ಸ್ವಾಮೀಜಿ: ಯಾವುದೇ ಪ್ರಜ್ಞಾವಂತರು ಮಡೆಸ್ನಾನದಂತಹ ಕೊಳಕು ಪದ್ಧತಿಯನ್ನು ಸಮರ್ಥಿಸುವುದಿಲ್ಲ. ಮಠಾಧೀಶರಲ್ಲಿಯೂ ಎಲ್ಲರೂ ಕರ್ಮಠರೇ ಇಲ್ಲ. ಅಲ್ಲಿಯೂ ಚಿಂತನ್ ಶೀಲ ಮನಸ್ಸುಗಳಿವೆ. ಮಾನವತೆಯ ತುಡಿತಗಳನ್ನು ಹೊಂದಿರುವ ಅನೇಕರು ಈ ಅನಿಷ್ಠ ಪದ್ಧತಿಯ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ಅಮಾನವೀಯ ಪದ್ಧತಿಯನ್ನು ನಿಷೇಧ ಮಾಡಬೇಕೆಂದು ಒತ್ತಾಯಿಸಲು 131 ಮಠಾಧೀಶರು ಮತ್ತು ಸಾಧಕರು ಇದೇ 26-03-2012ರಂದು ಸೋಮವಾರ ಬೆಳಿಗ್ಗೆ 10-30ಕ್ಕೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಿಡುಮಾಮಿಡಿ ಮಹಾ ಸಂಸ್ಥಾನ ಮಠದಿಂದ ಏರ್ಪಡಿಸಿರುವ ಧರಣಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದೇ ಸಾಕ್ಷಿ. ಇದು ಬಹುಜನರ ಆತ್ಮಗೌರವವನ್ನು ಕಾಪಾಡುವಂತಹ ಕಾರ್ಯಕ್ರಮವಾಗಿದೆ.

ಜನಶಕ್ತಿ: ಮುಖ್ಯವಾಗಿ ಕರಾವ ಪ್ರದೇಶದಲ್ಲಿ ಪ್ರತಿಕ್ರಿಯೆ ಹೇಗಿದೆ?

ಸ್ವಾಮೀಜಿ: ಬೇರೆ ಬೇರೆ ಕ್ಷೇತ್ರಗಳ ಮಾಫಿಯಾಗಳು ಕೆಲಸ ಮಾಡುತ್ತಿರುವಂ ಕರಾವಳಿ ಪ್ರದೇಶವೂ ಕೂಡ ಧಾರ್ಮಿ ಮಾಫಿಯಾಗಳ ಕೈಯಲ್ಲಿದೆ. ಬಹುಪಾಲು ಜ ಈ ಧಾರ್ಮಿಕ ಮಾಫಿಯಾಗಳ ಕೈಗೆ ಸಿ ನಲುಗುತ್ತಿದ್ದಾರೆ. ಅಲ್ಲಿ ಶೋಷಣೆಗೆ ಒಳಗಾ ಜನ ಮುಕ್ತವಾಗಿ ತಮ್ಮ ಅಭಿಪ್ರಾಯವ ಹೇಳಿ ಕೊಳ್ಳಲಿಕ್ಕೂ ಸ್ವಾತಂತ್ರ್ಯವಿಲ್ಲ. ಅಷ್ಟೊಂದು ಅಸಹಾಯಕತೆ ಆವರಿಸಿದೆ. ಈ ಧಾರ್ಮಿ ಮಾಫಿಯಾದ ಕಪ್ಪು ಹಿಡಿತದಿಂದ ದುರ್ಬಲ ಜನರನ್ನು ವಿಮೋಚನೆಗೊಳಿಸಬೇಕಾಗಿದೆ.

ಜನಶಕ್ತಿ: ತಮ್ಮ ನೇತೃತ್ವದ ಹೋರಾಟಕ ಸರ್ಕಾರದ ಸ್ಪಂದನೆ ಹೇಗಿದೆ? ಮತ್ತು ಈ ಆಂದೊಲನದ ಮುಂದಿನ ಸ್ವರೂಪವೇನು ?

ಉತ್ತರ:- ಮಡೆಸ್ನಾನ ಮತ್ತು ಪಂಕ್ತಿ ಬೇಧವನ್ನು ನಿಷೇಧ ಮಾಡಿ ಎಂದು ಅನೇಕ ರೀತಿಯಲ್ಲಿ ಸರ್ಕಾರದ ಮೇಲೆ ಒತ್ತಡ ತಂದಿದ್ದೇವೆ. ನಾಡಿನ ಬಹುಪಾಲು ಪ್ರಜ್ಞಾವಂತರೆಲ್ಲರೂ ಈ ಬಗ್ಗೆ ಧ್ವನಿ ಎತ್ತಿದ್ದಾರೆ. ಸಾಮಾನ್ಯ ಜನರೂ ಇದನ್ನು ವಿರೋಧಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ ನಾಡಿನ ಜನತೆ ತುಂಬಾ ಗಂಭೀರವಾಗಿ ತೆಗೆದುಕೊಂಡ ವಿಷಯಗಳಲ್ಲಿ ಇದೂ ಒಂದು. ನಾಡಿನಾದ್ಯಂತ ಇಷ್ಟೊಂದು ತೀವ್ರ ವಿರೋಧ ಬಂದರೂ ಸರ್ಕಾರ ಮಡೆಸ್ನಾನವನ್ನು ನಿಷೇಧ ಮಾಡದಿರುವುದು ದುರದೃಷ್ಟಕರ. ಜನರ ಭಾವನೆಗಳಿಗೆ ಗೌರವ ಕೊಡಬೇಕಾದದ್ದು ಯಾವುದೇ ಪ್ರಜಾಸತ್ತಾತ್ಮಕ ಸರ್ಕಾರದ ಕರ್ತವ್ಯ. ಸರ್ಕಾರ ನಮ್ಮ ವೇದಿಕೆಯನ್ನೂ ಲಘುವಾಗಿ ತೆಗೆದುಕೊಂಡಿರುವುದು ನನ್ನಂಥವರ ಮನಸ್ಸಿಗೆ ತುಂಬಾ ನೋವಾಗಿದೆ. ಬಹು ಜನರ ಆತ್ಮಗೌರವದ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ನ್ಯಾಯವನ್ನು ಒದಗಿಸಬೇಕೆಂದೇ ಎರಡನೆಯ ಹಂತದ ಹೋರಾಟವನ್ನು ಪ್ರಾರಂಭಿಸಿದ್ದೇವೆ. ಸರ್ಕಾರ ಚಿಂತಶೀಲ ಮಠಾಧೀಶರ ಹೋರಾಟವನ್ನು ಗೌರವಿಸುತ್ತದೆ ಎಂದು ಭಾವಿಸಿದ್ದೇನೆ. ಒಂದು ವೇಳೆ ಸರ್ಕಾರ ಈ ಹೋರಾಟವನ್ನು ಉಪೇಕ್ಷೆ ಮಾಡಿದರೆ ಜನರ ಅಭಿಪ್ರಾಯದಂತೆ ಮುಂದಿನ ಕಾರ್ಯಕ್ರಮವನ್ನು ರೂಪಿಸಲಾಗುವುದು.

"ಸರ್ಕಾರ ಈ ಹೋರಾಟವನ್ನು ಉಪೇಕ್ಷಿಸಬಾರದು"

ಸ್ವಾಮೀಜಿಯವರು 26ರ ಕಾರ್ಯಕ್ರಮದ ತಯಾರಿಯಲ್ಲಿ ಪೂರ್ಣಮಗ್ನರಾಗಿದ್ದರು. ಈ ನಡುವೆಯೂ ಸಂದರ್ಶನ ನೀಡಿದ್ದಕ್ಕೆ ಧನ್ಯವಾದ ಹೇಳಿ ಹೊರಟೆ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH